Swabhimani Sahakari
Pages - 28, ₹12
Volume -13
Issue - 03
March - 2016

ಸ್ವಾಯತ್ತತೆ
ಸ್ವಯಂ ಆಡಳಿತ
ಸ್ವಯಂ ನಿಯಂತ್ರಣ
ನಮ್ಮ ಧ್ಯೇಯ

# ಸ್ವಾಭಿಮಾನಿ ಸಹಕಾರಿ

ಸೌಹಾರ್ದ ಸಹಕಾರಿ ಚಳವಳಿಯ ಅಭಿವೃದ್ಧಿಗೆ ಮೀಸಲಾಗಿರುವ ಏಕೈಕ ಮಾಸಪತ್ರಿಕೆ

## ಗ್ರಾಮ ಭಾರತಕ್ಕೆ ಹೆಚ್ಚಿನ ಒತ್ತು

ಮನೆ ಖರೀದಿಗೆ ಸಕಾಲ

ತೆರಿಗೆ ಉಳಿತಾಯಕ್ಕೆ ಪೂರಕ ಕ್ರಮ




ಸ್ಟಾರ್ಟಪ್‌ಗಳಿಗೆ ಉತ್ತೇಜನ

ಫಸಲ್ ಬಿಮಾ ಬೆಳೆ ವಿಮೆ ಯೋಜನೆ

ಗ್ರಾಮ ಸ್ವರಾಜ್ ಅಭಿಯಾನ ಯೋಜನೆ

ಕೃಷಿಗೆ ಬಂಪರ್ ಕೊಡುಗೆ




***2016–17ನೇ ಸಾಲಿನ ಬಜೆಟ್‌ನಲ್ಲಿ ಕೃಷಿ, ಹಳ್ಳಿಗಳಿಗೆ ಮೂಲ ಸೌಕರ್ಯ, ಆರೋಗ್ಯ, ಉದ್ಯೋಗ ಸೃಷ್ಟಿ ಹಾಗೂ ದಲಿತ ಉದ್ಯಮಿಗಳಿಗೆ ಪ್ರೋತ್ಸಾಹ ನೀಡಲು ಆದ್ಯತೆ ನೀಡಲಾಗಿದೆ. ಒಟ್ಟಾರೆಯಾಗಿ ದೇಶದ ಸಾಮಾನ್ಯ ಜನರ ಜೀವನದಲ್ಲಿ ಗುಣ ಮಟ್ಟದ ಬದಲಾವಣೆ ತರಲು ಬಜೆಟ್ ಪೂರಕವಾಗಿದೆ***



▶▶ ಸೌಹಾರ್ದ ಸಹಕಾರಿಗಳ ಸಂಖ್ಯೆ : 3530 ▶▶ 'ಇ' ಸ್ಟಾಂಪಿಂಗ್ ಕೇಂದ್ರಗಳ ಸಂಖ್ಯೆ : 887



> ಹಳೆಯ ಸಾಂಪ್ರದಾಯಿಕ ಚಟುವಟಿಕೆಗಳಿಗೆ ಅಂಟಿಕೊಳ್ಳದೆ ಇಂದಿನ ಖಾಸಗೀಕರಣ, ಉದಾರೀಕರಣ ಹಾಗೂ ಜಾಗತೀಕರಣಗಳ ಪೈಪೋಟಿ ಅರ್ಥವ್ಯವಸ್ಥೆಯಲ್ಲಿ ಎಲ್ಲಾ ವ್ಯವಸ್ಥೆಯವರೊಡನೆ ಒಂದಾಗಿ ಗುರುತಿಸಿಕೊಂಡು ರಾಜ್ಯದ ಸಹಕಾರಿ ಕ್ಷೇತ್ರದ ಮುಖ್ಯವಾಹಿನಿಯಲ್ಲಿ ವಿವಿಧ ರೀತಿಯ ಚಟುವಟಿಕೆಗಳನ್ನು ಮಾಡುತ್ತಾ ಉತ್ತಮವಾಗಿ ಕಾರ್ಯನಿರ್ವಹಿಸುತ್ತಿವೆ ಎಂಬುದು ಗಮನಾರ್ಹ. ರಾಜ್ಯದಲ್ಲಿ ಸಹಕಾರಿಗಳು ಗುರುತಿಸಿದ್ದಾರೆ.

## ಸೌಹಾರ್ದ ಸಹಕಾರಿ ಕ್ಷೇತ್ರದ ಅಭಿವೃದ್ಧಿಗೆ, ಸಂಯುಕ್ತ ಸಹಕಾರಿಯ ಸಾಧನೆಗಳಿಗೆ ರಾಜ್ಯದ ಸೌಹಾರ್ದ ಸಹಕಾರಿಗಳ ಬೆಂಬಲ ಹಾಗೂ ಪ್ರೋತ್ಸಾಹಗಳೇ ಅಡಿಪಾಯ

ರಾಜ್ಯದ ಎಲ್ಲಾ ಸೌಹಾರ್ದ ಸಹಕಾರಿಗಳಿಗೆ ಶಿವರಾತ್ರಿಯ, ಹೋಳಿ ಹಬ್ಬದ ಹಾಗೂ ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆಯ ಹಾರ್ದಿಕ ಶುಭಾಷಯಗಳು. ಶಿವ ಪರಮಾತ್ಮನ ಅನುಗ್ರಹದಿಂದ ನಮ್ಮಲ್ಲಿ ಅಡಗಿರುವ ದುಷ್ಟಶಕ್ತಿಗಳು ನಶಿಸಿ, ಸದಾಕಾಲ ಸುಖ, ಶಾಂತಿ ಹಾಗೂ ನೆಮ್ಮದಿಗಳು ದೊರಕುವಂತಾಗಲಿ, ಎಲ್ಲರೂ ಅಭಿವೃದ್ಧಿ ಪಥದತ್ತ ಸಾಗುವಂತಾಗಲಿ ಎಂದು ಅಪೇಕ್ಷಿಸುತ್ತೇನೆ.

ಆತ್ಮೀಯ ಸಹಕಾರಿ ಬಂಧುಗಳೇ, 2011–12 ರಿಂದ 2015–16ರ ವರೆಗಿನ 5 ವರ್ಷಗಳು ಸಂಯುಕ್ತ ಸಹಕಾರಿಯ ನೇತೃತ್ವದಲ್ಲಿ ರಾಜ್ಯದ ಸೌಹಾರ್ದ ಸಹಕಾರಿಯ ಕ್ಷೇತ್ರದಲ್ಲಿ ಅದ್ವಿತೀಯ ಸಾಧನೆಯಾಗಿದೆ. 2001ರಲ್ಲಿ ಸೌಹಾರ್ದ ಸಹಕಾರಿ ಕಾಯ್ದೆ ಜಾರಿಗೆ ಬಂದ ನಂತರ 50 ಸೌಹಾರ್ದ ಸಹಕಾರಿಗಳು ನೋಂದಣಿಯಾದ ನಂತರ 2002ರಲ್ಲಿ ಸೌಹಾರ್ದ ಸಹಕಾರಿ ಕಾಯ್ದೆಗನುಗುಣವಾಗಿ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನೋಂದಣಿಯಾಗಿ ಕಾರ್ಯಾರಂಭ ಮಾಡಿರುವುದು ತಮಗೆಲ್ಲ ತಿಳಿದ ವಿಷಯ.

ರಾಜ್ಯದ ಸೌಹಾರ್ದ ಸಹಕಾರಿ ಚಳುವಳಿಯ ಬೆಳವಣಿಗೆ ಹಾಗೂ ಕಾರ್ಯಚಟುವಟಿಕೆಗಳತ್ತ ಗಮನ ಹರಿಸಿದರೆ 1ನೇ ಅವಧಿಯ 5 ವರ್ಷಗಳ ಅಂತ್ಯಕ್ಕೆ 610 ಸೌಹಾರ್ದ ಸಹಕಾರಿಗಳು, 2ನೇ ಅವಧಿಯ 5 ವರ್ಷಗಳ ಅಂತ್ಯಕ್ಕೆ 1654 ಹಾಗೂ ಪ್ರಸಕ್ತ 3ನೇ ಅವಧಿಯ 5 ವರ್ಷಗಳ ಅಂತ್ಯಕ್ಕೆ 3530. ಈ ಕ್ಷೇತ್ರದಲ್ಲಿ ಶೇರು ಬಂಡವಾಳ ರೂ.550 ಕೋಟಿ, ಠೇವಣಿಗಳು ರೂ.11,000 ಕೋಟಿ, ದುಡಿಯುವ ಬಂಡವಾಳ ರೂ.12,500 ಕೋಟಿ, ಸಾಲ ನೀಡಿಕೆ ರೂ.7,500 ಕೋಟಿ, ಲಾಭ ರೂ.175 ಕೋಟಿ, ಉದ್ಯೋಗ 50,000. ಈ ಸಾಧನೆ ಹಾಗೂ ವೇಗದ ಬೆಳವಣಿಗೆ ತೃಪ್ತಿದಾಯಕ ಎಂದು ಹೇಳಬಹುದು.

ಸೌಹಾರ್ದ ಸಹಕಾರಿಗಳು ಸಂಖ್ಯಾತ್ಮಕವಾಗಿ ಬೆಳೆಯುವುದರ ಜೊತೆಗೆ ಗುಣಾತ್ಮಕವಾಗಿಯೂ ಬೆಳೆದಿವೆ. ಸೌಹಾರ್ದ ಸಹಕಾರಿಗಳ ಕಾರ್ಯನಿರ್ವಹಣೆ ರಾಜ್ಯದ ಸಹಕಾರಿ ಕ್ಷೇತ್ರದಲ್ಲಿ ಒಂದು ಹೊಸ ಅಲೆಯನ್ನು ಸೃಷ್ಟಿಸಿದೆ. ಹಳೆಯ ಸಾಂಪ್ರದಾಯಿಕ ಚಟುವಟಿಕೆಗಳಿಗೆ ಅಂಟಿಕೊಳ್ಳದೆ ಇಂದಿನ ಖಾಸಗೀಕರಣ, ಉದಾರೀಕರಣ ಹಾಗೂ ಜಾಗತೀಕರಣಗಳ ಪೈಪೋಟಿ ಅರ್ಥವ್ಯವಸ್ಥೆಯಲ್ಲಿ ಎಲ್ಲಾ ವ್ಯವಸ್ಥೆಯವರೊಡನೆ ಒಂದಾಗಿ ಗುರುತಿಸಿಕೊಂಡು ರಾಜ್ಯದ ಸಹಕಾರಿ ಕ್ಷೇತ್ರದ ಮುಖ್ಯವಾಹಿನಿಯಲ್ಲಿ ವಿವಿಧ ರೀತಿಯ ಚಟುವಟಿಕೆಗಳನ್ನು ಮಾಡುತ್ತಾ ಉತ್ತಮವಾಗಿ ಕಾರ್ಯನಿರ್ವಹಿಸುತ್ತಿವೆ ಎಂಬುದು ಗಮನಾರ್ಹ. ರಾಜ್ಯದಲ್ಲಿ ಸಹಕಾರಿಗಳು ಗುರುತಿಸಿದ್ದಾರೆ. ಸಂಯುಕ್ತ ಸಹಕಾರಿಯ ಶಾಸನಬದ್ಧ ಕಾರ್ಯನಿರ್ವಹಣೆ ಹಾಗೂ ಶಿಸ್ತುಬದ್ಧ ಗುಣಮಟ್ಟದ ತರಬೇತಿ ಹಾಗೂ ಪ್ರಚಾರ ಕಾರ್ಯಕ್ರಮಗಳ ಜೊತೆಗೆ ಸರಕಾರದ ಮನ್ನಣೆ, ಪ್ರೋತ್ಸಾಹ, ಸಹಕಾರಿಗಳ ಸಹಕಾರ ಹಾಗೂ ಬೆಂಬಲ ದೊರೆತಿರುವುದು ನಮಗೆ ವರದಾನವಾಗಿದೆ.

ಸಂಯುಕ್ತ ಸಹಕಾರಿಯ ನೇತೃತ್ವದಲ್ಲಿ ಈ ಕ್ಷೇತ್ರದ ಅಭಿವೃದ್ಧಿಗಾಗಿ ಅಸಂಖ್ಯಾತ ಕಾರ್ಯಕ್ರಮಗಳು ನಡೆದಿವೆ. ಇವೆಲ್ಲವುಗಳಿಗೆ ರಾಜ್ಯದ ಎಲ್ಲಾ ಸೌಹಾರ್ದ ಸಹಕಾರಿಗಳ ಬೆಂಬಲ ಹಾಗೂ ಪ್ರೋತ್ಸಾಹಗಳೇ ನಮಗೆ ಶ್ರೀರಕ್ಷೆ. ಈ ಸಹಕಾರ ಹಾಗೂ ಬೆಂಬಲಗಳು ನಿರಂತರವಾಗಿ ಮುಂದುವರೆಯಲಿ ಎಂದು ಆಶಿಸುತ್ತೇನೆ.

**ಗುರುನಾಥ ಜಾಂತಿಕರ,** ಅಧ್ಯಕ್ಷರು

ಸ್ವಾಭಿಮಾನಿ ಸಹಕಾರಿ ಸಂಪಾದಕ ಮಂಡಳಿ

ಶ್ರೀ ಗುರುನಾಥ ಜಾಂತಿಕರ
ಗೌರವ ಅಧ್ಯಕ್ಷರು

ಶ್ರೀ ಹೆಚ್.ವಿ.ರಾಜೀವ
ಗೌರವ ಉಪಾಧ್ಯಕ್ಷರು

ಶ್ರೀ ಎಸ್.ಆರ್.ಸತೀಶಚಂದ್ರ
ಗೌರವ ಸದಸ್ಯರು

ಶ್ರೀ ಶರಣಗೌಡ ಜಿ. ಪಾಟೀಲ್
ಸಂಪಾದಕರು

ಶ್ರೀ ವಿ.ಜೆ.ಕಾರಕೂನ
ಸಂಚಾಲಕರು

ಶ್ರೀ ರಘುನಂದನ ಕೆ.
ಸದಸ್ಯರು

ಒಳ ಪುಟಗಳಲ್ಲಿ . . .

ಜ್ಞಾನ ಜ್ಯೋತಿ ........ 4
2016–17ನೇ ಸಾಲಿನ ಕೇಂದ್ರ ಬಜೆಟ್ ........ 5
ಚುನಾವಣಾ ಪ್ರಾಧಿಕಾರದ ಸುತ್ತೋಲೆ ........ 6–7
ಸಂಯುಕ್ತ ಸಹಕಾರಿಯ ಸಾಧನೆಗಳ ಸಿಂಹಾವಲೋಕನ........8–15
ಅಭಿವೃದ್ಧಿ ಯೋಜನೆ ಕುರಿತು ತರಬೇತಿ ಕಾರ್ಯಕ್ರಮ........ 16
ಮುಖ್ಯಕಾರ್ಯನಿರ್ವಾಹಕರುಗಳಿಗಾಗಿಅವಲೋಕನ ಸಭೆ........18
ಕಡ್ಡಾಯ ಆಡಿಟ್ ನಿರ್ವಹಣೆಯು ಸಹಕಾರಿ ಸಂಸ್ಥೆಗಳ ಜವಾಬ್ದಾರಿ........19
ಫೆಬ್ರವರಿ 2016ರಲ್ಲಿ ಸಂಯುಕ್ತ ಸಹಕಾರಿಯ ಶಾಸನ ಬದ್ಧ ಕಾರ್ಯಚಟುವಟಿಕೆಗಳು........20
ಅಧ್ಯಕ್ಷರು ಮತ್ತು ಉಪಾಧ್ಯಕ್ಷರುಗಳ ಆಯ್ಕೆ........21
ನಿಮ್ಮ ಪ್ರಶ್ನೆ ನಮ್ಮ ಉತ್ತರ ........23
ಮಹಿಳಾ ಸಹಕಾರಿಗಳಿಗೆ ಸಾಧನೆಯ ಸುವರ್ಣ ಅವಕಾಶ........24
ಸಹಕಾರಿ ಕ್ಷೇತ್ರದಲ್ಲಿ ಕೌಶಲ್ಯಾಭಿವೃದ್ಧಿಯ ಅಗತ್ಯತೆ........26
RBI NEWS - FEBRUARY 2016........27-28

# ಸಂಪಾದಕೀಯ

## ಸೌಹಾರ್ದ ಸಹಕಾರಿಗಳಿಗೆ ಚುನಾವಣೆ : ಮುಖ್ಯ ಕಾರ್ಯನಿರ್ವಾಹಕರಿಗೆ ಪಾರದರ್ಶಕ ಪಾತ್ರ ನಿರ್ವಹಣೆ ಹಾಗೂ ಚುನಾಯಿತರಾಗುವ ನೂತನ ಆಡಳಿತ ಮಂಡಳಿಗೆ ಬದ್ಧತೆ ಹಾಗೂ ಪ್ರಾಮಾಣಿಕ ಸೇವೆಯ ಪ್ರಮಾಣ ವಚನ ಸಹಕಾರಿ ಕ್ಷೇತ್ರದ ಅಭಿವೃದ್ಧಿಗೆ ಮಾದರಿ

ರಾಜ್ಯದ ಬಹುತೇಕ ಸೌಹಾರ್ದ ಸಹಕಾರಿಗಳಿಗೆ ಚುನಾವಣೆಗಳು ನಡೆಯುವ ಈ ಸಂದರ್ಭದಲ್ಲಿ ಸೌಹಾರ್ದ ಸಹಕಾರಿಗಳ ಮುಖ್ಯ ಕಾರ್ಯನಿರ್ವಾಹಕರ ಪಾತ್ರ ಅತ್ಯಂತ ಮಹತ್ವದ್ದೆಂದು ವಿಶ್ಲೇಷಿಸಲಾಗಿದೆ. ಸಹಕಾರಿಯ ಮತದಾರರ ಪಟ್ಟಿ ಸಿದ್ಧಪಡಿಸುವಿಕೆ, ಮತದಾರರಿಗೆ ಗುರುತಿನ ಚೀಟಿ ವಿತರಿಸುವಿಕೆ ಚುನಾವಣಾ ಪ್ರಕ್ರಿಯೆ ಮುಗಿಯುವವರೆಗೂ ಚುನಾವಣಾ ವ್ಯವಸ್ಥೆಗಳನ್ನು ಅಚ್ಚುಕಟ್ಟಾಗಿ ನಿರ್ವಹಿಸುವಲ್ಲಿ ಮುಖ್ಯ ಕಾರ್ಯನಿರ್ವಾಹಕರುಗಳು ನಿಷ್ಠೆ, ದಕ್ಷತೆ ಹಾಗೂ ಪ್ರಾಮಾಣಿಕತೆ ಮತ್ತು ಪಾರದರ್ಶಕತೆಯಿಂದ ಕಾರ್ಯನಿರ್ವಹಿಸುವುದು ಅಗತ್ಯ.

ಅದೇ ರೀತಿ ಚುನಾಯಿತ ನೂತನ ಆಡಳಿತ ಮಂಡಲಿಯವರು ಸಹಕಾರಿಯ ಆಡಳಿತ ಸೂತ್ರವನ್ನು ಹಿಡಿಯುವವರು ಸಹಕಾರಿಯ ಕಾರ್ಯಚಟುವಟಿಕೆಗಳ ಬಗ್ಗೆ ಹೆಚ್ಚಿನ ಜ್ಞಾನವನ್ನು ಪಡೆದುಕೊಳ್ಳುವ ಪ್ರಯತ್ನ, ಕಾರ್ಯಕ್ರಮಗಳಿಗೆ ಬದ್ಧತೆ, ನಿಷ್ಠೆ ಹಾಗೂ ಪ್ರಾಮಾಣಿಕತೆ ಯಿಂದ ಸೇವೆ ಸಲ್ಲಿಸುವ ಬಗ್ಗೆ ಪ್ರಮಾಣವಚನ ಸ್ವೀಕರಿಸುವುದು ಸಹಕಾರಿ ಕ್ಷೇತ್ರದ ಅಭಿವೃದ್ಧಿಗೆ ಮಾದರಿ. ಆಡಳಿತ ಮಂಡಲಿಯವರು ಹೆಚ್ಚು ಕ್ರಿಯಾಶೀಲರಾಗಿ ಪರಿಣಿತಿಯಿಂದ, ವೃತ್ತಿಪರತೆಯಿಂದ, ಪಾರದರ್ಶಕವಾಗಿ ಕಾರ್ಯನಿರ್ವಹಿಸುವ ಅಗತ್ಯತೆಯಿರುವುದರಿಂದ ಈ ರೀತಿಯ ಪ್ರಮಾಣ ವಚನ ಕಾರ್ಯ ಹಮ್ಮಿಕೊಳ್ಳುವುದು ಅಗತ್ಯ. ಸೌಹಾರ್ದ ಸಹಕಾರಿ ಕ್ಷೇತ್ರದಲ್ಲಿ ಕಾರ್ಯನಿರ್ವಹಿಸುತ್ತಿರುವ ಎಲ್ಲ ಸಹಕಾರಿಗಳು ಹಾಗೂ ಮುಖ್ಯ ಕಾರ್ಯನಿರ್ವಾಹಕರು ಈ ಬಗ್ಗೆ ಕ್ರಮವಿಡುವಿರಾಗಿ ಸಂಯುಕ್ತ ಸಹಕಾರಿಯು ಅಪೇಕ್ಷಿಸುತ್ತದೆ. ಈ ಬಗ್ಗೆ ಸೌಹಾರ್ದ ಸಹಕಾರಿಗಳ ಸಲಹೆ ಹಾಗೂ ಮಾರ್ಗದರ್ಶನಗಳನ್ನು ಸ್ವಾಗತಿಸುತ್ತದೆ. ■

**ಮಾರ್ಚ್ 3 ಅಥವಾ 4ನೇ ವಾರದಲ್ಲಿ ಪ್ರತ್ಯೇಕ ನ್ಯಾಯಾಲಯ ಕಾರ್ಯಾರಂಭ**

ಸೌಹಾರ್ದ ಸಹಕಾರಿಗಳು ತಮ್ಮ ವ್ಯಾಜ್ಯಗಳ ಪರಿಹಾರಕ್ಕಾಗಿ ಸರ್ಕಾರವು ಮಂಜೂರು ಮಾಡಿರುವ ಸೌಹಾರ್ದ ಸಹಕಾರಿಗಳ ಪ್ರತ್ಯೇಕ ಸೌಹಾರ್ದ ಸಹಕಾರಿಗಳ ನ್ಯಾಯಾಲಯವು ಮಾರ್ಚ್ 3 ಅಥವಾ 4ನೇ ವಾರದಲ್ಲಿ ಕಾರ್ಯಾರಂಭಗೊಳ್ಳಲು ಸಕಲ ಸಿದ್ಧತೆಯನ್ನು ಮಾಡಲಾಗಿದೆ ಎಂಬುದನ್ನು ಸೌಹಾರ್ದ ಸಹಕಾರಿಗಳ ಮಾಹಿತಿಗಾಗಿ ಪ್ರಕಟಿಸಲಾಗಿದೆ.

## ಭಕ್ತಿಯ ಪ್ರಯೋಜನಗಳು

'ಭಕ್ತಿಯೋಗ' ಗುರು ಶಿಷ್ಯರ ಮಧ್ಯೆ ನಡೆದ ಬೋಧ ಪ್ರವಾಹ. ಸಿದ್ಧಃ ಭವತಿ, ಅಮೃತಃ ಭವತಿ. ಇದು ಗುರು ಶಿಷ್ಯನಿಗೆ ಹೇಳಿದ ಉಪದೇಶ. ಭಕ್ತ ಮತ್ತು ಭಕ್ತನಲ್ಲದವನ ಬದುಕು ಹೇಗಿರುತ್ತದೆ? ಭಕ್ತಿರಸವನ್ನು ತುಂಬಿದಾಗ ವ್ಯಕ್ತಿಯ ಬದುಕು ಹೇಗಿರುತ್ತದೆ? ಭಕ್ತನಾದವನು ಹೇಗೆ ವಿಚಾರ ಮಾಡುತ್ತಾನೆ? ಹೇಗೆ ಕಾರ್ಯ ಮಾಡುತ್ತಾನೆ? ಆತನ ದೃಷ್ಟಿಕೋನ ಹೇಗೆ ಬದಲಾಗುತ್ತದೆ? ಶಿಷ್ಯನ ಈ ಎಲ್ಲಾ ಪ್ರಶ್ನೆಗಳಿಗೆ ಗುರುಗಳು ಉತ್ತರಿಸುತ್ತಾ ಬಂದರು.




ಭಕ್ತಿ ಉಳ್ಳವ ಭಕ್ತ. ಭಕ್ತಿ ಎಂಬುದು ಪರಮ ಪ್ರೇಮ. ಶ್ರೇಷ್ಠವಾದದು, ಇತಿಮಿತಿಗಳನ್ನು ಕಳೆದುಕೊಂಡು ಅಪ್ರತಿಮ ಪ್ರೇಮ. ಎರಡು ವಸ್ತುಗಳನ್ನು ಹೋಲಿಸುತ್ತೇವೆ. ವಸ್ತುವಿನ ಪ್ರೇಮವನ್ನು ಹೋಲಿಸಬಹುದು, ತೂಗಬಹುದು. ಯಾವಾಗ ಪ್ರೇಮ ಪರಮಪ್ರೇಮ ಆಗುತ್ತದೆ, ಆಗ ಅಳೆಯುವುದಕ್ಕೆ ತೂಗುವುದಕ್ಕೆ ಆಗುವುದಿಲ್ಲ. ಅದು ಅನುಪಮ. ಹೋಲಿಕೆ ಮಾಡುವುದಕ್ಕೆ ಬರುವುದಿಲ್ಲ. ಒಂದು ಮನೆಯನ್ನು ಇನ್ನೊಂದು ಮನೆಗೆ ಹೋಲಿಸುತ್ತೇವೆ. ಆ ಮನೆಗಿಂತ ಈ ಮನೆ ಚೆಂದ, ಈ ಮನೆಗಿಂತ ಆ ಮನೆ ದೊಡ್ಡದು ಎಂದು ಹೇಳುತ್ತೇವೆ. ಅಳೆಯುವುದಕ್ಕೆ ಎಲ್ಲಿ ಸಾಧ್ಯವಿದೆಯೋ, ಅಲ್ಲಿ ಹೋಲಿಸಲು ಸಾಧ್ಯವಿದೆ. ಈಗ ಎರಡು ಸಂಖ್ಯೆಗಳಿವೆ ಎಂದರೆ ಎಣಿಸುವುದಕ್ಕೆ ಬರುತ್ತದೆ. 200, 100ಕ್ಕಿಂತ ಹೆಚ್ಚು, 300ಕ್ಕಿಂತ ಕಡಿಮೆ ಇದೆ. ಹೀಗೆ ಸಂಖ್ಯೆಗಳೆಲ್ಲವನ್ನೂ ಹೋಲಿಸುವುದಕ್ಕೆ ಸಾಧ್ಯವಿದೆ.

ಇನ್ನೊಂದು ಅನಂತ, ಇದನ್ನು ಎಣಿಸುವುದಕ್ಕೆ ಬರುವುದಿಲ್ಲ, ಹೋಲಿಸುವುದಕ್ಕೆ ಸಾಧ್ಯವಿಲ್ಲ. ಅನಂತ ಅನಂತವೇ. ಅದು ಅನುಪಮ, ಅಪ್ರತಿಮ ಪರಮಪ್ರೇಮ. ಅನಂತತೆಗೆ ಅನುಪಮ ಬಂದದ್ದು ಹೇಗೆ? ಭಗವಂತನೇ ವಸ್ತು ಎಂದರೆ ಭಗವಂತನನ್ನು ಯಾವುದಕ್ಕೆ ಹೋಲಿಸುತ್ತೇವೆ? ವ್ಯಕ್ತಿಗಳನ್ನು ಹೋಲಿಸಬಹುದು. ಭಗವಂತ ಸಣ್ಣವನೂ ಅಲ್ಲ, ದೊಡ್ಡವನೂ ಅಲ್ಲ ಯಾರಿಗೆ ಹೋಲಿಸುವುದು? ಯಾವುದಕ್ಕೆ ಹೋಲಿಸುವುದು? ಹೋಲಿಸುವುದಕ್ಕೆ ಬರುವುದಿಲ್ಲ. ಒಂದು ವೇಳೆ ಆ ದೇವರು ಈ ದೇವರಿಗಿಂತ ದೊಡ್ಡದು. ಇದು ಚಿಕ್ಕದು ಎಂದು ಮಿತಿಗೊಳಿಸಿದರೆ ಅದು ದೇವರಲ್ಲ. ನಮ್ಮ ದೃಷ್ಟಿಯಲ್ಲಿ ಭೇದವಿದೆ. ನಾವು ಒಂದು ದೇವತೆಯನ್ನು ಆರಾಧಿಸುತ್ತಿದ್ದರೆ ಆ ದೇವರು ದೊಡ್ಡವ ಎಂದು ಅನಿಸುತ್ತದೆ. ಇದೇ ಭಾವ ಇನ್ನೊಂದು ದೇವರನ್ನೂ ಆರಾಧಿಸುವವನಿಗೂ ಅನಿಸುತ್ತದೆ. ಆದರೆ ದೊಡ್ಡವನೇ? ಅಲ್ಲ! ಸಣ್ಣವನೇ? ಅಲ್ಲ!

ಮನುಷ್ಯನಿಗೆ ಏಕೆ ಭಯ ಇರುತ್ತದೆ? ವಸ್ತು ಇದ್ದರೆ, ಅದು ಬಿಟ್ಟು ಹೋಗುತ್ತದೆ ಅಂದರೆ ಭಯವಾಗುತ್ತದೆ. ಅಗಲಿಕೆ, ನಾಶ ಮತ್ತು ಸಾವು ಈ ಮೂರು ಭಯಕ್ಕೆ ಕಾರಣ. ಭಕ್ತನಾದಾಗ ಈ ಭಯ ದೂರವಾಗುತ್ತದೆ. ಭಕ್ತ ಭಯವನ್ನು ಮೀರುತ್ತಾನೆ.

ಭಕ್ತಿ ರಸವನ್ನು ಅನುಭವಿಸಿದವನು ಸದಾ ತೃಪ್ತನಾಗಿರುತ್ತಾನೆ. ಯಾವುದು ಇದೆ, ಅದನ್ನು ಪ್ರೀತಿಸುತ್ತಾನೆ. ತೃಪ್ತ ಭಾವನೆ ಅನುಭವಿಸುತ್ತಾನೆ. ಇನ್ನೊಂದಕ್ಕೆ ಹೋಲಿಸಿ ಅತೃಪ್ತನಾಗುವುದಿಲ್ಲ.


## ಸಂಯುಕ್ತ ಸಹಕಾರಿಯ ಹಾಗೂ ಸೌಹಾರ್ದ ಸಹಕಾರಿ ಚಳುವಳಿ ಅಧ್ಯಯನಕ್ಕಾಗಿ ಭೇಟಿ

ಇನ್ಸ್‌ಟ್ಯೂಟ್ ಆಫ್ ಕೋ–ಆಪರೇಟಿವ್ ಮ್ಯಾನೇಜ್‌ಮೆಂಟ್, ತಿರುವನಂತಪುರದ ಹೈಯರ್ ಡಿಪ್ಲೋಮಾ ಇನ್ ಕೋ–ಆಪರೇಟಿವ್ ಮ್ಯಾನೇಜ್‌ಮೆಂಟ್‌ನ 35 ಅಭ್ಯರ್ಥಿಗಳು ಸಂಯುಕ್ತ ಸಹಕಾರಿಯ ಹಾಗೂ ಸೌಹಾರ್ದ ಸಹಕಾರಿ ಕಾರ್ಯಚಟುವಟಿಕೆಗಳ ಬಗ್ಗೆ ಅಧ್ಯಯನ ಮಾಡಲು ದಿನಾಂಕ 29.02.2016ರಂದು ಸಂಯುಕ್ತ ಸಹಕಾರಿಯ ಕೇಂದ್ರ ಕಛೇರಿಗೆ ಭೇಟಿ ನೀಡಿದರು. ಅವರ ಜೊತೆಯಲ್ಲಿ ಪ್ರಾಧ್ಯಾಪಕರಾದ ಶ್ರೀ ಬಾಬುರವರು ಉಪಸ್ಥಿತರಿದ್ದರು. ಸಂಯುಕ್ತ ಸಹಕಾರಿಯ ಹಾಗೂ ಸೌಹಾರ್ದ ಸಹಕಾರಿ ಕ್ಷೇತ್ರದ ಕಾರ್ಯಚಟುವಟಿಕೆಗಳ ಮಾಹಿತಿಯನ್ನು ಸಂಯುಕ್ತ ಸಹಕಾರಿಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲ್‌ರವರು ನೀಡಿದರು. ಸೌಹಾರ್ದ ಸಹಕಾರಿ ಕ್ಷೇತ್ರದ ಸಮಗ್ರ ಮಾಹಿತಿ ನೀಡುವ ಸಾಕ್ಷ್ಯಚಿತ್ರವನ್ನು ಪ್ರದರ್ಶಿಸಲಾಯಿತು. ಸಂಯುಕ್ತ ಸಹಕಾರಿಯ ಎಲ್ಲಾ ಅಧಿಕಾರಿಗಳು ಉಪಸ್ಥಿತರಿದ್ದರು.




ಕೊನೆಯಲ್ಲಿ ಮಾತನಾಡಿದ ಕೆ.ಐ.ಎಂ. ತಿರುವನಂತಪುರದ ಅಧ್ಯಾಪಕರಾದ, ಶ್ರೀ ವಿ. ಬಾಬುರವರು, ಇದೊಂದು ಉತ್ತಮ ವ್ಯವಸ್ಥೆಯಾಗಿ ಬೆಳೆಯುತ್ತಿರುವುದು, ಇಡೀ ದೇಶದಲ್ಲೇ ಮಾದರಿಯಾಗಿರುವುದು ಅನುಕರಣೀಯ ಎಂದು ತಿಳಿಸಿದರು.

# ಈ ಬಾರಿಯ ಬಜೆಟ್ ಬಡವರ ಅಭಿವೃದ್ಧಿಯ ಬ್ಲ್ಯೂಪ್ರಿಂಟ್ : ಪ್ರಧಾನಿ ಮೋದಿ ಪ್ರಶಂಸೆ




**ನವದೆಹಲಿ :** ವಿತ್ತ ಸಚಿವ ಅರುಣ್ ಜೇಟ್ಲಿ ಅವರು ಪ್ರಸಕ್ತ ಸಾಲಿನ ಕೇಂದ್ರ ಬಜೆಟ್ ಮಂಡಿಸಿರುವುದನ್ನು ಪ್ರಧಾನಮಂತ್ರಿ ನರೇಂದ್ರ ಮೋದಿಯವರು ಪ್ರಶಂಸಿದ್ದಾರೆ. ಕೇಂದ್ರ ಬಜೆಟ್ ಕುರಿತಂತೆ ಪ್ರತಿಕ್ರಿಯೆ ನೀಡಿರುವ ಅವರು, ಜೇಟ್ಲಿ ಅವರು ಬಹಳ ದೂರದೃಷ್ಟಿಯಿಂದ ಬಜೆಟ್'ನ್ನು ಮಂಡಿಸಿದ್ದಾರೆ. ಇದೊಂದು ಜನಪರ ಬಡೆಟ್ ಆಗಿದೆ ಎಂದು ಹೇಳಿದ್ದಾರೆ.

ಈ ಬಾರಿಯ ಬಜೆಟ್‌ನಲ್ಲಿ ಗ್ರಾಮೀಣಾಭಿವೃದ್ಧಿಗೆ ಹೆಚ್ಚು ಒತ್ತು ನೀಡಲಾಗಿದೆ. ದೇಶದ ರೈತರಿಗೆ, ಕೆಳವರ್ಗದ ಜನರಿಗೆ ಹೆಚ್ಚು ಅನುಕೂಲವಾಗಲಿದೆ. 2019ರ ವೇಳೆಗೆ ದೇಶದ ಎಲ್ಲಾ ಗ್ರಾಮಗಳಿಗೆ ರಸ್ತೆ ಸಂಪರ್ಕವನ್ನು ಒದಗಿಸಲಾಗುತ್ತದೆ.

ನೀರಾವರಿ ಕ್ಷೇತ್ರದ ಅಭಿವೃದ್ಧಿಗೂ ಬಜೆಟ್‌ನಲ್ಲಿ ಹೆಚ್ಚು ಒತ್ತು ನೀಡಲಾಗಿದ್ದು, ಪ್ರತಿ ಕೃಷಿ ಭೂಮಿಗೂ ನೀರಾವರಿ ಸೌಲಭ್ಯ ಸಿಗುವಂತೆ ಕ್ರಮಕೈಗೊಳ್ಳಲಾಗಿದೆ. ಸ್ವಂತ ಮನೆ ಕಟ್ಟುವವರಿಗೆ ಬಜೆಟ್‌ನಿಂದ ಅನುಕೂಲಕರವಾಗುತ್ತದೆ. ಅಲ್ಲದೆ, ಸರ್ಕಾರ ರೈತರ ಆದಾಯವನ್ನು ದ್ವಿಗುಣಗೊಳಿಸಲು ಕೈಗೊಂಡಿದ್ದು, ಒಂದು ರೀತಿಯಲ್ಲಿ ಹೇಳಬೇಕಾದರೆ ಈ ಬಜೆಟ್ ಬಡವರ ಅಭಿವೃದ್ಧಿಯ ಬ್ಲ್ಯೂಪ್ರಿಂಟ್ ಆಗಿದೆ ಎಂದು ಹೇಳಿದ್ದಾರೆ.

**ಹಣಕಾಸಿನ ದೃಷ್ಟಿಯಿಂದ ವಿವೇಕಯುತವಾದ ಬಜೆಟ್ :** ಅಧಿಕಾರಕ್ಕೆ ಬಂದು ಎರಡು ವರ್ಷಗಳನ್ನು ಪೂರ್ಣಗೊಳಿಸುತ್ತಿರುವ ನರೇಂದ್ರ ಮೋದಿ ಸರ್ಕಾರ ಭಾರತೀಯ ಅರ್ಥ ವ್ಯವಸ್ಥೆಯ ವಾಸ್ತವಗಳ ಜೊತೆ ಕೆಲಸ ಮಾಡುವುದಕ್ಕೆ ಒಗ್ಗಿಕೊಳ್ಳುವ ಮೂಲಕ ತನ್ನ ಮೂರನೆ ಬಜೆಟನ್ನು ಮಂಡಿಸಿದೆ. ಆ ದೃಷ್ಟಿಯಿಂದ ಬಜೆಟನ್ನು ವಿವೇಕಯುತವಾಗಿದೆ ಎನ್ನಬಹುದಾಗಿದೆ. ವಿತ್ತೀಯ ಕೊರತೆಯನ್ನು ಮಿತಿಯಲ್ಲಿ ಇಡಬೇಕು ಎಂಬುದಕ್ಕೆ ಹಣಕಾಸು ಸಚಿವರು ಬದ್ಧತೆ ತೋರಿದ್ದಾರೆ. ಆದರೆ ಜಾಗತಿಕ ಅರ್ಥವ್ಯವಸ್ಥೆಯಲ್ಲಿ ಹಿಂಜರಿತ ಇರುವಾಗ, ಕೇಂದ್ರ ಸರ್ಕಾರದ ಆದಾಯ ತೀವ್ರವಾಗಿ ಹೆಚ್ಚುತ್ತಿಲ್ಲದಿರುವಾಗ ವಿತ್ತೀಯ ಕೊರತೆಯ ಗುರಿ ತಲುಪುವುದು ಸುಲಭಲ್ಲ.

ಕರ್ನಾಟಕದ್ದೂ ಸೇರಿದಂತೆ ದೇಶದ ಬಹುತೇಕ ಗ್ರಾಮೀಣ ಭಾಗಗಳು ಎದುರಿಸುತ್ತಿರುವ ಸಂಕಷ್ಟಗಳ ಪರಿಹಾರಕ್ಕಾಗಿ ಈ ಬಾರಿಯ ಬಜೆಟ್ಟನಲ್ಲಿ ಗ್ರಾಮೀಣ ಪ್ರದೇಶಗಳಿಗೆ ಹೆಚ್ಚಿನ ಆದ್ಯತೆ ನೀಡಲಾಗಿದೆ. ಬೆಳೆ ವಿಮೆ, ರಸಗೊಬ್ಬರ ಸಬ್ಸಿಡಿಯನ್ನು ಖಾತೆಗಳಿಗೆ ನೇರವಾಗಿ ವರ್ಗಾವಣೆ ಮಾಡುವಂತಹ ಪ್ರಗತಿಪರ ಕ್ರಮಗಳು ಬಜೆಟ್‌ನಲ್ಲಿ ಇರುವುದು ಒಳ್ಳೆಯ ಬೆಳವಣಿಗೆ.

ವಾಣಿಜ್ಯ ಚಟುವಟಿಕೆಗಳನ್ನು ಸುಲಭವಾಗಿ ನಡೆಸುವುದು, ಕೌಶಲ ಅಭಿವೃದ್ಧಿ, ಸರ್ಕಾರದ ಸೇವೆಗಳು ಉತ್ತಮ ರೀತಿಯಲ್ಲಿ ಸಿಗುವಂತೆ ಮಾಡುವುದು, ಕಾರ್ಮಿಕ ಕಾನೂನುಗಳಲ್ಲಿ ಸುಧಾರಣೆ ಮತ್ತು ಮೂಲಸೌಕರ್ಯ ಅಭಿವೃದ್ಧೀಯು ತಯಾರಿಕಾ ವಲಯಕ್ಕೆ ಹೆಚ್ಚಿನ ಶಕ್ತಿ ಕೊಡಬಲ್ಲದು. ಇದು ಕಾಲಾನಂತರದಲ್ಲಿ ಕೃಷಿ ಬಿಕ್ಕಟ್ಟು ನಿವಾರಣೆಗೆ ನೆರವಾಗುತ್ತದೆ. ■

## ತೆರಿಗೆ : ಮಧ್ಯಮ ವರ್ಗಕ್ಕೆ ಯಥಾಸ್ಥಿತಿ; 5 ಲಕ್ಷ ಆದಾಯ ಮೇಲ್ಪಟ್ಟವರಿಗೆ ಶೇ.20 ತೆರಿಗೆ

**ನವದೆಹಲಿ :** ಹಣಕಾಸು ಸಚಿವ ಅರುಣ್ ಜೇಟ್ಲಿ ಅವರು ಸೋಮವಾರ ಲೋಕಸಭೆಯಲ್ಲಿ 3ನೇ ಬಾರಿಗೆ ಕೇಂದ್ರ ಬಜೆಟ್ ಮಂಡನೆ ಮಾಡಿದ್ದು, ಈ ಬಾರಿಯ ಬಜೆಟ್ ಪರಿಣಾಮದ ಬಿಸಿ ಶ್ರೀಮಂತರ ಮೇಲೆ ತಟ್ಟಿದೆ. ವಿತ್ತ ಸಚಿವರು ಮಂಡನೆ ಮಾಡಿರುವ ಬಜೆಟ್‌ನಲ್ಲಿ ವೈಯಕ್ತಿಕ ಆದಾಯ ತೆರಿಗೆ ವರ್ಗೀಕರಣ ಮಿತಿಗಳನ್ನು ಈ ಹಿಂದಿನಂತೆಯೇ ಉಳಿಸಿಕೊಳ್ಳಲಾಗಿದೆ. ಇದರಿಂದ ಒಂದು ರೀತಿಯಲ್ಲಿ, ಮಧ್ಯಮವರ್ಗದ ಜನರಿಗೆ ಮಾತ್ರ ಕೊಂಚ ನಿರಾಳವಾಗಿದೆ.

# ಚುನಾವಣಾ ಪ್ರಾಧಿಕಾರದ ಸುತ್ತೋಲೆ

ಸಹಕಾರ ಸಂಘಗಳ ಚುನಾವಣೆಗಳನ್ನು ನಡೆಸಲು ನೇಮಕಾತಿ ಮಾಡಲಾದ ರಿಟರ್ನಿಂಗ್ ಅಧಿಕಾರಿಗಳು ಮುಂಗಡ ಹಣ ಪಡೆಯದಂತೆ ಮತ್ತು ಸಂಘಗಳು/ ಸಹಕಾರಿಗಳು ಚುನಾವಣಾ ವೆಚ್ಚಗಳನ್ನು ಸದಸ್ಯರ ಸಂಖ್ಯೆಗಳಿಗನುಗುಣವಾಗಿ ಪಾರದರ್ಶಕವಾಗಿ/ ಸ್ಪರ್ಧಾತ್ಮಕ ದರದಲ್ಲಿ ನಿರ್ವಹಿಸುವ ಬಗ್ಗೆ ಸಹಕಾರ ಚುನಾವಣಾ ಪ್ರಾಧಿಕಾರದಿಂದ ಸುತ್ತೋಲೆ

ಸಂಖ್ಯೆ : ಸಚುಆ/ಚುನಾವಣೆ/ಸಂಭಾವನೆ/11/2016 ದಿನಾಂಕ: 22.02.2016

**ಸುತ್ತೋಲೆ**

**ವಿಷಯ : ಸಹಕಾರ ಸಂಘಗಳ ಚುನಾವಣೆಗಳನ್ನು ನಡೆಸಲು ನೇಮಕಾತಿ ಮಾಡಲಾದ ರಿಟರ್ನಿಂಗ್ ಅಧಿಕಾರಿಗಳು ಮುಂಗಡ ಹಣ ಪಡೆಯದಂತೆ ಮತ್ತು ಸಂಘಗಳು/ ಸಹಕಾರಿಗಳು ಚುನಾವಣಾ ವೆಚ್ಚಗಳನ್ನು ಸದಸ್ಯರ ಸಂಖ್ಯೆಗಳಿಗನುಗುಣವಾಗಿ ಪಾರದರ್ಶಕವಾಗಿ/ ಸ್ಪರ್ಧಾತ್ಮಕ ದರದಲ್ಲಿ ನಿರ್ವಹಿಸುವ ಬಗ್ಗೆ.**

* * *

1. ರಾಜ್ಯದ ಹಲವು ಜಿಲ್ಲೆಗಳಿಗೆ ಸಹಕಾರ ಚುನಾವಣಾ ಪ್ರಾಧಿಕಾರದ ಆಯುಕ್ತರು ಪ್ರವಾಸ ಕೈಗೊಂಡಾಗ ಚುನಾವಣಾ ವೆಚ್ಚಕ್ಕೆ ಸಂಬಂಧಿಸಿದಂತೆ ಅಲ್ಲಿನ ಸ್ಥಳೀಯ ಅಧಿಕಾರಿಗಳು ಬಹುತೇಕ ಸಹಕಾರ ಸಂಘಗಳ/ ಸಹಕಾರಿಗಳ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳಿಗೆ ರಿಟರ್ನಿಂಗ್ ಆಫೀಸರ್‌ಗಳು ಹೆಚ್ಚಿನ ಮೊತ್ತದ ಮುಂಗಡ ಹಣಕ್ಕಾಗಿ ಬೇಡಿಕೆ ಇಟ್ಟು, ಮುಂಗಡ ಹಣ ಪಡೆಯುತ್ತಿರುವ ಅಂಶವನ್ನು ಆಯುಕ್ತರ ಗಮನಕ್ಕೆ ತಂದಿರುತ್ತಾರೆ.
2. ಈ ರೀತಿ ಮುಂಗಡ ಹಣವನ್ನು ಪಡೆಯಲು ಕಾನೂನಿನಲ್ಲಿ ಅವಕಾಶ ಇರುವುದಿಲ್ಲ. ಆದಾಗ್ಯೂ ರಿಟರ್ನಿಂಗ್ ಆಫೀಸರ್‌ಗಳಿಗೆ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು ಕಾನೂನು ಬಾಹಿರವಾಗಿ ಹೆಚ್ಚಿನ ಮೊತ್ತವನ್ನು ನೀಡುತ್ತಿರುವುದು, ಚುನಾವಣೆ ನಂತರ ಈ ಮುಂಗಡಕ್ಕೆ ಅವಶ್ಯಕತೆಗಿಂತ ಹೆಚ್ಚಿನ ಹಣವನ್ನು ಚುನಾವಣಾ ವೆಚ್ಚದ ಹೆಸರಿನಲ್ಲಿ ಖರ್ಚು ಮಾಡುತ್ತಿರುವುದು ಮತ್ತು ಸುಳ್ಳು ಲೆಕ್ಕ ಸೃಷ್ಟಿಸುತ್ತಿರುವುದು ಇದರಿಂದಾಗಿ ಆರ್ಥಿಕ ಸ್ಥಿತಿ ಕ್ಷೀಣಿಸಲು ಸಹಕಾರ ಸಂಘಗಳ/ ಸಹಕಾರಿಗಳ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು ಮತ್ತು ರಿಟರ್ನಿಂಗ್ ಆಫೀಸರ್‌ಗಳು ಕಾರಣರಾಗುತ್ತಿರುವುದು ಸಹಕಾರ ಚುನಾವಣಾ ಪ್ರಾಧಿಕಾರ ಗಮನಕ್ಕೆ ಬಂದಿರುತ್ತದೆ. ಈ ಅಂಶವನ್ನು ಪ್ರಾಧಿಕಾರವು ಗಂಭೀರವಾಗಿ ಪರಿಗಣಿಸಿರುತ್ತದೆ.
3. ಉಲ್ಲೇಖ(1)ರ ಪ್ರಾಧಿಕಾರ ಆದೇಶದಲ್ಲಿ ಸಹಕಾರ ಸಂಘಗಳ ನಿಬಂಧಕರು ದಿನಾಂಕ : 20–01–2010ರಂದು ಹೊರಡಿಸಿದ ಸುತ್ತೋಲೆಯನ್ನು ಮಾರ್ಪಡಿಸಿ ಇತ್ತೀಚಿನ ಅಗತ್ಯ ವಸ್ತುಗಳ/ ಗ್ರಾಹಕರ ವಸ್ತುಗಳ/ ಪ್ರಯಾಣದರ/ ಏರಿಕೆಯನ್ನು ಗಮನದಲ್ಲಿಟ್ಟುಕೊಂಡು ರಿಟರ್ನಿಂಗ್ ಆಫೀಸರ್ ಮತ್ತು ಇತರೆ ಅಧಿಕಾರಿಗಳು ಮತ್ತು ಸಿಬ್ಬಂದಿಗಳಿಗೆ ನೀಡಬೇಕಾದ ಸಂಭಾವನೆಯನ್ನು ಪರಿಷ್ಕರಿಸುವ ಅವಶ್ಯಕತೆ ಇರುವುದನ್ನು ಮನಗೊಂಡು ದಿನಾಂಕ : 25–7–2013ರಂದು ಚುನಾವಣಾ ಆಯೋಗ ರಚನೆಯಾದ ನಂತರ ಆದೇಶವನ್ನು ಹೊರಡಿಸಲಾಗಿದೆ.
4. ತದನಂತರ ಉಲ್ಲೇಖ (2)ರಲ್ಲಿ ಸಹಕಾರ ಸಂಘಗಳ/ ಸಹಕಾರಿಗಳ ಚುನಾವಣೆಯನ್ನು ನಡೆಸುವ ಸಂಬಂಧ ಕಾನೂನು ಮತ್ತು ಸುವ್ಯವಸ್ಥೆಯನ್ನು ನಿರ್ವಹಿಸಲು ಪೋಲೀಸ್ ಇಲಾಖೆಯ ನೆರವು ಅವಶ್ಯಕವಾಗಿರುವುದನ್ನು ಮನಗಂಡು ಈ ಬಗ್ಗೆ ಪ್ರಾಧಿಕಾರದಿಂದ ಪತ್ರ ವ್ಯವಹಾರ ನಡೆಸಿದ ನಂತರ ಸರ್ಕಾರವು ದಿನಾಂಕ : 04–03–2014ರಂದು ಹೊರಡಿಸಿರುವ ನಡವಳಿಕೆಯಲ್ಲಿ ಸಹಕಾರ ಚುನಾವಣಾ ಆಯೋಗವು ನಡೆಸುವ ಸಹಕಾರ ಸಂಘಗಳ/ ಸಹಕಾರಿಗಳ ಆಡಳಿತ ಮಂಡಳಿ ಚುನಾವಣೆಗೆ ಪೋಲೀಸ್ ಸಿಬ್ಬಂದಿ ಒದಗಿಸುವಿಕೆ ಮತ್ತು ಬಂದೋಬಸ್ತ್ ಕರ್ತವ್ಯದ ಸಂಬಂಧ ಶುಲ್ಕ ಪಾವತಿ ದರ ನಿಗದಿಪಡಿಸಿ ಆದೇಶ ಹೊರಡಿಸಿರುವುದನ್ನು ಲಗತ್ತಿಸಿ ಪ್ರಾಧಿಕಾರದಿಂದ ಸುತ್ತೋಲೆ ಹೊರಡಿಸಲಾಗಿದೆ.

5. ಉಲ್ಲೇಖ (3)ರಲ್ಲಿ ಪ್ರಾಧಿಕಾರಕ್ಕೆ ದೂರು ಬಂದ ಹಿನ್ನೆಲೆಯಲ್ಲಿ ದೂರು ಅರ್ಜಿಯ ವಿಚಾರಣೆ ನಡೆಸಿ ಸಹಕಾರ ಸಂಘಗಳ ಜಂಟಿ ನಿಬಂಧಕರು, ಬೆಂಗಳೂರು ಪ್ರಾಂತ ಇವರಿಗೆ ಪತ್ರ ಬರೆದು ರಿಟರ್ನಿಂಗ್ ಆಫೀಸರ್ ಅವರು ಮುಂಗಡವನ್ನು ಪಡೆಯಲು ಅವಕಾಶ ಇಲ್ಲದೆ ಇದ್ದಾಗ್ಯೂ ಮುಂಗಡವನ್ನು ಪಡೆದು ಸಕಾಲಕ್ಕೆ ಓಚರ್‌ಗಳನ್ನು ಒದಗಿಸದೆ ಇರುವ ಬಗ್ಗೆ ಶಾಸನ ಬದ್ಧ ವಿಚಾರಣೆ / ತನಿಖೆ ನಡೆಸಿ ತಪ್ಪಿಸ್ಥರ ವಿರುದ್ಧ ಜವಾಬ್ದಾರಿಯನ್ನು ಗೊತ್ತುಪಡಿಸಿ ಹೆಚ್ಚುವರಿ ಮುಂಗಡ ಹಣ ಪಡೆದಿರುವುದನ್ನು ಸಂಬಂಧಿಸಿದ ಸಂಘಕ್ಕೆ ಮರುಪಾವತಿಸಲು ಅಗತ್ಯ ಕ್ರಮಕೈಗೊಳ್ಳಲು ತಿಳಿಸಿದೆ.

6. ಸಹಕಾರ ಸಂಘಗಳು ಅಧಿನಿಯಮ 39 ಬಿ ರಲ್ಲಿ **"ಚುನಾವಣೆಗಳನ್ನು ನಡೆಸುವುದಕ್ಕಾಗಿ ವೆಚ್ಚ"** ಚುನಾವಣೆಯ ಸಂಬಂಧದಲ್ಲಿ ಕರ್ತವ್ಯಗಳನ್ನು ನೆರವೇರಿಸಲು ಮತ್ತು ಅಧಿಕಾರಗಳನ್ನು ಚಲಾಯಿಸಲು ನೇಮಕ ಮಾಡಲಾದ ವ್ಯಕ್ತಿಗಳಿಗೆ ಪಾವತಿಸತಕ್ಕ ಪ್ರಯಾಣ ಭತ್ಯೆಗಳು, ದಿನ ಭತ್ಯೆಗಳು ಮತ್ತು ಇತರೆ ಗೌರವ ಧನ ಸಂದಾಯ ಯಾವುದಾದರೂ ಇದ್ದರೆ ಅದೂ ಸೇರಿ ಯಾವುದೇ ಚುನಾವಣೆಯನ್ನು ನಡೆಸುವ ಖರ್ಚು ವೆಚ್ಚಗಳನ್ನು ಸಂಬಂಧಪಟ್ಟ ಸಹಕಾರ ಸಂಘ/ ಸಹಕಾರಿಯು ಭರಿಸತಕ್ಕದ್ದು ಎಂದು ಇರುತ್ತದೆ.

7. ಸಹಕಾರ ಸಂಘಗಳ ನಿಯಮಗಳು 1960 ನಿಯಮ 14ಎಎ ಮತ್ತು ಸೌಹಾರ್ದ ಸಹಕಾರಿ ನಿಯಮಗಳು 2004 ನಿಯಮ 5ಎಎಫ್‌ರಲ್ಲಿ ಯಾವುದೇ ಸಹಕಾರ ಸಂಘದ/ ಸಹಕಾರಿಯ ಪ್ರತಿನಿಧಿಗಳ ಅಥವಾ ನಿರ್ದೇಶಕರ ಚುನಾವಣೆಗೆ ಸಂಬಂಧಪಟ್ಟಂತೆ ತಗಲುವ ಲೇಖನಸಾಮಗ್ರಿ, ಅಂಚೆ, ಜೆರಾಕ್ಸ್, ಫ್ಯಾಕ್ಸ್, ಮತಪೆಟ್ಟಿಗೆಗಳ ಬಾಡಿಗೆ, ಅಳಿಸಲಾಗದ ಇಂಕು, ಪೋಲೀಸ್ ಭದ್ರತೆ ಮತ್ತು ಅಂಥ ಇತರ ಎಲ್ಲಾ ವೆಚ್ಚಗಳನ್ನು ಆ ಸಹಕಾರ ಸಂಘವು ಭರಿಸತಕ್ಕದ್ದು. ಸಹಕಾರ ಚುನಾವಣಾ (ಪ್ರಾಧಿಕಾರ)ವು ಕಾಲಕಾಲಕ್ಕೆ ನಿಗದಿಪಡಿಸುವ ದರಗಳಲ್ಲಿ ಮತದಾರರ ಪಟ್ಟಿ ತಯಾರಿಕೆಗೆ, ರಿಟರ್ನಿಂಗ್ ಅಧಿಕಾರಿ, ಸಹಾಯಕ ರಿಟರ್ನಿಂಗ್ ಅಧಿಕಾರಿ, ಪ್ರಿಸೈಡಿಂಗ್ ಅಧಿಕಾರಿ ಮತ್ತು ಇತರ ಚುನಾವಣಾ ಸಿಬ್ಬಂದಿಗೆ ಕೊಡಬೇಕಾದ ಪ್ರಯಾಣ ಭತ್ಯೆ ಮತ್ತು ಇತರ ಭತ್ಯೆಗಳಿಗೆ ಮತ್ತು ಸಂಭಾವನೆಗೆ ಸಂಬಂಧಪಟ್ಟ ವೆಚ್ಚವನ್ನೂ ಸಹ ಸಹಕಾರ ಸಂಘಗಳು/ ಸಹಕಾರಿಗಳು ಭರಿಸತಕ್ಕದ್ದು ಎಂದು ಇರುತ್ತದೆ.

8. ಮೇಲಿನ ಕಂಡಿಕೆಗಳಲ್ಲಿ ವಿವರಿಸಿರುವಂತೆ ಸಹಕಾರ ಸಂಘಗಳ/ ಸಹಕಾರಿಗಳ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು ಪ್ರಾಧಿಕಾರದ ಸುತ್ತೋಲೆ ಮತ್ತು ಸಹಕಾರ ಸಂಘಗಳ ಸಹಕಾರಿಗಳ ಅಧಿನಿಯಮ ಮತ್ತು ನಿಯಮಗಳಲ್ಲಿ ಪ್ರಾಧಿಕಾರದಿಂದ ನೇಮಕಾತಿ ಮಾಡಲ್ಪಟ್ಟ ಚುನಾವಣಾಧಿಕಾರಿಗಳು ರಿಟರ್ನಿಂಗ್ ಆಫೀಸರ್‌ಗಳು ಹಾಗೂ ಚುನಾವಣಾಧಿಕಾರಿಗಳಿಂದ ನೇಮಕಾತಿ ಮಾಡಲ್ಪಟ್ಟ ರಿಟರ್ನಿಂಗ್ ಆಫೀಸರ್‌ಗಳು ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳಿಂದ ಚುನಾವಣೆ ನಿಮಿತ್ತ ಮತ ಪತ್ರಗಳು (ಬ್ಯಾಲೆಟ್ ಪೇಪರ್) ಮುದ್ರಣದ ವೆಚ್ಚವನ್ನು ಹೊರತು ಪಡಿಸಿ ಇನ್ಯಾವುದೇ ಚುನಾವಣಾ ವೆಚ್ಚಗಳಿಗಾಗಿ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳಿಂದ ಮುಂಗಡ ಹಣವನ್ನು ಪಡೆಯತಕ್ಕಾದ್ದಲ್ಲ. ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು ಸಹಕಾರ ಸಂಘದ/ ಸಹಕಾರಿಯ ಚುನಾವಣೆಗೆ ಸಂಬಂಧಪಟ್ಟಂತೆ ತಗಲುವ ವೆಚ್ಚಗಳನ್ನು ಸಹಕಾರ ಸಂಘಗಳ/ ಸಹಕಾರಿಗಳ ಅಧಿನಿಯಮ ಮತ್ತು ನಿಯಮಗಳಲ್ಲಿ ವಿವರಿಸಿರುವಂತೆ ನಿಯಮಾನುಸಾರ ಮತ್ತು ಪಾರದರ್ಶಕವಾಗಿ ಸಂಘದ ವತಿಯಿಂದಲೇ ನಿರ್ವಹಿಸತಕ್ಕದ್ದಾಗಿರುತ್ತದೆ. ಅದರಂತೆ ಚುನಾವಣೆ ವೆಚ್ಚವನ್ನು ಪಾರದರ್ಶಕವಾಗಿ ಅವಶ್ಯಕತೆಗನುಗುಣವಾಗಿ ಸ್ಪರ್ಧಾತ್ಮಕ ದರದಲ್ಲಿ ನಿರ್ವಹಿಸಲು ಎಲ್ಲಾ ಅಗತ್ಯಕ್ರಮಗಳನ್ನು ಕೈಗೊಳ್ಳತಕ್ಕದ್ದು. ಅದೇ ರೀತಿಯಲ್ಲಿ ಚುನಾವಣಾಧಿಕಾರಿಗಳಿಗೆ/ ರಿಟರ್ನಿಂಗ್ ಅಧಿಕಾರಿಗಳಿಗೆ ಚುನಾವಣೆಯನ್ನು ನಿಯಮಾನುಸಾರ ಸುಲಲಿತವಾಗಿ ನಡೆಸುವ ಬಗ್ಗೆ ಅಗತ್ಯ ಎಲ್ಲಾ ನೆರವನ್ನು ನೀಡತಕ್ಕದ್ದು.

ಸಹಿ/–

**(ಎನ್.ಸಿ.ಮುನಿಯಪ್ಪ)**

ಆಯುಕ್ತರು

ಸಹಕಾರ ಚುನಾವಣಾ ಪ್ರಾಧಿಕಾರ

# 2011-12 ರಿಂದ 2015-16ರವರೆಗಿನ ಸೌಹಾರ್ದ ಸಹಕಾರಿ ಕ್ಷೇತ್ರದ ಹಾಗೂ ಸಂಯುಕ್ತ ಸಹಕಾರಿಯ ಸಾಧನೆಗಳ ಸಿಂಹಾವಲೋಕನ

## ಅವಕಾಶ, ಸಹಕಾರ ಮತ್ತು ಮಾರ್ಗದರ್ಶನ ಸಾಧನೆಗೆ ಸ್ಫೂರ್ತಿ - ಶ್ರೀ ಗುರುನಾಥ ಜಾಂತಿಕರ



ರಾಜ್ಯದಲ್ಲಿ ಸೌಹಾರ್ದ ಸಹಕಾರಿ ಕ್ಷೇತ್ರ ಪ್ರಾರಂಭದ ದಿನಗಳಿಂದಲೂ ಸೌಹಾರ್ದ ಸಹಕಾರಿಗಳೊಂದಿಗೆ ಬೆರೆತು ಕೆಲಸ ಮಾಡಲು ಅವಕಾಶವಾಗಿದೆ. ವಿಶೇಷವಾಗಿ ಕಳೆದ 5 ವರ್ಷಗಳ ಅವಧಿಯಲ್ಲಿ ಒದಗಿಸಿದ ಅವಕಾಶ ಮರೆಯಲಾಗದು. ಸಾಧಿಸುವ ಛಲ ಮತ್ತು ಸಹಕಾರ ಪ್ರೋತ್ಸಾಹಗಳು ಬೆನ್ನಿಗಿದ್ದರೆ ಸಾಧನೆ ಕಷ್ಟವಾಗುವುದಿಲ್ಲ ಎಂಬುವುದಕ್ಕೆ ಸೌಹಾರ್ದ ಸಹಕಾರಿ ಕ್ಷೇತ್ರಕ್ಕೆ ರಾಜ್ಯದಲ್ಲಿ ಒದಗಿರುವ ಭದ್ರ ಬುನಾದಿಯೇ ಸಾಕ್ಷಿ. ಸೌಹಾರ್ದ ಸಹಕಾರಿಗಳ ಪ್ರೋತ್ಸಾಹವೇ ನಮ್ಮ ಸ್ಫೂರ್ತಿ. ಈ ಅವಧಿಯಲ್ಲಿ ನಿರಂತರ ಪ್ರಯತ್ನದಿಂದ ಸಾಧಿಸಿದ ಸಾಧನೆಗಳನ್ನು ಸೌಹಾರ್ದ ಸಹಕಾರಿಗಳೊಂದಿಗೆ ಹಂಚಿಕೊಂಡು ಅವರುಗಳ ಸಹಕಾರಕ್ಕೆ ಕೃತಜ್ಞತೆ ಸಲ್ಲಿಸುವುದು ನನ್ನ ಕರ್ತವ್ಯ ಭಾಗ.

## ಸಹಕಾರಿ ಕ್ಷೇತ್ರದ ಮುಖ್ಯವಾಹಿನಿಯಲ್ಲಿ ಸೌಹಾರ್ದ ಸಹಕಾರಿ ಕ್ಷೇತ್ರವನ್ನು ಗುರುತಿಸುವ ಪ್ರಯತ್ನ ಸಾಕಾರ - ಶ್ರೀ ಹೆಚ್.ವಿ.ರಾಜೀವ



ರಾಜ್ಯದಲ್ಲಿ ಸೌಹಾರ್ದ ಸಹಕಾರಿ ಕ್ಷೇತ್ರ ಪ್ರಾರಂಭವಾದಾಗ ಜನ ಹಾಗೂ ಸಹಕಾರಿಗಳು ಈ ಕ್ಷೇತ್ರವನ್ನು ಮುಖ್ಯವಾಹಿನಿಯಲ್ಲಿ ಗುರುತಿಸು ತ್ತಿರಲಿಲ್ಲ. ಕಳೆದ 5 ವರ್ಷಗಳ ಅವಧಿಯಲ್ಲಿ ಜರುಗಿಸಿದ ಅಸಂಖ್ಯಾತ ಶಿಸ್ತುಬದ್ಧ ಹಾಗೂ ಉತ್ತಮ ಗುಣಮಟ್ಟದ ತರಬೇತಿ ಕಾರ್ಯಕ್ರಮಗಳು, ಪ್ರಗತಿಪರ ಚಟುವಟಿಕೆಗಳು ಹಾಗೂ ಸರಕಾರ-ಸಹಕಾರಿ ಸಂಸ್ಥೆಗಳೊಡನೆ ಸಂಬಂಧ, ರಾಜ್ಯ ಹಾಗೂ ರಾಷ್ಟ್ರೀಯ ಸಭೆ ಸಮಾರಂಭಗಳಲ್ಲಿ ನಿರಂತರ ಭಾಗವಹಿಸುವಿಕೆಗಳಿಂದ ಸೌಹಾರ್ದ ಸಹಕಾರಿ ಕ್ಷೇತ್ರ ಮುಖ್ಯವಾಹಿನಿಯ ಪ್ರಧಾನ ಭೂಮಿಕೆಗೆ ಬಂದಿದೆ. ಈ ಪ್ರಯತ್ನಕ್ಕೆ ಸಹಕರಿಸಿದ ಎಲ್ಲಾ ಸಹಕಾರಿಗಳಿಗೂ ಕೃತಜ್ಞತೆಗಳು.

## ಅಭಿವೃದ್ಧಿಯ ದೃಷ್ಟಿಕೋನದ ಕಾರ್ಯಕ್ರಮಗಳಿಂದ ಸಂಯುಕ್ತ ಸಹಕಾರಿ ಹಾಗೂ ಸೌಹಾರ್ದ ಸಹಕಾರಿಗಳು ಸಂಖ್ಯಾತ್ಮಕವಾಗಿ ಹಾಗೂ ಗುಣಾತ್ಮಕವಾಗಿ ಬೆಳೆಯಲು ಸಾಧ್ಯವಾಗಿದೆ - ಶ್ರೀ ಎಸ್.ಆರ್.ಸತೀಶ್‌ಚಂದ್ರ



ಕಳೆದ 5 ವರ್ಷಗಳ ಅವಧಿಯಲ್ಲಿ ರಾಜ್ಯದ ಸೌಹಾರ್ದ ಸಹಕಾರಿಯ ನೇತಾರರಾಗಿ ಕಾರ್ಯನಿರ್ವಹಿಸುತ್ತಿರುವ ಸಂಯುಕ್ತ ಸಹಕಾರಿಯು ರಾಜ್ಯದಾದ್ಯಂತ ಸೌಹಾರ್ದ ಸಹಕಾರಿ ಕ್ಷೇತ್ರದಲ್ಲಿ ತೊಡಗಿಸಿಕೊಂಡಿರುವ ಎಲ್ಲಾ ವರ್ಗದವರಿಗೆ ಅತ್ಯಂತ ಉತ್ತಮ ಗುಣಮಟ್ಟದ ಶಿಕ್ಷಣ ಹಾಗೂ ತರಬೇತಿ ಕಾರ್ಯಕ್ರಮಗಳನ್ನು ಏರ್ಪಡಿಸುತ್ತಾ ಬಂದಿರುವುದು, ಸಂಯುಕ್ತ ಸಹಕಾರಿಯು ಈ ರಾಜ್ಯದ ಸೌಹಾರ್ದ ಸಹಕಾರಿ ಕ್ಷೇತ್ರದ ಅಭಿವೃದ್ಧಿಯ ದೃಷ್ಟಿಯಿಂದ ಯಾವ ಅವಕಾಶಗಳನ್ನು ಕಳೆದುಕೊಳ್ಳದೇ, ಬಿಡದೇ ಎಲ್ಲದರಲ್ಲೂ ಸಕ್ರಿಯವಾಗಿ ಭಾಗವಹಿಸಿದುದರ ಪರಿಣಾಮದಿಂದ ಸಾಧನೆ ಸಾಧ್ಯವಾಗಿದೆ. ಅವಕಾಶ ನೀಡಿ, ಸಹಕರಿಸಿದ, ಪ್ರಗತಿಗೆ ಕಾರಣೀಭೂತರಾಗಿರುವ ಎಲ್ಲರಿಗೂ ಧನ್ಯವಾದಗಳು.

ರಾಜ್ಯದ ಸೌಹಾರ್ದ ಸಹಕಾರಿಗಳಲ್ಲಿ ಅವರ ಸಾಧನೆ ಹಾಗೂ ಕಾರ್ಯಚಟುವಟಿಕೆಗಳನ್ನು ಪುನರಾವಲೋಕನ ಮಾಡಿಸಿ, ಅವರಲ್ಲಿ ಹೆಚ್ಚಿನ ಉತ್ಸಾಹ ಮೂಡಿಸುವ ಮತ್ತು ಹೆಚ್ಚು ಆಸಕ್ತಿಯಿಂದ ಇನ್ನೂ ಹೆಚ್ಚಿನ ಸಾಧನೆಯನ್ನು ಮಾಡಲು ಪ್ರೇರೇಪಿಸಿ ಮತ್ತು ಬಹು ಮುಖ್ಯವಾಗಿ ರಾಜ್ಯದ ಎಲ್ಲಾ ಸೌಹಾರ್ದ ಸಹಕಾರಿಗಳು ಈ ಕ್ಷೇತ್ರದ ಅಭಿವೃದ್ಧಿಗಾಗಿ ಈ ಕ್ಷೇತ್ರದ ವಕ್ತಾರರಂತೆ ಕಾರ್ಯನಿರ್ವಹಿಸಲು ಪೂರಕವಾಗುವ ನಿಟ್ಟಿನಲ್ಲಿ ಸೌಹಾರ್ದ ಸಹಕಾರಿ ಕ್ಷೇತ್ರದ ಹಾಗೂ ಸಂಯುಕ್ತ ಸಹಕಾರಿಯ ಕಾರ್ಯಚಟುವಟಿಕೆಗಳ ಕಳೆದ 5 ವರ್ಷಗಳ ಸಾಧನೆಯ ಸಿಂಹಾವಲೋಕನ ರಾಜ್ಯದ ಸೌಹಾರ್ದ ಸಹಕಾರಿಗಳ ಹಾಗೂ ಸಾರ್ವಜನಿಕರ ಅವಗಾಹನೆಯ ಉದ್ದೇಶದಿಂದ ಈ ಲೇಖನ. ರಾಜ್ಯದ ಸೌಹಾರ್ದ ಸಹಕಾರಿ ಕ್ಷೇತ್ರ ಈಗ ಸಹಕಾರಿ ಕ್ಷೇತ್ರದ ಪ್ರಮುಖ ಅಂಗವಾಗಿ ಮುಖ್ಯವಾಹಿನಿಯಲ್ಲಿ

ಗುರುತಿಸಲ್ಪಡುತ್ತಿದೆ. ಕೇವಲ 15 ವರ್ಷಗಳ ಪಯಣದಲ್ಲಿ ಅದ್ಭುತ ಸಾಧನೆ ಮಾಡಿ, ತನ್ನ ಅಸ್ತಿತ್ವವನ್ನು ತೋರಿಸಿದೆ. ಸಹಕಾರಿ ಕ್ಷೇತ್ರಕ್ಕೆ ವ್ಯವಹಾರಿಕ ಸ್ವಾಯತ್ತತೆಯನ್ನು, ಸ್ವಯಂ ನಿಯಂತ್ರಣ ಮತ್ತು ಆಡಳಿತ ವ್ಯವಸ್ಥೆಯನ್ನು ನೀಡಿ, ಪ್ರೋತ್ಸಾಹಿಸಿದರೆ ಸಹಕಾರಿ ಸಂಸ್ಥೆಗಳು ಆರ್ಥಿಕ ಅಭಿವೃದ್ಧಿಯ ಕ್ಷೇತ್ರದಲ್ಲಿ ಉತ್ತಮ ಪವಾಡವನ್ನೇ ಮಾಡಬಲ್ಲವು ಎಂಬುದಕ್ಕೆ ಸೌಹಾರ್ದ ಸಹಕಾರಿಗಳೇ ಸಾಕ್ಷಿ.

112 ವರ್ಷಗಳ ಇತಿಹಾಸ ಹೊಂದಿರುವ ಸಹಕಾರಿ ಕ್ಷೇತ್ರಕ್ಕೆ ಕೇವಲ 15 ವರ್ಷಗಳನ್ನು ಪೂರೈಸಿರುವ ಈ ಕ್ಷೇತ್ರ ಮಾದರಿಯಾಗಿದೆ. ಹೊಸ ಚೈತನ್ಯವನ್ನು ತುಂಬಿದೆ. ಸರಕಾರದ ಹಾಗೂ ಅಧಿಕಾರಿಗಳ ಅತಿಯಾದ ಹಸ್ತಕ್ಷೇಪದಿಂದಾಗಿ ನಿರೀಕ್ಷಿಸಿದ ಪ್ರಗತಿ ಹಾಗೂ ಸಾಧನೆಗಳನ್ನು ಕಾಣದ ಈ ಕ್ಷೇತ್ರದಿಂದ ವಿಮುಖರಾದ ಯುವ ಸಹಕಾರಿಗಳು ಸೌಹಾರ್ದ ಸಹಕಾರಿ ಕ್ಷೇತ್ರದತ್ತ ಆಕರ್ಷಿತರಾಗುತ್ತಿರುವುದು ಈ ಕ್ಷೇತ್ರದ ಬೆಳವಣಿಗೆಯ ವಿಶೇಷ. ಸೌಹಾರ್ದ ಸಹಕಾರಿ ಕಾಯ್ದೆ ಜಾರಿಗೆ ಬಂದು 15 ವರ್ಷಗಳು ಕಳೆದಿವೆ. ಮೊದಲಿನ ಒಂದು ದಶಕ ಈ ಕ್ಷೇತ್ರದ ಬಾಲ್ಯಾವಸ್ಥೆಯ ದಿನಗಳೆಂದು ಹೇಳಬಹುದು. ಈ ಅವಧಿಯಲ್ಲಿ ಸೌಹಾರ್ದ ಕ್ಷೇತ್ರ ತನ್ನ ನೆಲೆಯನ್ನು ಕಂಡುಕೊಳ್ಳಲು ಪ್ರಯತ್ನಿಸಲಾಯಿತು. ಸಂಯುಕ್ತ ಸಹಕಾರಿಯು ತನಗೆ ವಹಿಸಿರುವ ಶಾಸನಬದ್ಧ ಕಾರ್ಯಗಳ ಜೊತೆಗೆ ಕ್ಷೇತ್ರ ವಿಸ್ತರಣೆಗಾಗಿ ಹಲವು ಕಾರ್ಯಕ್ರಮಗಳನ್ನು ನಡೆಸಲಾಗಿದೆ.

## 2011-12 ರಿಂದ 2015-16 ಸಾಧನೆಗಳ ಪರ್ವ

**ರಾಜ್ಯದ ಸೌಹಾರ್ದ ಸಹಕಾರಿ ಚಳುವಳಿಯ ಬೆಳವಣಿಗೆ ಹಾಗೂ ಕಾರ್ಯಚಟುವಟಿಕೆಗಳತ್ತ ಗಮನ ಹರಿಸಿದರೆ 1ನೇ ಅವಧಿಯ 5 ವರ್ಷಗಳ ಅಂತ್ಯಕ್ಕೆ 610 ಸೌಹಾರ್ದ ಸಹಕಾರಿಗಳು, 2ನೇ ಅವಧಿಯ 5 ವರ್ಷಗಳ ಅಂತ್ಯಕ್ಕೆ 1654 ಹಾಗೂ ಪ್ರಸಕ್ತ 3ನೇ ಅವಧಿಯ 5 ವರ್ಷಗಳ ಅಂತ್ಯಕ್ಕೆ 3530. ಈ ಕ್ಷೇತ್ರದಲ್ಲಿ ಶೇರು ಬಂಡವಾಳ ರೂ.550 ಕೋಟಿ, ಠೇವಣಿಗಳು ರೂ.11,000 ಕೋಟಿ, ದುಡಿಯುವ ಬಂಡವಾಳ ರೂ.12,500 ಕೋಟಿ, ಸಾಲ ನೀಡಿಕೆ ರೂ.7,500 ಕೋಟಿ, ಲಾಭ ರೂ.175 ಕೋಟಿ, ಉದ್ಯೋಗ 50,000ಕ್ಕೂ ಹೆಚ್ಚು. ಈ ಸಾಧನೆ ಹಾಗೂ ವೇಗದ ಬೆಳವಣಿಗೆ ತೃಪ್ತಿದಾಯಕ ಎಂದು ಹೇಳಬಹುದು.**

### "ಇ"ಸ್ಟ್ಯಾಂಪಿಂಗ್ (ಛಾಪಾಕಾಗದ) ವ್ಯವಹಾರ

ರಾಜ್ಯದ ಸೌಹಾರ್ದ ಸಹಕಾರಿ ಕ್ಷೇತ್ರದ ಅಭಿವೃದ್ಧಿಗೆ ಪುಷ್ಟಿ ನೀಡಿದ್ದು ಇ–ಸ್ಟ್ಯಾಂಪಿಂಗ್ ವ್ಯವಹಾರ. ಇಡೀ ದೇಶದಲ್ಲಿ ಸಹಕಾರಿ ಕ್ಷೇತ್ರದ ಮೂಲಕ ಇ–ಸ್ಟ್ಯಾಂಪಿಂಗ್ ವ್ಯವಹಾರ ಪ್ರಾರಂಭಿಸಿರುವುದು ಕರ್ನಾಟಕದ ಸೌಹಾರ್ದ ಸಹಕಾರಿಗಳೇ ಮೊದಲಿಗರು. ಈ ಕಾರ್ಯವನ್ನು ಸೌಹಾರ್ದ ಸಹಕಾರಿಗಳಿಗೆ ವಹಿಸಿಕೊಟ್ಟಿರುವ ಕರ್ನಾಟಕ ಸರಕಾರಕ್ಕೆ ಸೌಹಾರ್ದ ಸಹಕಾರಿಗಳ ಪರವಾಗಿ ಕೃತಜ್ಞತೆಗಳು.

ಸೌಹಾರ್ದ ಸಹಕಾರಿಗಳ ಪರವಾಗಿ ಸಂಯುಕ್ತ ಸಹಕಾರಿಯ ನೇತೃತ್ವದಲ್ಲಿ ಸ್ಟಾಕ್ ಹೋಲ್ಡಿಂಗ್ ಕಾರ್ಪೋರೇಷನ್‌ದೊಂದಿಗೆ ಒಪ್ಪಂದ ಮಾಡಿ, ರಾಜ್ಯದಾದ್ಯಂತ ಎಲ್ಲಾ ಜಿಲ್ಲೆಗಳ 154 ತಾಲೂಕ್ಲುಗಳಲ್ಲಿ 591 ಸೌಹಾರ್ದ ಸಹಕಾರಿಗಳ 881 ಕೇಂದ್ರಗಳು ಕಾರ್ಯನಿರ್ವಹಿಸುತ್ತಿರುವುದು ಮತ್ತು ಪ್ರತಿ ದಿನ 45000 ಕ್ಕಿಂತಲೂ ಹೆಚ್ಚು ಛಾಪಾ ಕಾಗದಗಳನ್ನು ಮಾರಾಟ ಮಾಡಲಾಗುತ್ತಿದ್ದು, ರಾಜ್ಯದ ಖಜಾನೆಗೆ ರೂ. 1.25 ಕೋಟಿಗಿಂತಲೂ ಹೆಚ್ಚು ರಾಜಸ್ವವು ಈ ಕೇಂದ್ರಗಳ ಮೂಲಕ ಸಂಗ್ರಹವಾಗುತ್ತಿರುವುದು ಹೆಮ್ಮೆಯ ವಿಷಯ. ಸೌಹಾರ್ದ ಸಹಕಾರಿಗಳಿಗೆ ಸರಕಾರದ ಹಾಗೂ ಸಾರ್ವಜನಿಕರ ಮಾನ್ಯತೆಯ ಪ್ರತೀಕ ಮತ್ತು ಅದ್ಭುತ ಸಾಧನೆ.

ಥರ್ಡ್ ಪಾರ್ಟಿ ಚೆಕ್‌ಕಲೆಕ್ಷನ್‌ಗೆ ರಿಸರ್ವ್ ಬ್ಯಾಂಕ್ ಅನುಮತಿ (ಮೂರನೆಯ ವ್ಯಕ್ತಿಯ ಚೆಕ್ ನಗದೀಕರಣ ಮಾಡಿಕೊಡುವುದು)

ರಾಜ್ಯದ ಸೌಹಾರ್ದ ಸಹಕಾರಿಗಳಲ್ಲಿ ಹೆಚ್ಚಿನವರು ಪತ್ತಿನ ವ್ಯವಹಾರ ಮಾಡುವ ಸಂಸ್ಥೆಗಳು. ಈ ಸಹಕಾರಿಗಳ ಸದಸ್ಯರಿಗೆ ಬಂದಿರತಕ್ಕಂತಹ ಚೆಕ್‌ಗಳನ್ನು ಸದಸ್ಯರ ಪರವಾಗಿ ಕಲೆಕ್ಷನ್ ಮಾಡಿಕೊಡುವ ಅಧಿಕಾರ ಸೌಹಾರ್ದ ಸಹಕಾರಿಗಳಿಗೆ ಅವಶ್ಯಕವಾಗಿತ್ತು.

ಈ ಬಗ್ಗೆ ಸಂಯುಕ್ತ ಸಹಕಾರಿಯ ಆಡಳಿತ ಮಂಡಲಿಯು ರಿಸರ್ವ್ ಬ್ಯಾಂಕ್ ಆಫ್ ಇಂಡಿಯಾದ ಅಧಿಕಾರಿಗಳೊಡನೆ ನಿರಂತರ ಸಂಪರ್ಕ ಹೊಂದಿ, ನಿರಂತರ ಪ್ರಯತ್ನಿಸಿ ಈ ಸೌಲಭ್ಯವನ್ನು ದೊರಕಿಸಿಕೊಡಲಾಯಿತು. ರೂ. 50,000 ಗಳ ವರೆಗೆ ಸೌಹಾರ್ದ ಸಹಕಾರಿಗಳು ಥರ್ಡ್ ಪಾರ್ಟಿ ಚೆಕ್ ಕಲೆಕ್ಷನ್ ಮಾಡಲು ರಿಸರ್ವ್ ಬ್ಯಾಂಕ್ ಅನುಮತಿ ನೀಡಿರುವುದು ಸೌಹಾರ್ದ ಸಹಕಾರಿಗಳ ಕಾರ್ಯಚಟುವಟಿಕೆಗಳಿಗೆ ವರದಾನವಾಗಿ ಪರಿಣಮಿಸಿದೆ. ಸೌಹಾರ್ದ ಸಹಕಾರಿಗಳ ಕಾರ್ಯಚಟುವಟಿಕೆಗಳಿಗೆ ಹಾಗೂ ಅಭಿವೃದ್ಧಿಗೆ ಪೂರಕ. ಸಂಯುಕ್ತ ಸಹಕಾರಿಯ ಆಡಳಿತ ಮಂಡಲಿಯ ಈ ಪ್ರಯತ್ನದಿಂದಾಗಿ ದೇಶದಾದ್ಯಂತ ಎಲ್ಲಾ ಪತ್ತಿನ ಸಹಕಾರಿ ಸಂಸ್ಥೆಗಳಿಗೂ ಈ ಸೌಲಭ್ಯ ದೊರೆತಿರುವುದು ಉತ್ತಮ ಸಾಧನೆ.

### ನೇರ ತೆರಿಗೆ ಸಂಹಿತೆ : ಸಹಕಾರಿಗಳಿಗೆ ಅನ್ವಯಿಸದಂತೆ ಮಾಡಲು ನಿರಂತರ ಪ್ರಯತ್ನ

ಕಳೆದ 4–5 ವರ್ಷಗಳಿಂದ ದೇಶದಲ್ಲಿ ನೇರ ತೆರಿಗೆ ಸಂಹಿತೆ ಜಾರಿಗೆ ಬರುತ್ತದೆ. ಅದರಿಂದ ಸಹಕಾರಿ ಸಂಸ್ಥೆಗಳು ತಮ್ಮ ಲಾಭಾಂಶದಲ್ಲಿ ಶೇ.33ರಷ್ಟು ಮೊತ್ತವನ್ನು ತೆರಿಗೆ ಪಾವತಿಸಬೇಕಾಗುತ್ತದೆ ಎಂಬ ವಿಷಯದ ಬಗ್ಗೆ ಆತಂಕವಿತ್ತು. ಈ ಬಗ್ಗೆ ಸಂಯುಕ್ತ ಸಹಕಾರಿಯು ರಾಜ್ಯದ ಕ್ರೆಡಿಟ್ ಅಸೋಸಿಯೇಷನ್‌ದೊಂದಿಗೆ ಕೈಜೋಡಿಸಿ, ರಾಜ್ಯದ ಎಲ್ಲಾ ಕ್ರೆಡಿಟ್ ಸಹಕಾರಿ ಸಂಸ್ಥೆಗಳ ಬೃಹತ್ ಸಮಾವೇಶವನ್ನು ಜರುಗಿಸಿ,

ಸ್ವಾಭಿಮಾನಿ ಸಹಕಾರಿ





ಕೇಂದ್ರ ಹಣಕಾಸು ಸಚಿವರಿಗೆ ಮನವಿ

ಸಂಬಂಧಿಸಿದವರ ಗಮನ ಸೆಳೆಯುವ ಪ್ರಯತ್ನ ಮಾಡಲಾಗಿದೆ. ಜೊತೆಗೆ ರಾಜ್ಯದ ಎಲ್ಲಾ ಸೌಹಾರ್ದ ಸಹಕಾರಿಗಳು ಆಯಾ ಜಿಲ್ಲೆಗಳಲ್ಲಿ ಜಿಲ್ಲಾಧಿಕಾರಿಗಳಿಗೆ ನೇರ ತೆರಿಗೆ ಸಂಹಿತೆಯನ್ನು ಜಾರಿಮಾಡದಂತೆ ತಡೆಯಲು ಮನವಿಯನ್ನು ಸಲ್ಲಿಸುವಂತೆ ಕ್ರಮವಿಡಲಾಯಿತು. ಇದರ ಜೊತೆಗೆ ಕೇಂದ್ರ ಹಣಕಾಸು ಸಚಿವರಿಗೆ ಹಾಗೂ ಕೇಂದ್ರ ತೆರಿಗೆ ಮಂಡಳಿಯ ಪದಾಧಿಕಾರಿಗಳನ್ನು ಭೇಟಿ ಮಾಡಿ, ಮನವಿಯನ್ನು ಸಲ್ಲಿಸಲಾಯಿತು. ಸರಕಾರ ಬದಲಾವಣೆಯಾದ ನಂತರ ಕೇಂದ್ರದ ನೇರ ತೆರಿಗೆ ಮಂಡಳಿಯ ಅಧ್ಯಕ್ಷರನ್ನು ಕರ್ನಾಟಕದ ರಾಜ್ಯ ಸಭಾ ಸದಸ್ಯರಾದ ಶ್ರೀ ಬಸವರಾಜ ಪಾಟೀಲ್ ಸೇಡಂರವರ ನೇತೃತ್ವದಲ್ಲಿ ಭೇಟಿ ಮಾಡಿ, ವಿಷಯ ಮನವರಿಕೆ ಮಾಡಿಕೊಡಲಾಗಿದೆ ಮತ್ತು ಪ್ರಸ್ತುತ ಹಣಕಾಸು ಸಚಿವರಾದ ಮಾನ್ಯ ಶ್ರೀ ಅರುಣ್ ಜೇಟ್ಲಿಯವರನ್ನು ರಾಜ್ಯದ ಸಂಸದರು ಹಾಗೂ ಮಾಜಿ ಮುಖ್ಯಮಂತ್ರಿಗಳಾದ ಮಾನ್ಯ ಶ್ರೀ ಬಿ.ಎಸ್. ಯಡಿಯೂರಪ್ಪನವರೊಂದಿಗೆ ನಿಯೋಗದಲ್ಲಿ ಭೇಟಿ ಮಾಡಿ, ವಿಷಯ ಮನವರಿಕೆ ಮಾಡಿಕೊಡಲಾಗಿದೆ. ಇದರ ಪರಿಣಾಮವಾಗಿ ನೇರ ತೆರಿಗೆ ಸಂಹಿತೆ ಜಾರಿ ಮಾಡುವುದರ ಬಗ್ಗೆ ಕೇಂದ್ರದಲ್ಲಿ ಮರು ಚಿಂತನೆ ನಡೆದಿದೆ. ಈ ಪ್ರಯತ್ನ ಪರಿಣಾಮ ನೀಡುತ್ತದೆ ಎಂದು ಆಶಿಸಲಾಗಿದೆ. ಇದೊಂದು ಸಾಧನೆಯೆಂದೇ ಪರಿಗಣಿಸಬಹುದು.

### ಪಿಗ್ಮಿ ಕಲೆಕ್ಷನ್ ಏಜೆಂಟರುಗಳಿಗೆ ಪಾವತಿಸುವ ಕಮೀಷನ್‌ನಲ್ಲಿ ಟಿ.ಡಿ.ಎಸ್. ಮರುಪರಿಶೀಲಿಸುವ ಅವಕಾಶ

ಪಿಗ್ಮಿ ಏಜೆಂಟರುಗಳಿಗೆ ಪಾವತಿಸುವ ಕಮೀಷನ್‌ನಲ್ಲಿ ಟಿ.ಡಿ.ಎಸ್ ಮಾಡದಿರುವಂತೆ ಕರ್ನಾಟಕದ ರಾಜ್ಯ ಸಭಾ ಸದಸ್ಯರಾದ ಶ್ರೀ ಬಸವರಾಜ ಪಾಟೀಲ್ ಸೇಡಂರವರ ನೇತೃತ್ವದಲ್ಲಿ ಕೇಂದ್ರ ತೆರಿಗೆ ಸಲಹಾ ಮಂಡಳಿಯ ಅಧ್ಯಕ್ಷರನ್ನು ಭೇಟಿ ಮಾಡಿ, ವಿಷಯ ಮನವರಿಕೆ ಮಾಡಿದ ಪರಿಣಾಮವಾಗಿ ತೆರಿಗೆ ಮಂಡಳಿ ಅಧ್ಯಕ್ಷರು ಸಕಾರಾತ್ಮಕವಾಗಿ ಸ್ಪಂದಿಸಿದ್ದಾರೆ. ಈ ಬಗ್ಗೆ ಪಿಗ್ಮಿ ಏಜೆಂಟರುಗಳು ಅವರ ವ್ಯಾಪ್ತಿಯ ತೆರಿಗೆ ಅಧಿಕಾರಿಗಳನ್ನು ಭೇಟಿ ಮಾಡಿ, ಟಿ.ಡಿ.ಎಸ್. ಪ್ರಮಾಣದಲ್ಲಿ ರಿಯಾಯಿತಿ ಮತ್ತು ಮರುಪರಿಶೀಲನೆಗಳಿಗೆ ಅವಕಾಶವಿದೆ, ಅದರಂತೆ ಕ್ರಮವಿಡಿ ಎಂದು ಸೂಚಿಸಿರುವುದು ಒಂದು ಸಾಧನೆಯಾಗಿ ಪರಿಗಣಿಸಬಹುದು.

### ಸೌಹಾರ್ದ ಸಹಕಾರಿ ಕಾಯ್ದೆ ತಿದ್ದುಪಡಿ : ರಾಜ್ಯದ ಸಹಕಾರ ಕ್ಷೇತ್ರಕ್ಕೆ ಸಂಬಂಧಿಸಿದ ಶಾಸಕರ ಹಾಗೂ ವಿಧಾನ ಪರಿಷತ್ ಸದಸ್ಯರ ಅವಗಾಹನೆಗೆ

### ಸೌಹಾರ್ದ ಸಹಕಾರಿ ಕ್ಷೇತ್ರದ ಕಾರ್ಯಚಟುವಟಿಕೆಗಳ ಪ್ರಗತಿ

ರಾಜ್ಯದ ಸೌಹಾರ್ದ ಸಹಕಾರಿ ಕಾಯ್ದೆಯಲ್ಲಿ ಅನೇಕ ತೊಂದರೆಗಳಿರುವುದನ್ನು ಮತ್ತು 97ನೇ ಸಂವಿಧಾನ ತಿದ್ದುಪಡಿ ಯಿಂದಾಗಿ ರಾಜ್ಯ ಸರಕಾರ ಸೌಹಾರ್ದ ಸಹಕಾರಿ ಕಾಯ್ದೆಯಲ್ಲಿ ತಿದ್ದುಪಡಿ ಅಗತ್ಯವಿರುವುದನ್ನು ಮತ್ತು ಸೌಹಾರ್ದ ಸಹಕಾರಿಗಳಿಗೆ ಕಾನೂನಿನ ಕೆಲವು ಅಡಚಣೆಗಳಿರುವುದನ್ನು ಮತ್ತು ಒಟ್ಟಾರೆ ಸೌಹಾರ್ದ ಸಹಕಾರಿ ಕ್ಷೇತ್ರದ ಅಭಿವೃದ್ಧಿಯನ್ನು ಮತ್ತು ಸಂಯುಕ್ತ ಸಹಕಾರಿಯ ಕಾರ್ಯಚಟುವಟಿಕೆಗಳನ್ನು ರಾಜ್ಯ ಸಹಕಾರಿ ಕ್ಷೇತ್ರದಲ್ಲಿ ಕಾರ್ಯನಿರ್ವಹಿಸುತ್ತಿರುವ ಶಾಸಕರು ಮತ್ತು ವಿಧಾನ ಪರಿಷತ್ ಸದಸ್ಯರಿಗೆ ಮನವರಿಕೆ ಮಾಡಿಕೊಡುವ ಪ್ರಯತ್ನ ಮಾಡಲಾಗಿದೆ. ಈ ಕಾರ್ಯಕ್ರಮದಲ್ಲಿ ಸುಮಾರು 30 ಜನ ಶಾಸಕರು ಹಾಗೂ ವಿಧಾನ ಪರಿಷತ್ ಸದಸ್ಯರು ಭಾಗವಹಿಸಿದ್ದರು. ಸೌಹಾರ್ದ



ಸಹಕಾರಿ ಕ್ಷೇತ್ರದ ಬಗ್ಗೆ ಎಲ್ಲಾ ಶಾಸಕರು ಹಾಗೂ ವಿಧಾನ ಪರಿಷತ್ ಸದಸ್ಯರು ಮೆಚ್ಚುಗೆ ವ್ಯಕ್ತಪಡಿಸಿ, ಅವರುಗಳ ಪೂರ್ಣ ಬೆಂಬಲವನ್ನು ನೀಡುವುದಾಗಿ ತಿಳಿಸಿದರು. ಸಂಯುಕ್ತ ಸಹಕಾರಿಯ ಆಡಳಿತ ಮಂಡಲಿ ಹಮ್ಮಿಕೊಂಡಿದ್ದ ಇದು ವಿಶೇಷ ಕಾರ್ಯ.

### ಸೌಹಾರ್ದ ಸಹಕಾರಿ ಕಾಯ್ದೆ ತಿದ್ದುಪಡಿ : ಸಹಕಾರ ಸಚಿವರಲ್ಲಿ ನಿಯೋಗ

ಸೌಹಾರ್ದ ಸಹಕಾರ ಕಾಯ್ದೆಗಳಲ್ಲಿನ ತೊಡಕುಗಳನ್ನು ನಿವಾರಿಸಿ ಕೊಡುವಂತೆ ಮನವಿ ಸಲ್ಲಿಸಲು ಸಂಯುಕ್ತ ಸಹಕಾರಿಯ ನೇತೃತ್ವದಲ್ಲಿ ಸಂಯುಕ್ತ ಸಹಕಾರಿಯ ಆಡಳಿತ ಮಂಡಲಿಯವರು ಹಾಗೂ ರಾಜ್ಯದ ಆಯ್ದ ಕೆಲವು ಹಿರಿಯ ಸಹಕಾರಿಗಳ ನಿಯೋಗದಲ್ಲಿ ತೆರಳಿ ಮಾನ್ಯ ಸಹಕಾರ ಸಚಿವರಾದ ಶ್ರೀ ಹೆಚ್.ಎಸ್.ಮಹದೇವ ಪ್ರಸಾದರವರನ್ನು ಭೇಟಿ ಮಾಡಲಾಗಿದೆ. ಪರಿಣಾಮವಾಗಿ ತಿದ್ದುಪಡಿ ಸಂದರ್ಭದಲ್ಲಿ ಸೌಹಾರ್ದ ಸಹಕಾರಿಗಳು ತಾವು ಗಳಿಸಿದ ಲಾಭದಲ್ಲಿ ಈ ಮೊದಲು ಶೇ.63ರಷ್ಟನ್ನು ವಿವಿಧ ಉದ್ದೇಶಗಳಿಗಾಗಿ ವಿಂಗಡಣೆ ಮಾಡಬೇಕಿತ್ತು. ತಿದ್ದುಪಡಿಯಲ್ಲಿ ಈ ಪ್ರಮಾಣವು ಶೇ.52ಕ್ಕೆ ಇಳಿಕೆಯಾಗಿರುವುದು, ಸೌಹಾರ್ದ ಸಹಕಾರಿಗಳು ಈ ಹಿಂದೆ ಶೇ.2 ಶಿಕ್ಷಣ ನಿಧಿಯನ್ನು ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳಕ್ಕೆ ಮತ್ತು ಶೇ.1 ಶಿಕ್ಷಣ ನಿಧಿಯನ್ನು ಸಂಯುಕ್ತ ಸಹಕಾರಿಗೆ ಹೀಗೆ ಒಟ್ಟು ಶೇ.3ರಷ್ಟು ಶಿಕ್ಷಣ ನಿಧಿ ಪಾವತಿಸಬೇಕಿತ್ತು. ಈ ತಿದ್ದುಪಡಿಯಲ್ಲಿ ಶೇ.2 ಶಿಕ್ಷಣ ನಿಧಿಯನ್ನು ಸಂಯುಕ್ತ ಸಹಕಾರಿಗೆ ನೇರವಾಗಿ ಪಾವತಿ ಮಾಡುವಂತೆ ಅವಕಾಶ ಕಲ್ಪಿಸಲಾಯಿತು. ಈ ಮೂಲಕ ಲಾಭಾಂಶದಲಿ ಸೌಹಾರ್ದ ಸಹಕಾರಿಗಳಿಗೆ ಶೇ.1 ಉಳಿತಾಯವಾಗಿರುವುದು ಮಹತ್ವದ

ಸಾಧನೆ. ಅಧಿನಿಯಮ, ನಿಯಮಗಳು ಮತ್ತು ಉಪವಿಧಿಗೆ ವಿರುದ್ಧವಾಗಿ ಹಾಗೂ ನಿರ್ಲಕ್ಷ್ಯದಿಂದ ಕಾರ್ಯನಿರ್ವಹಿಸುವುದರ ಮೂಲಕ ಸಹಕಾರಿಗೆ ನಷ್ಟವನ್ನುಂಟು ಮಾಡಿರುವವರ ವಿರುದ್ಧ ದಾವೆಯನ್ನು ಹೂಡಲು ಅವಕಾಶ, ಸಹಕಾರಿಯ ನಿರ್ದೇಶಕರ ರಾಜೀನಾಮೆ, ಅನರ್ಹತೆ, ಮರಣದ ಕಾರಣದಿಂದ ಆಡಳಿತ ಮಂಡಲಿಯ ಸಭೆಯನ್ನು ನಡೆಸಲು ಉಂಟಾಗುವ ಕೋರಂ ಕೊರತೆ ಉಂಟಾದರೆ ಸಂಯುಕ್ತ ಸಹಕಾರಿಯು ವಿಶೇಷಾಧಿಕಾರಿಯನ್ನು ನೇಮಕ ಮಾಡಲು ಅವಕಾಶ ಕಲ್ಪಿಸಲಾಗಿದೆ. ಸಹ ಸದಸ್ಯತ್ವ ಹೊಂದುವ ಪ್ರಾವಧಾನವನ್ನು ಕೈಬಿಡಲಾಗಿತ್ತು. ತಿದ್ದುಪಡಿಯಲ್ಲಿ ಒಟ್ಟು ಸದಸ್ಯರ ಶೇ.10ರಷ್ಟು ಸಹ ಸದಸ್ಯರನ್ನು ಹೊಂದಲು ಅವಕಾಶ ಕಲ್ಪಿಸಿರುವುದು, ಮುಂಬರುವ ದಿನಗಳಲ್ಲಿ ಸಹ ಸದಸ್ಯರ ಪ್ರಮಾಣವನ್ನು ಶೇಕಡಾ 10 ರಿಂದ ಶೇಕಡಾ 15 ಕ್ಕೆ ಹೆಚ್ಚಿಸಲು ತಿದ್ದುಪಡಿ ಮಾಡಿಕೊಡುವುದಾಗಿ ಮಾನ್ಯ ಸಹಕಾರ ಸಚಿವರು ಒಪ್ಪಿಕೊಂಡಿರುವುದು ಹೀಗೆ ಹಲವಾರು ಅನುಕೂಲಗಳು ಸೌಹಾರ್ದ ಸಹಕಾರಿಗಳಿಗೆ ಆಗಿವೆ. ಇನ್ನೂ ಕೆಲವು ತಿದ್ದುಪಡಿಗಳು ಬಾಕಿ ಉಳಿದಿವೆ. ಅವುಗಳ ಬಗ್ಗೆಯೂ ಪ್ರಯತ್ನ ಜಾರಿಯಲ್ಲಿದೆ.

### ಸೌಹಾರ್ದ ಸಹಕಾರಿಗಳ ವ್ಯಾಜ್ಯಗಳ ವಿಲೇವಾರಿಗಾಗಿ ಪ್ರತ್ಯೇಕ ನ್ಯಾಯಾಲಯ

ರಾಜ್ಯದ ಸೌಹಾರ್ದ ಸಹಕಾರಿಗಳಲ್ಲಿ 10000ಕ್ಕೂ ಹೆಚ್ಚು ವ್ಯಾಜ್ಯಗಳು ಬಾಕಿ ಇವೆ ಎಂಬ ಅಂಕಿ ಅಂಶಗಳ ಹಿನ್ನೆಲೆಯಲ್ಲಿ ಸೌಹಾರ್ದ ಸಹಕಾರಿ ಕ್ಷೇತ್ರಕ್ಕೂ ಒಂದು ಪ್ರತ್ಯೇಕ ನ್ಯಾಯಾಲಯದ ಅಗತ್ಯತೆಯನ್ನು ಮನಗಂಡ ಆಡಳಿತ ಮಂಡಲಿ 2-3 ವರ್ಷಗಳಿಂದ ಸರಕಾರದೊಡನೆ ಸತತವಾಗಿ ಪ್ರಯತ್ನಿಸಿದ ಪರಿಣಾಮವಾಗಿ ಪ್ರತ್ಯೇಕ ನ್ಯಾಯಾಲಯ ಮಂಜೂರಾಗಿದೆ. ಇನ್ನೂ ಕೆಲವೇ ದಿನಗಳಲ್ಲಿ ಅದು ಕಾರ್ಯಾರಂಭ ಮಾಡುತ್ತದೆ. ಇದೊಂದು ಅದ್ವಿತೀಯ ಸಾಧನೆ.

### ವಿಭಾಗೀಯ ಕಛೇರಿಗಳನ್ನು ಪ್ರಾರಂಭಿಸಿರುವುದು ಹಾಗೂ ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳ ನೇಮಕ

ರಾಜ್ಯದಲ್ಲಿ ಸೌಹಾರ್ದ ಸಹಕಾರಿಗಳ ಸಂಖ್ಯಾತ್ಮಕ ಬೆಳವಣಿಗೆಯ



ಮೈಸೂರು ವಿಭಾಗೀಯ ಸಮಾವೇಶ

ಹಿನ್ನೆಲೆಯಲ್ಲಿ ಸಂಯುಕ್ತ ಸಹಕಾರಿಯ ಕಾರ್ಯಚಟುವಟಿಕೆಗಳ ಪ್ರಮಾಣದಲ್ಲಿ ಹೆಚ್ಚಳವನ್ನು ಪರಿಗಣಿಸಿ, ಬೆಳಗಾವಿಯಲ್ಲಿ 2010ರಲ್ಲಿ ಪ್ರಾರಂಭಿಸಿದ ಪ್ರಥಮ ವಿಭಾಗೀಯ ಕಛೇರಿಯ ಜೊತೆಗೆ ಕಲಬುರಗಿ, ಬೆಂಗಳೂರು ಹಾಗೂ ಮೈಸೂರು ಜಿಲ್ಲೆಗಳಲ್ಲಿ ವಿಭಾಗೀಯ ಕಛೇರಿಗಳನ್ನು ಪ್ರಾರಂಭಿಸಲಾಗಿದೆ. ಈ ಕಛೇರಿಗಳು ಪೂರ್ಣ ಪ್ರಮಾಣದಲ್ಲಿ


ಬೆಂಗಳೂರು ವಿಭಾಗೀಯ ಸಮಾವೇಶ

ಕಾರ್ಯನಿರ್ವಹಿಸುತ್ತಿವೆ.

ಸಹಕಾರಿಗಳಿಗೆ ನಿರಂತರ ಭೇಟಿ ನೀಡಿ, ಮಾರ್ಗದರ್ಶನ ನೀಡುವುದಕ್ಕಾಗಿ ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳನ್ನು ನೇಮಕ ಮಾಡಲಾಗಿದೆ. ಈ ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳಿಗೆ ಸೂಕ್ತ ತರಬೇತಿ ನೀಡಲಾಗಿದೆ. ಪ್ರತಿ 3 ಜಿಲ್ಲೆಗಳಿಗೆ ಒಬ್ಬರಂತೆ ಕಾರ್ಯವ್ಯಾಪ್ತಿಯನ್ನು ಈ ಅಧಿಕಾರಿಗಳಿಗೆ ವಹಿಸಲಾಗಿದೆ. ಇದುವರೆಗೆ ಈ ಅಧಿಕಾರಿಗಳು ರಾಜ್ಯದ 1139 ಸೌಹಾರ್ದ ಸಹಕಾರಿಗಳಿಗೆ ಭೇಟಿ ನೀಡಿ, ಸೌಹಾರ್ದ ಸಹಕಾರಿಗಳಿಗೆ ಉತ್ತಮ ಮಾರ್ಗದರ್ಶನ ನೀಡಿದ್ದಾರೆ. ಸಂಯುಕ್ತ ಸಹಕಾರಿಯ ಕಾರ್ಯಚಟುವಟಿಕೆಗಳನ್ನು ಚುರುಕುಗೊಳಿಸಿ, ಸಂಯುಕ್ತ ಸಹಕಾರಿಯು ಸೌಹಾರ್ದ ಸಹಕಾರಿಗಳ ಸ್ನೇಹಿತ, ತತ್ವಜ್ಞಾನಿ ಮತ್ತು ಮಾರ್ಗದರ್ಶಿಯಾಗಿ (ಫ್ರೆಂಡ್, ಫಿಲಾಸಫರ್ ಅಂಡ್ ಗೈಡ್) ಕಾರ್ಯನಿರ್ವಹಿಸುವ ವ್ಯವಸ್ಥೆ ಒಂದು ಉತ್ತಮ ಸಾಧನೆ.

### ಸೌಹಾರ್ದ ಸಹಕಾರಿಗಳಲ್ಲಿ ಬಡ್ಡಿಯೇತರ ಆದಾಯಗಳ ನಿರ್ವಹಣೆಗೆ ಆದ್ಯತೆ, ಪರಿಣಾಮಕಾರಿ ಶಿಕ್ಷಣ ಹಾಗೂ ತರಬೇತಿ ಕಾರ್ಯಕ್ರಮ ಮತ್ತು ಪ್ರಚಾರ ವ್ಯವಸ್ಥೆ

ಸಂಯುಕ್ತ ಸಹಕಾರಿಯು ರಾಜ್ಯದ ಸೌಹಾರ್ದ ಸಹಕಾರಿಗಳ, ಸಹಕಾರಿ ಬ್ಯಾಂಕುಗಳ ಅಧ್ಯಕ್ಷರು, ನಿರ್ದೇಶಕರು, ಮುಖ್ಯ ಕಾರ್ಯನಿರ್ವಾಹಕರು, ಸಿಬ್ಬಂದಿಯವರು ಹಾಗೂ ಸದಸ್ಯರುಗಳಿಗಾಗಿ, ಮಾಧ್ಯಮದವರಿಗಾಗಿ, ಸಹಕಾರಿಯ ಉಪಸಿಬ್ಬಂದಿಯವರಿಗಾಗಿ ಹೀಗೆ ವಿವಿಧ ರೀತಿಯ ತರಬೇತಿ ಕಾರ್ಯಕ್ರಮ ಗಳನ್ನು ನಿರಂತರವಾಗಿ ರಾಜ್ಯಮಟ್ಟದಲ್ಲಿ, ವಿಭಾಗೀಯ ಮಟ್ಟದಲ್ಲಿ ಹಾಗೂ ಜಿಲ್ಲಾ ಮಟ್ಟದಲ್ಲಿ ಹಮ್ಮಿಕೊಳ್ಳುತ್ತಿದೆ. ಈ ತರಬೇತಿ ಕಾರ್ಯಕ್ರಮಗಳ ಗುಣಮಟ್ಟದ ಬಗ್ಗೆ ತರಬೇತಿಗಳಲ್ಲಿ ಭಾಗವಹಿಸಿದ ಸಹಕಾರ ಇಲಾಖೆ, ಸಹಕಾರಿಗಳು ಹಾಗೂ ಸಂಪನ್ಮೂಲ ವ್ಯಕ್ತಿಗಳ ಅಭಿಪ್ರಾಯದಲ್ಲಿ ಉತ್ತಮ ಮಟ್ಟದ್ದಾಗಿದೆ. ತರಬೇತಿ ಕಾರ್ಯಕ್ರಮಗಳ ವಿಷಯ, ಸಂಪನ್ಮೂಲ ವ್ಯಕ್ತಿಗಳ ಆಯ್ಕೆ, ಸಮಯ ನಿರ್ವಹಣೆ, ಅಧ್ಯಯನ ಸಾಹಿತ್ಯ, ತರಬೇತಿ ಕಾರ್ಯಕ್ರಮಗಳಲ್ಲಿ ಭಾಗವಹಿಸಿದ ಶಿಬಿರಾರ್ಥಿಗಳ ವಿವರಗಳು, ಅನಿಸಿಕೆಗಳು ಇತ್ಯಾದಿ ಎಲ್ಲಾ ವಿವರಗಳನ್ನು ವ್ಯವಸ್ಥಿತವಾಗಿ ದಾಖಲಿಸುವ ವಿಧಾನ ಹಾಗೂ ಇತರೆ ವ್ಯವಸ್ಥೆಗಳನ್ನು ಸಮರ್ಪಕವಾಗಿ ನಿರ್ವಹಿಸಲಾಗುತ್ತಿದೆ.

ಕಳೆದ 5 ವರ್ಷಗಳ ಅವಧಿಯಲ್ಲಿ ವಿವಿಧ ರೀತಿಯ 323 ತರಬೇತಿ ಕಾರ್ಯಕ್ರಮಗಳನ್ನು ಸಂಘಟಿಸಿ, ನಿರ್ವಹಿಸಲಾಗಿದೆ. ಈ ತರಬೇತಿ ಕಾರ್ಯಕ್ರಮಗಳಲ್ಲಿ 23529 ಪ್ರತಿನಿಧಿಗಳು ಭಾಗವಹಿಸಿ, ಪ್ರಯೋಜನ

ಪಡೆದಿದ್ದಾರೆ. ತರಬೇತಿ ಕಾರ್ಯಕ್ರಮಗಳು ಬಹುತೇಕ ರಾಜ್ಯದ ಎಲ್ಲಾ ಸೌಹಾರ್ದ ಸಹಕಾರಿಗಳನ್ನು ತಲುಪಿದೆ.

ಪ್ರತಿ ತರಬೇತಿ ಕಾರ್ಯಕ್ರಮಗಳ ನಿರ್ವಹಣೆಗಾಗಿ "ತರಬೇತಿ ಮಾದರಿ" (Training Modules) ಗಳನ್ನು ಸಿದ್ಧಪಡಿಸಿ, ಅದರಂತೆ ಶಿಸ್ತುಬದ್ಧವಾಗಿ ತರಬೇತಿ ಕಾರ್ಯಕ್ರಮಗಳನ್ನು ನಡೆಸುತ್ತಿರುವುದು ತರಬೇತಿ ಕಾರ್ಯಕ್ರಮಗಳ ಯಶಸ್ಸಿಗೆ ಕಾರಣ.

### ಸೌಹಾರ್ದ ಸಹಕಾರಿಗಳ ಸಿಬ್ಬಂದಿಯವರಿಗಾಗಿ 10 ದಿನಗಳ ವ್ಯಕ್ತಿತ್ವ ವಿಕಸನ ತರಬೇತಿ.

ರಾಜ್ಯದ ಸೌಹಾರ್ದ ಸಹಕಾರಿಗಳ ಸಿಬ್ಬಂದಿಯವರಿಗಾಗಿ 2009–10ನೇ ಸಾಲಿನಲ್ಲಿ ಪ್ರಾಯೋಗಿಕವಾಗಿ ಪ್ರಾರಂಭಿಸಿದ್ದ ತರಬೇತಿ ಕಾರ್ಯಕ್ರಮವನ್ನು ಪ್ರತಿ 6 ತಿಂಗಳಿಗೆ ಒಂದು ಬಾರಿಯಂತೆ ಪ್ರತಿ ವರ್ಷ ಜೂನ್ ಹಾಗೂ ಡಿಸೆಂಬರ್ ಮಾಹೆಗಳಲ್ಲಿ ರಾಜ್ಯದ ವಿವಿಧ ಸ್ಥಳಗಳಲ್ಲಿ, ಉತ್ತಮ ಪರಿಸರದಲ್ಲಿ ತರಬೇತಿಯನ್ನು ನಡೆಸಲಾಗುತ್ತಿದೆ. ಇದುವರೆಗೆ 14 ತಂಡಗಳಲ್ಲಿ 600ಕ್ಕೂ ಹೆಚ್ಚು ಸಿಬ್ಬಂದಿಯವರಿಗೆ ತರಬೇತಿ ನೀಡಲಾಗಿದೆ. ಈ ತರಬೇತಿ ಸಂಯುಕ್ತ ಸಹಕಾರಿಯ ಪ್ರತಿಷ್ಠಿತ ತರಬೇತಿಗಳಲ್ಲೊಂದು ಮತ್ತು ಉನ್ನತ ಗುಣಮಟ್ಟದ್ದಾಗಿದ್ದು, ರಾಜ್ಯದ ಸೌಹಾರ್ದ ಸಹಕಾರಿಗಳ, ಸಹಕಾರಿ ಅಧಿಕಾರಿಗಳ, ಸಂಪನ್ಮೂಲ ವ್ಯಕ್ತಿಗಳ ಉತ್ತಮ ಪ್ರತಿಕ್ರಿಯೆ ದೊರೆತಿರುವುದು ಉತ್ತಮ ಸಾಧನೆ.

### ಪಟ್ಟಣ ಸೌಹಾರ್ದ ಸಹಕಾರಿ ಬ್ಯಾಂಕುಗಳ ಸಿಬ್ಬಂದಿಯವರಿಗಾಗಿ 7 ದಿನಗಳ ಬ್ಯಾಂಕಿಂಗ್ ಮೂಲ ಮಾಹಿತಿ ತರಬೇತಿ (Basic Banking Course) ಪ್ರಾರಂಭಿಸಿರುವುದು.

ರಾಜ್ಯದ ಸೌಹಾರ್ದ ಸಹಕಾರಿ ವ್ಯಾಪ್ತಿಯ 18 ಸೌಹಾರ್ದ ಸಹಕಾರಿ ಬ್ಯಾಂಕುಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಹಾಗೂ ನೂತನವಾಗಿ ಬ್ಯಾಂಕುಗಳು ನೇಮಕ ಮಾಡಿಕೊಳ್ಳುವ ಸಿಬ್ಬಂದಿಯವರಿಗಾಗಿ ಬ್ಯಾಂಕಿಂಗ್ ಮಾಹಿತಿ ನೀಡುವ 7 ದಿನಗಳ ತರಬೇತಿಯನ್ನು ಪ್ರಾರಂಭಿಸಲಾಗಿದೆ. ವರ್ಷಕ್ಕೆ ಒಂದು ಬಾರಿಯಂತೆ ಕಳೆದ ಎರಡು ವರ್ಷಗಳಿಂದ ಈ ತರಬೇತಿಯನ್ನು ಅತ್ಯಂತ ಉತ್ತಮ ಗುಣಮಟ್ಟದ ತರಬೇತಿಯಾಗಿ ನಿರ್ವಹಣೆ ಮಾಡಲಾಗುತ್ತಿರುವುದು ಉತ್ತಮ ಸಾಧನೆ.

### ಯುವಕರಿಗಾಗಿ ಸಹಕಾರ ಕುರಿತು ಸಂವಾದ ಕಾರ್ಯಕ್ರಮಗಳು

ಯುವಕರು ಹೆಚ್ಚು ಹೆಚ್ಚಾಗಿ ಈ ಕ್ಷೇತ್ರದಡಿಯಲ್ಲಿ ಬರುವಂತಾಗ ಬೇಕು ಎಂಬ ಉದ್ದೇಶದಿಂದ ರಾಜ್ಯದ ವಿಶ್ವವಿದ್ಯಾನಿಲಯಗಳಲ್ಲಿ "ಯುವಕರು ಹಾಗೂ ಸಹಕಾರ" ಎಂಬ ಸಂವಾದ ಕಾರ್ಯಕ್ರಮಗಳನ್ನು ಪ್ರಾರಂಭಿಸಲಾಗಿದೆ. ಈ ಅವಧಿಯಲ್ಲಿ 6 ವಿಶ್ವವಿದ್ಯಾನಿಲಯಗಳಲ್ಲಿ ಈ ಕಾರ್ಯಕ್ರಮ ನಡೆಸಲಾಗಿದೆ. 1800ಕ್ಕೂ ಹೆಚ್ಚು ಜನರಿಗೆ ಸಹಕಾರಿ ಕ್ಷೇತ್ರದ ಮಾಹಿತಿ ನೀಡಲಾಗಿದೆ.

### ದೂರ ಶಿಕ್ಷಣ 6 ತಿಂಗಳ ಸಹಕಾರ ಡಿಪ್ಲೋಮಾ ತರಬೇತಿ

ರಾಜ್ಯದ ಸೌಹಾರ್ದ ಸಹಕಾರಿ ಸಿಬ್ಬಂದಿಯವರಿಗೆ ಇನ್ನೂ ಹೆಚ್ಚಿನ ಅವಧಿಯ ಉತ್ತಮ ಮಟ್ಟದ ಸಹಕಾರ ಡಿಪ್ಲೋಮಾ ತರಬೇತಿಯನ್ನು ಪ್ರಾರಂಭಿಸಲು ವಿವಿಧ ವಿಶ್ವವಿದ್ಯಾನಿಲಯಗಳಲ್ಲಿ ಯುವಕರು ಹಾಗೂ ಸಹಕಾರ ಕುರಿತು ಸಂವಾದ ಕಾರ್ಯಕ್ರಮ ಏರ್ಪಡಿಸಿದ ಸಂದರ್ಭದಲ್ಲಿ ಚರ್ಚಿಸಿ, ವಿಶ್ವವಿದ್ಯಾನಿಲಯಗಳ ಸಹಯೋಗದಲ್ಲಿ 6 ತಿಂಗಳ ಸಹಕಾರ ಡಿಪ್ಲೋಮಾ ತರಬೇತಿಯನ್ನು ದೂರ ಶಿಕ್ಷಣ ಮೂಲಕ ಪ್ರಾರಂಭಿಸಲು ತೀರ್ಮಾನಿಸಲು ಕ್ರಮವಿಡಲಾಗುತ್ತಿದೆ.

### ಸ್ವಾಭಿಮಾನಿ ಸಹಕಾರಿ ಮಾಸ ಪತ್ರಿಕೆ

ಸ್ವಾಭಿಮಾನಿ ಸಹಕಾರಿ ಮಾಸ ಪತ್ರಿಕೆ ಸೌಹಾರ್ದ ಸಹಕಾರಿ ಕ್ಷೇತ್ರದ ಅಭಿವೃದ್ಧಿಗೆ ಮೀಸಲಾಗಿರುವ ಏಕೈಕ ಪತ್ರಿಕೆ. ಪ್ರಾರಂಭದ ದಿನಗಳಲ್ಲಿ ಇದು ಕೇವಲ 4 ಪುಟದ ಕಪ್ಪು ಬಿಳುಪು ಬಣ್ಣದ ಪತ್ರಿಕೆಯಾಗಿತ್ತು. ಪ್ರಸಕ್ತ ಈ ಅವಧಿಯಲ್ಲಿ ಸೌಹಾರ್ದ ಸಹಕಾರಿ ಕ್ಷೇತ್ರ ಬೆಳೆದಂತೆಲ್ಲ ಸಂಯುಕ್ತ ಸಹಕಾರಿಯ ಕಾರ್ಯಚಟುವಟಿಕೆಗಳ ಗಾತ್ರಕ್ಕೆ ಅನುಗುಣವಾಗಿ ಪತ್ರಿಕೆಯನ್ನು ಈ ಪತ್ರಿಕೆಯನ್ನು ಆಕರ್ಷಕ ವಿನ್ಯಾಸದಲ್ಲಿ ಬಹುಬಣ್ಣದಲ್ಲಿ ಮುದ್ರಿಸಲಾಗುತ್ತಿದೆ ಮತ್ತು ಪುಟಗಳ ಸಂಖ್ಯೆಯನ್ನು 8ಕ್ಕೆ ನಂತರ 12ಕ್ಕೆ ನಂತರ 16ಕ್ಕೆ ಪ್ರಸ್ತುತ 20 ಮತ್ತು ಕೆಲವು ವಿಶೇಷ ಸಂದರ್ಭಗಳಲ್ಲಿ 28 ಪುಟಗಳ ಸಂಚಿಕೆಯನ್ನು ಮುದ್ರಿಸಲಾಗುತ್ತಿದೆ. ಸಂಯುಕ್ತ ಸಹಕಾರಿಯ ಕಾರ್ಯಚಟುವಟಿಕೆಗಳು, ಸೌಹಾರ್ದ ಸಹಕಾರಿ ಕ್ಷೇತ್ರದ ಕಾರ್ಯಚಟುವಟಿಕೆಗಳು, ಸರಕಾರದ ಪ್ರಕಟಣೆಗಳು, ಸಹಕಾರ ಇಲಾಖೆಯ ಸುತ್ತೋಲೆಗಳು, ರಿಸರ್ವ್ ಬ್ಯಾಂಕಿನ ಸುತ್ತೋಲೆಗಳು, ಉತ್ತಮ ಲೇಖನಗಳು, ಸೌಹಾರ್ದ ಸಹಕಾರಿ ಕಾಯ್ದೆಗೆ ಸಂಬಂಧಿಸಿದಂತೆ ಪ್ರಶ್ನೋತ್ತರಗಳನ್ನು, ಸೌಹಾರ್ದ ಸಹಕಾರಿ ಕ್ಷೇತ್ರದ ಸಮಾಚಾರಗಳನ್ನು ಪ್ರಕಟಿಸಲಾಗುತ್ತಿದೆ. ಈ ಪತ್ರಿಕೆಯ ಬಗ್ಗೆ ಸೌಹಾರ್ದ ಸಹಕಾರಿಗಳು ತಮ್ಮ ಮೆಚ್ಚುಗೆಯನ್ನು ವ್ಯಕ್ತಪಡಿಸಿ, ಅನೇಕ ಪತ್ರಗಳನ್ನು ಬರೆಯುತ್ತಿರುವುದು ಹೆಮ್ಮೆಯ ವಿಚಾರ. ಇದೊಂದು ಉತ್ತಮ ಸಾಧನೆ ಎಂದು ಹೇಳಬಹುದಾಗಿದೆ.

### ಪ್ರಕಟಣೆಗಳು

ಸೌಹಾರ್ದ ಸಹಕಾರಿ ಕ್ಷೇತ್ರದ ಪ್ರಗತಿಗಾಗಿ ಸಂಯುಕ್ತ ಸಹಕಾರಿಯು



ಪ್ರಕಟಣೆಗಳ ಬಿಡುಗಡೆ

ಅನೇಕ ಪ್ರಕಟಣೆಗಳನ್ನು ಹೊರತರುವ ಉದ್ದೇಶ ಹೊಂದಿದೆ. ಸೌಹಾರ್ದ ಸಹಕಾರಿ ಕಾಯ್ದೆ ಹಾಗೂ ನಿಯಮಗಳ ಕನ್ನಡ ಹಾಗೂ ಆಂಗ್ಲ ಭಾಷೆಯ ಪ್ರಕಟಣೆಗಳು, ಸೌಹಾರ್ದ ಸಹಕಾರಿಗಳ ಮಾರ್ಗದರ್ಶಿ, ಮಾದರಿ ಉಪವಿಧಿಗಳು, ವಿಶಿಷ್ಠ ಸಹಕಾರಿ ಸಂಸ್ಥೆಗಳು, ವಿಶಿಷ್ಠ ಸಹಕಾರಿಗಳು, ಸಂಯುಕ್ತ ಸಹಕಾರಿಯ ಉಪವಿಧಿಗಳು, ಸೌಹಾರ್ದ ಸಹಕಾರಿಗಳಿಗೆ ಅನ್ವಯಿಸುವ ವಿವಿಧ ತೆರಿಗೆ ಕಾಯ್ದೆಗಳ ತೆರಿಗೆ ಮಾಹಿತಿ ಕೈಪಿಡಿ, ಇ ಸ್ಟ್ಯಾಂಪಿಂಗ್ ಕೈಪಿಡಿ, ಸಹಕಾರಿ ಕ್ಷೇತ್ರದ ವ್ಯಾಜ್ಯಗಳಿಗೆ ಸಂಬಂಧಿಸಿದಂತೆ ಹೈಕೋರ್ಟ್‌ನಲ್ಲಿ ಆಗಿರುವ ತೀರ್ಪುಗಳ ಸಂಗ್ರಹದ ಪುಸ್ತಕ ಹೀಗೆ

ಹಲವಾರು ಪ್ರಕಟಣೆಗಳನ್ನು ಮುದ್ರಿಸಿ, ಸೌಹಾರ್ದ ಸಹಕಾರಿ ಕ್ಷೇತ್ರದ ಅಭಿವೃದ್ಧಿಗೆ ಮಹತ್ವದ ಕಾಣಿಕೆಯನ್ನು ನೀಡುತ್ತಿದೆ. ಹೈಕೋರ್ಟ್‌ನಲ್ಲಿ ಆಗಿರುವ ತೀರ್ಪುಗಳ ಸಂಗ್ರಹದ ಪುಸ್ತಕದ ಪ್ರಕಟಣೆಗೆ ರಾಷ್ಟ್ರ ವ್ಯಾಪಿ ಮೆಚ್ಚುಗೆ ವ್ಯಕ್ತವಾಗಿರುವುದು ಅತ್ಯಂತ ಹೆಮ್ಮೆಯ ವಿಷಯ.

### ಸಾಕ್ಷ್ಯ ಚಿತ್ರ

ಸೌಹಾರ್ದ ಸಹಕಾರಿ ಕ್ಷೇತ್ರದ ಉಗಮ, ಕಾರ್ಯಚಟುವಟಿಕೆಗಳು, ಸಂಯುಕ್ತ ಸಹಕಾರಿಯ ಕಾರ್ಯಚಟುವಟಿಕೆಗಳು, ಹಿರಿಯ ಸಹಕಾರಿಗಳ, ಅಧಿಕಾರಿಗಳ ಅಭಿಪ್ರಾಯ ಹಾಗೂ ಅನಿಸಿಕೆಗಳನ್ನು ಸಾಕ್ಷ್ಯ ಚಿತ್ರ ರೂಪದಲ್ಲಿ ಚಿತ್ರಿಸಲಾಗಿದೆ. ರಾಜ್ಯದ ಸೌಹಾರ್ದ ಸಹಕಾರಿ ಕ್ಷೇತ್ರದ ವಿವಿಧ ಸಮಾರಂಭಗಳಲ್ಲಿ ಪ್ರದರ್ಶಿಸಲಾಗುತ್ತಿದೆ. ಸಿ.ಡಿ.ಗಳನ್ನು ಕನಿಷ್ಠ ದರದಲ್ಲಿ ಸೌಹಾರ್ದ ಸಹಕಾರಿಗಳಿಗೆ ಹಾಗೂ ಸಹಕಾರಿ ಪ್ರಮುಖರಿಗೆ ವಿತರಿಸಲಾಗುತ್ತಿದೆ ಮತ್ತು ಕಾಲ ಕಾಲಕ್ಕೆ ಈ ಸಾಕ್ಷ್ಯ ಚಿತ್ರದಲ್ಲಿ ಬದಲಾವಣೆಗಳನ್ನು ಅಳವಡಿಸಿರುವುದು ಒಂದು ಉತ್ತಮ ಸಾಧನೆ. ಕರ್ನಾಟಕದಲ್ಲಿ ರಾಜ್ಯ ಮಟ್ಟದ ಸಹಕಾರಿ ಸಂಸ್ಥೆಗಳ ಹಾಗೂ ಕಾರ್ಯಚಟುವಟಿಕೆಗಳ ಸಾಕ್ಷ್ಯ ಚಿತ್ರವನ್ನು ಹೊಂದಿರುವ ಕೆಲವೇ ಸಂಸ್ಥೆಗಳಲ್ಲಿ ಸಂಯುಕ್ತ ಸಹಕಾರಿಯೂ ಒಂದು.

### ಸಂಯುಕ್ತ ಸಹಕಾರಿಯ ವೆಬ್‌ಸೈಟ್

ಈ ಅವಧಿಯಲ್ಲಿ ಸಂಯುಕ್ತ ಸಹಕಾರಿಯು ತನ್ನದೇ ಆದ ವೆಬ್‌ಸೈಟ್ ಹೊಂದಿದೆ. ಈ ಮೂಲಕ ಸಂಯುಕ್ತ ಸಹಕಾರಿಯ ಚಟುವಟಿಕೆಗಳು, ಸೌಹಾರ್ದ ಸಹಕಾರಿಗಳಿಗೆ ಬೇಕಾಗುವ ಅಗತ್ಯ ಮಾಹಿತಿಗಳನ್ನು ಅಳವಡಿಸಿ, ಸಹಕಾರ ಕ್ಷೇತ್ರದಲ್ಲಿ ಸರಕಾರದ, ಸಹಕಾರ ಇಲಾಖೆಯ ಹಾಗೂ ವಿವಿಧ ಸಹಕಾರ ಸಂಸ್ಥೆಗಳ ವೆಬ್‌ಸೈಟ್‌ಗಳ ಸಾಲಿನಲ್ಲಿ ಗುರುತಿಸಿಕೊಂಡಿದೆ.

### ರಾಜ್ಯ, ರಾಷ್ಟ್ರ ಹಾಗೂ ಅಂತರ ರಾಷ್ಟ್ರೀಯ ಕಾರ್ಯಕ್ರಮಗಳಲ್ಲಿ ಭಾಗವಹಿಸುವಿಕೆ ಹಾಗೂ ವಸ್ತು ಪ್ರದರ್ಶನ ಮತ್ತು ಮಾರಾಟ ಮಳಿಗೆಗಳ ವ್ಯವಸ್ಥೆ

ರಾಜ್ಯದಲ್ಲಿ ಅಥವಾ ರಾಷ್ಟ್ರ ಮಟ್ಟದಲ್ಲಿ ಜರುಗುವ ಸಹಕಾರಿ ಕ್ಷೇತ್ರದ ಯಾವುದೇ ಮಟ್ಟದ ಕಾರ್ಯಕ್ರಮಗಳಿರಲಿ ಸಂಯುಕ್ತ ಸಹಕಾರಿಗೆ ಭಾಗವಹಿಸುವ ಬಗ್ಗೆ ಕರೆ ಬರುವಂತೆ ಸಂಯುಕ್ತ ಸಹಕಾರಿ ಕಾರ್ಯನಿರ್ವಹಿಸುತ್ತಿರುವುದು ಮಹತ್ವದ ಸಾಧನೆ. ಹೀಗೆ ಕರೆ ಬಂದಾಗ ಸೌಹಾರ್ದ ಸಹಕಾರಿ ಕ್ಷೇತ್ರದ ಸಾಧನೆಗಳ ಪ್ರಚಾರ ಹಾಗೂ ಪ್ರಕಟಣೆಗಳ ಮಾರಾಟ ವ್ಯವಸ್ಥೆಯನ್ನು ಮಾಡಲಾಗುತ್ತದೆ.

### ಮೈಸೂರು ವಿಶ್ವ ವಿದ್ಯಾಲಯದಿಂದ ಸಂಯುಕ್ತ ಸಹಕಾರಿಯ ಹಾಗೂ ಸೌಹಾರ್ದ ಸಹಕಾರಿ ಕ್ಷೇತ್ರದ ಕಾರ್ಯಚಟುವಟಿಕೆಗಳ ಮೌಲ್ಯಮಾಪನ

ಸಂಯುಕ್ತ ಸಹಕಾರಿಯ ಮಾರ್ಗದರ್ಶನದಲ್ಲಿ ಸೌಹಾರ್ದ ಸಹಕಾರಿ ಕ್ಷೇತ್ರದ ಕಳೆದ 15 ವರ್ಷಗಳ ಸಾಧನೆಗಳ ಅವಲೋಕನ, ಕಾರ್ಯಚಟುವಟಿಕೆಗಳ ಮೌಲ್ಯಮಾಪನ ಮಾಡಿಸಿ, ರಾಜ್ಯದ ಸಹಕಾರಿಗಳಿಗೆ, ಸಾರ್ವಜನಿಕರಿಗೆ ಹಾಗೂ ಸರಕಾರಕ್ಕೆ ಅಧಿಕೃತವಾಗಿ ತಿಳಿಸುವ ಕಾರ್ಯ ಅಗತ್ಯವೆಂದು ಭಾವಿಸಿ, ಸಂಯುಕ್ತ ಸಹಕಾರಿಯ ಆಡಳಿತ ಮಂಡಲಿಯವರು ಈ ಕಾರ್ಯವನ್ನು ಮೈಸೂರು ವಿಶ್ವವಿದ್ಯಾನಿಲಯಕ್ಕೆ ವಹಿಸಿಕೊಟ್ಟಿರುವುದು ಅತ್ಯಂತ ಮಹತ್ವದ ಹೆಜ್ಜೆ. ಮೌಲ್ಯಮಾಪನ ವರದಿಯು ಸೌಹಾರ್ದ ಸಹಕಾರಿ ಕ್ಷೇತ್ರದ ಕಾರ್ಯಚಟುವಟಿಕೆಗಳನ್ನು ಸುಧಾರಿಸುವಲ್ಲಿ ಮತ್ತು ಸಂಯುಕ್ತ ಸಹಕಾರಿಯ ಕಾರ್ಯಚಟುವಟಿಕೆಗಳನ್ನು ಇನ್ನೂ ಹೆಚ್ಚು ಪರಿಣಾಮಕಾರಿಯಾಗಿ ನಿರ್ವಹಿಸಲು ಸಾಧ್ಯವಾಗಬಹುದು ಎಂದು ಭಾವಿಸಲಾಗಿದೆ. ರಾಜ್ಯಮಟ್ಟದ ಯಾವುದೇ ಸಹಕಾರಿ ಸಂಸ್ಥೆಗಳು ತಮ್ಮ ಚಟುವಟಿಕೆಗಳ ಮತ್ತು ಸಹಕಾರಿ ಕ್ಷೇತ್ರದ ಕಾರ್ಯಚಟುವಟಿಕೆಗಳನ್ನು ಮೌಲ್ಯಮಾಪನ ಮಾಡಿಸುವ ಕ್ರಮವಿಟ್ಟಿರುವುದಿಲ್ಲ. ಇದು ಸಂಯುಕ್ತ ಸಹಕಾರಿಯ ಆಡಳಿತ ಮಂಡಲಿಯ ದಿಟ್ಟ ಹೆಜ್ಜೆ.

### ಐಎಸ್‌ಓ ಪ್ರಮಾಣ ಪತ್ರ

ಸಂಯುಕ್ತ ಸಹಕಾರಿಯ ಶಿಸ್ತುಬದ್ಧ ಕಾರ್ಯಚಟುವಟಿಕೆಗಳು,



ಐಎಸ್‌ಓ ಪ್ರಮಾಣಪತ್ರ ಸ್ವೀಕಾರ

ಕ್ರಮಬದ್ಧ ಕಛೇರಿ, ಆಡಳಿತ ವ್ಯವಸ್ಥೆ ದಾಖಲಾತಿಗಳ ಉತ್ತಮ ನಿರ್ವಹಣೆಯನ್ನು ಅಧ್ಯಯನ ಮಾಡಿದ ಅಂತರರಾಷ್ಟ್ರೀಯ ಸಂಸ್ಥೆಯವರು ಸಂಯುಕ್ತ ಸಹಕಾರಿಗೆ "ಐಎಸ್‌ಓ 9001:2008 ಪ್ರಮಾಣ ಪತ್ರವನ್ನು ನೀಡಿರುವುದು ಸಂಯುಕ್ತ ಸಹಕಾರಿಯ ಉತ್ತಮ ಕಾರ್ಯಚಟುವಟಿಕೆಗಳ ಕೈಗನ್ನಡಿಯಾಗಿದೆ. ಇದೊಂದು ಅಪೂರ್ವ ಸಾಧನೆ.

### ಸಂಯುಕ್ತ ಸಹಕಾರಿಗೆ ಸ್ವಂತ ಕಟ್ಟಡ ಖರೀದಿ

ರಾಜ್ಯದ ಸೌಹಾರ್ದ ಸಹಕಾರಿ ಚಳುವಳಿಯ ನೇತೃತ್ವ ವಹಿಸಿರುವ ಸಂಯುಕ್ತ ಸಹಕಾರಿಯ ಕಾರ್ಯಚಟುವಟಿಕೆಗಳು ಪ್ರತಿವರ್ಷ ಬೆಳೆಯುತ್ತಲೇ ಇವೆ. ವಿಶೇಷವಾಗಿ ಪ್ರಸಕ್ತ ಈ ಅವಧಿಯಲ್ಲಿ ಸೌಹಾರ್ದ ಸಹಕಾರಿಗಳ ಸಂಖ್ಯೆಗನುಸಾರವಾಗಿ ವಿಭಾಗೀಯ ಕಛೇರಿಗಳು, ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳ ನೇಮಕ, ಪ್ರತ್ಯೇಕ ಕೋರ್ಟ್ ಮಂಜೂರಾತಿ ಇವೆಲ್ಲವುಗಳ ನಿರ್ವಹಣೆಗಾಗಿ ಸಂಯುಕ್ತ ಸಹಕಾರಿಗೆ ತನ್ನದೇ ಆದ ಸ್ವಂತ ಕಟ್ಟಡದ ಅವಶ್ಯಕತೆ ಇತ್ತು. ಈ ಬಗ್ಗೆ ಬಿ.ಡಿ.ಎ.ದೊಂದಿಗೆ, ಸರಕಾರದೊಂದಿಗೆ ವ್ಯವಹರಿಸಿ, ಸೂಕ್ತ ನಿವೇಶನ ಪಡೆಯುವ ಪ್ರಯತ್ನಕ್ಕೆ ಪರಿಹಾರ ಸಿಗದ ಹಿನ್ನೆಲೆಯಲ್ಲಿ ಬೆಂಗಳೂರು ನಗರ ವ್ಯಾಪ್ತಿಯಲ್ಲಿ ಸೂಕ್ತ ನಿವೇಶನದ ಹುಡುಕಾಟ ನಡೆಸಿ, ಕೊನೆಗೆ ಮಲ್ಲೇಶ್ವರಂನ 18ನೇ ಕ್ರಾಸಿನ ಹತ್ತಿರ ಒಂದು 90x78 ಅಳತೆಯ ಅರ್ಧ ಭಾಗದಲ್ಲಿ (7020 ಚದರ ಅಡಿ) ಹಳೆಯ ಕಟ್ಟಡವಿರುವ ನಿವೇಶನವನ್ನು ಅತ್ಯಂತ ಪಾರದರ್ಶಕವಾಗಿ ವ್ಯವಹರಿಸಿ ರೂ. 12 ಕೋಟಿಗಳಿಗೆ ಖರೀದಿಸಿ, ಮಾನ್ಯ ಸಹಕಾರ ಸಚಿವರಿಂದಲೇ ಶಂಕು ಸ್ಥಾಪನೆಯನ್ನು ನೆರವೇರಿಸಿರುವುದು ಶ್ಲಾಘನೀಯ ಉತ್ತಮ



ಸಂಯುಕ್ತ ಸಹಕಾರಿಗೆ ಸಹಕಾರ ಸಚಿವರ ಭೇಟಿ



ರಾಷ್ಟ್ರೀಯ ಸಹಕಾರ ಯೂನಿಯನ್ ಅಧ್ಯಕ್ಷರ ಭೇಟಿ

## ಸಂಯುಕ್ತ ಸಹಕಾರಿಗೆ ಗಣ್ಯರ ಭೇಟಿ

ಸಂಯುಕ್ತ ಸಹಕಾರಿಯ ಹಾಗೂ ಸೌಹಾರ್ದ ಸಹಕಾರಿ ಕ್ಷೇತ್ರದ ಕಾರ್ಯಚಟುವಟಿಕೆಗಳ ಮಾಹಿತಿ ಪಡೆಯಲು ಸಂಯುಕ್ತ ಸಹಕಾರಿಗೆ ನಿರಂತರವಾಗಿ ಗಣ್ಯರು ಹಾಗೂ ಸಹಕಾರಿಗಳು ಭೇಟಿ ನೀಡುತ್ತಿರುವುದು ನಾವು ಸೌಹಾರ್ದ ಸಹಕಾರಿಗಳು ಸಹಕಾರಿ ಕ್ಷೇತ್ರದ ಮುಂಚೂಣಿಯಲ್ಲಿದ್ದೇವೆ ಎಂಬುದಕ್ಕೆ ಸಾಕ್ಷೀಭೂತವಾಗಿದೆ. ಸಹಕಾರ ಸಚಿವರಾದ ಮಾನ್ಯ ಶ್ರೀ ಹೆಚ್.ಎಸ್.ಮಹದೇವ ಪ್ರಸಾದ್, ರಾಷ್ಟ್ರೀಯ ಸಹಕಾರ ಯೂನಿಯನ್‌ನ ಅಧ್ಯಕ್ಷರಾದ ಡಾ. ಚಂದ್ರಪಾಲ ಸಿಂಗ್ ಯಾದವ್, ಮುಖ್ಯ ಕಾರ್ಯನಿರ್ವಾಹಣಾಧಿಕಾರಿಗಳಾದ ಡಾ. ದಿನೇಶ್, ರಾಷ್ಟ್ರೀಯ ಸಹಕಾರ ಭಾರತಿಯ ಮಾಜಿ ಅಧ್ಯಕ್ಷರು ಹಾಗೂ ಇಫ್ಕೋ ಸಹಕಾರ ರತ್ನ ಪ್ರಶಸ್ತಿ ಪುರಸ್ಕೃತರಾದ ಶ್ರೀ ಸತೀಶ್ ಮರಾಠೆ, ಉಪಾಧ್ಯಕ್ಷರಾದ ಶ್ರೀ ಕೊಂಕೋಡಿ ಪದ್ಮನಾಭ, ರಾಜ್ಯ ಮಹಾಮಂಡಳಗಳ ಅಧ್ಯಕ್ಷರು, ಸಹಕಾರ ಇಲಾಖೆಯ ಕಾರ್ಯದರ್ಶಿಗಳಾದ ಡಾ. ಸಿ.ಸೋಮಶೇಖರ ಹಾಗೂ ಅನೇಕ ಹಿರಿಯ ಅಧಿಕಾರಿಗಳು, ಅನೇಕ ಶಾಸಕರು, ಸಹಕಾರಿ ಮುಖಂಡರು ಭೇಟಿ ನೀಡಿರುವುದು ಹೆಮ್ಮೆಯ ವಿಷಯ.

ಸಾಧನೆಯಾಗಿದೆ.

### ಎನ್.ಸಿ.ಡಿ.ಸಿ. ಹಾಗೂ ನಬಾರ್ಡ್‌ಗಳಿಗೆ ಭೇಟಿ ನೀಡಿ, ಯೋಜನೆಗಳನ್ನು ಸೌಹಾರ್ದ ಸಹಕಾರಿಗಳಿಗೆ ವಿಸ್ತರಿಸುವಂತೆ, ನೀಡುವಂತೆ ಮನವಿ

ಎನ್.ಸಿ.ಡಿ.ಸಿ. ಹಾಗೂ ನಬಾರ್ಡ್‌ಗಳಿಗೆ ಭೇಟಿ ನೀಡಿ, ಯೋಜನೆಗಳನ್ನು ಸೌಹಾರ್ದ ಸಹಕಾರಿಗಳಿಗೆ ವಿಸ್ತರಿಸುವಂತೆ, ನೀಡುವಂತೆ ಮನವಿ ಎನ್.ಸಿ.ಡಿ.ಸಿ. ಹಾಗೂ ನಬಾರ್ಡ್‌ನ ಮುಖ್ಯ ಅಧಿಕಾರಿಗಳನ್ನು ಭೇಟಿ ಮಾಡಿ, ಸಂಯುಕ್ತ ಸಹಕಾರಿಯ ಹಾಗೂ ಸೌಹಾರ್ದ ಸಹಕಾರಿಗಳ ಕಾರ್ಯಚಟುವಟಿಕೆಗಳನ್ನು ಪರಿಚಯಿಸಿ, ಸೌಹಾರ್ದ ಸಹಕಾರಿಗಳ ಮೂಲಕ ಅವರ ಸಂಸ್ಥೆಗಳ ಯೋಜನೆಗಳನ್ನು ಜಾರಿ ಮಾಡಲು ಕ್ರಮವಿಡುವಂತೆ ವಿನಂತಿಸಲಾಗಿದೆ. ಈ ಅಧಿಕಾರಿಗಳು ಸಕಾರಾತ್ಮವಾಗಿ ಸ್ಪಂದಿಸಿದ್ದಾರೆ. ಎನ್.ಸಿ.ಡಿ.ಸಿ. ಅಧಿಕಾರಿಗಳು ಈಗಾಗಲೇ ರಾಜ್ಯದ ಸೌಹಾರ್ದ ಸಹಕಾರಿಗಳಿಗೆ ನೇರವಾಗಿ ಸಾಲ ನೀಡಲು ಮುಂದೆ ಬಂದಿರುವುದು ಸ್ವಾಗತಾರ್ಹ ಬೆಳವಣಿಗೆ.

ನಬಾರ್ಡ್ ಗವರ್ನಿಂಗ್ ಕೌನ್ಸಿಲ್ ಸದಸ್ಯರಾದ ಶ್ರೀ ಮಂಜಪ್ಪ ಹೊಸಬಾಳೆಯವರು ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ಆರ್.ಎನ್.ದೇಶಪಾಂಡೆಯವರು ಹಾಗೂ ಸಂಯುಕ್ತ ಸಹಕಾರಿಯ ಪದಾಧಿಕಾರಿಗಳು ನಬಾರ್ಡ್ ಅಧಿಕಾರಿಗಳೊಂದಿಗೆ ಚರ್ಚಿಸಿದ್ದಾರೆ. ನಬಾರ್ಡ್ ಹಾಗೂ ನಬಾರ್ಡ್ ಮೈಕ್ರೋ ಫೈನಾನ್ಸ್ ಸಂಸ್ಥೆಗಳ ಹಣಕಾಸು ನೆರವು ಯೋಜನೆಗಳನ್ನು ಸೌಹಾರ್ದ ಸಹಕಾರಿಗಳಿಗೆ ವಿಸ್ತರಿಸುವ ಬಗ್ಗೆ ವಿನಂತಿಸಲಾಗಿದೆ. ಈ ಸಂಸ್ಥೆಗಳು ಸೌಹಾರ್ದ ಸಹಕಾರಿಗಳಿಗೆ ಹಣಕಾಸಿನ ನೆರವನ್ನು ನೀಡುವ ಬಗ್ಗೆ ತೀರ್ಮಾನಿಸಿದ್ದಾರೆ. ಮುಂಬರುವ ದಿನಗಳಲ್ಲಿ ಈ ಯೋಜನೆಗಳ ಉಪಯೋಗವನ್ನು ಸೌಹಾರ್ದ ಸಹಕಾರಿಗಳು ಪಡೆದುಕೊಳ್ಳಲು ಸಾಧ್ಯವಾಗುತ್ತದೆ. ಇದು ಈ ಅವಧಿಯ ಇನ್ನೊಂದು ಸಾಧನೆ.

### ಶಾಸನಾತ್ಮಕ, ನಿಯಂತ್ರಣ ಕಾರ್ಯಗಳ ಯಶಸ್ವಿ ನಿರ್ವಹಣೆಗೆ ಆದ್ಯತೆ

ಈ ಅವಧಿಯಲ್ಲಿ ರಾಜ್ಯದ ಸೌಹಾರ್ದ ಸಹಕಾರಿಗಳಿಗೆ ಸಲಹೆ ಹಾಗೂ ಮಾರ್ಗದರ್ಶನ ಮಾಡುವುದರ ಜೊತೆಗೆ ಈ ಅವಧಿಯಲ್ಲಿ ಪ್ರತಿ ವರ್ಷ ಸಹಕಾರಿಗಳ ಪರಿವೀಕ್ಷಣೆ ನಡೆಸಲಾಗಿದೆ. ಕಾನೂನಾತ್ಮಕವಾಗಿ ಕಾರ್ಯನಿರ್ವಹಿಸದ ಕೆಲವು ಸಹಕಾರಿಗಳ ಆಡಳಿತ ಮಂಡಲಿಯನ್ನು ರದ್ದುಗೊಳಿಸಿ, ಆಡಳಿತಾಧಿಕಾರಿಗಳನ್ನು ನೇಮಿಸಲಾಗಿದೆ. ಕೆಲವುಗಳಿಗೆ ವಿಶೇಷಾಧಿಕಾರಿಗಳನ್ನು ನೇಮಿಸಲಾಗಿದೆ. ಸ್ಥಗಿತಗೊಂಡಿರುವ ಕೆಲವು ಸಹಕಾರಿಗಳನ್ನು ಸಮಾಪನೆಗೆ ಶಿಫಾರಸ್ಸು ಮಾಡಲಾಗಿದೆ. ಕೆಲವು ಸೌಹಾರ್ದ ಸಹಕಾರಿಗಳ ಮೇಲೆ ಕ್ರಿಮಿನಲ್ ಕೇಸ್ ಹಾಕಲಾಗಿದೆ. ಸೌಹಾರ್ದ ಸಹಕಾರಿ ಕಾಯ್ದೆ ತಿದ್ದುಪಡಿ, 2013 ಜಾರಿಗೆ ಬರುವ ಪೂರ್ವದಲ್ಲಿ ನಿಗದಿತ ಅವಧಿಯೊಳಗೆ ಲೆಕ್ಕಪರಿಶೋಧನೆಯನ್ನು ಮಾಡಿಸಿರದ ಸೌಹಾರ್ದ ಸಹಕಾರಿಗಳಿಗೆ ಲೆಕ್ಕಪರಿಶೋಧಕರ ನೇಮಕಾತಿ ಮಾಡಲಾಗಿದೆ. ಪ್ರತಿವರ್ಷ ಸೌಹಾರ್ದ ಸಹಕಾರಿಗಳ ಲೆಕ್ಕಪರಿಶೋಧನಾ ವರದಿಗಳನ್ನು ಪರಿಶೀಲಿಸಿ, ವಿಮರ್ಶಿಸಿ, ಅವುಗಳ ಮೇಲೆ ಕ್ರಮವಿಡಲಾಗುತ್ತಿದೆ.

### ಸಹಕಾರ ಸಪ್ತಾಹ ಆಚರಣೆ ಸಂದರ್ಭದಲ್ಲಿ ಪ್ರತಿ ವರ್ಷ 5 ಜನ ಉತ್ತಮ ಸಹಕಾರಿಗಳಿಗೆ ಹಾಗೂ ರಾಜ್ಯದ 5 ಉತ್ತಮ ಸೌಹಾರ್ದ ಸಹಕಾರಿಗಳಿಗೆ ಪ್ರಶಸ್ತಿ ಹಾಗೂ ಸನ್ಮಾನ

ಪ್ರಸಕ್ತ ಈ ಅವಧಿಯಲ್ಲಿ ಪ್ರತಿವರ್ಷ ನವೆಂಬರ್‌ನಲ್ಲಿ ಜರುಗುವ ಅಖಿಲ ಭಾರತ ಸಹಕಾರ ಸಪ್ತಾಹದ ಆಚರಣೆಯಲ್ಲಿ ಸಕ್ರಿಯವಾಗಿ ಭಾಗವಹಿಸುತ್ತಾ ಬರಲಾಗಿದೆ. ಈ ಸಂದರ್ಭದಲ್ಲಿ ಪ್ರತಿ ವರ್ಷ 5 ಜನ



ಉತ್ತಮ ಸಹಕಾರಿಗಳಿಗೆ ಹಾಗೂ ರಾಜ್ಯದ 5 ಉತ್ತಮ ಸೌಹಾರ್ದ ಸಹಕಾರಿಗಳಿಗೆ ಪ್ರಶಸ್ತಿ ಹಾಗೂ ಸನ್ಮಾನ



ಸಹಕಾರ ಸಪ್ತಾಹದ ಉದ್ಘಾಟನಾ ಸಮಾರಂಭ

ಉತ್ತಮ ಸಹಕಾರಿಗಳಿಗೆ ಹಾಗೂ ರಾಜ್ಯದ 5 ಉತ್ತಮ ಸೌಹಾರ್ದ ಸಹಕಾರಿಗಳಿಗೆ ಪ್ರಶಸ್ತಿ ಹಾಗೂ ಸನ್ಮಾನಗಳನ್ನ ನೀಡುವ ವ್ಯವಸ್ಥೆಯನ್ನು ಈ ಅವಧಿಯಲ್ಲಿ ಹಮ್ಮಿಕೊಳ್ಳಲಾಗಿದೆ. ತುಮಕೂರು, ಬೆಂಗಳೂರು, ಕೋಲಾರ, ಬೆಳಗಾವಿ ಹಾಗೂ ಕಲಬುರಗಿಯಲ್ಲಿ ಉಳಿದ ರಾಜ್ಯ ಮಟ್ಟದ ಸಹಕಾರಿ ಸಂಸ್ಥೆಗಳು ಹಾಗೂ ಜಿಲ್ಲೆಯ ಸ್ಥಳೀಯ ಸಹಕಾರಿ ಸಂಸ್ಥೆಗಳ ಸಹಯೋಗದೊಂದಿಗೆ ಸಪ್ತಾಹವನ್ನು ಅರ್ಥಪೂರ್ಣವಾಗಿ ಆಚರಿಸಲಾಗುವ ಸಂದರ್ಭವನ್ನು ಉಪಯೋಗಿಸಿಕೊಂಡು, ಸೌಹಾರ್ದ ಸಹಕಾರಿ ಕ್ಷೇತ್ರಕ್ಕೆ ಉತ್ತಮ ಪ್ರಚಾರ ನೀಡುವ ಕ್ರಮವಿಡಲಾಗಿದೆ. ಬೆಳಗಾವಿಯಲ್ಲಿ ನಡೆದ ಕಾರ್ಯಕ್ರಮದ ಸಂಪೂರ್ಣ ಉಸ್ತುವಾರಿಯನ್ನು ಸಂಯುಕ್ತ ಸಹಕಾರಿಯೇ ವಹಿಸಿಕೊಂಡು ಕಾರ್ಯಕ್ರಮಕ್ಕೆ ಕರ್ನಾಟಕದ ಘನತೆವೆತ್ತ ಮಾನ್ಯ ರಾಜ್ಯಪಾಲರನ್ನು, ಮಾನ್ಯ ಸಹಕಾರ ಮಂತ್ರಿಗಳನ್ನು, ಜಿಲ್ಲಾ ಉಸ್ತುವಾರಿ ಮಂತ್ರಿಗಳನ್ನು ಮತ್ತು ರಾಜ್ಯದ ಮಹಾಮಂಡಳಗಳ ಅಧ್ಯಕ್ಷರುಗಳನ್ನು, ಸ್ಥಳೀಯ ಸಂಸದರು ಹಾಗೂ ಶಾಸಕರು ಹಾಗೂ 5,000ಕ್ಕೂ ಹೆಚ್ಚು ಸಹಕಾರಿಗಳು ಭಾಗವಹಿಸಿ, ಸೌಹಾರ್ದ ಸಹಕಾರಿ ಕ್ಷೇತ್ರದ ಬೆಳವಣಿಗೆಗೆ ತಮ್ಮ ಮೆಚ್ಚುಗೆ ಸೂಚಿಸುವುದರೊಂದಿಗೆ ಸಂಯುಕ್ತ ಸಹಕಾರಿಯ ನೇತೃತ್ವದಲ್ಲಿ ನಡೆದ ಅತ್ಯಂತ ಶಿಸ್ತುಬದ್ಧ ಹಾಗೂ ವ್ಯವಸ್ಥಿತ ಕಾರ್ಯಕ್ರಮ ಎಂದು ಬಣ್ಣಿಸಿರುವುದು ರಾಜ್ಯದ ಸೌಹಾರ್ದ ಸಹಕಾರಿಗಳು ಹೆಮ್ಮೆಪಡುವ ವಿಷಯ.

### ಅಂತರರಾಜ್ಯ ಅಧ್ಯಯನ ಪ್ರವಾಸ

ಸೌಹಾರ್ದ ಸಹಕಾರಿಗಳ ನಿರ್ದೇಶಕರುಗಳು ಹಾಗೂ ಅಧಿಕಾರಿಗಳಿಗಾಗಿ ಸಹಕಾರ ಸಂಸ್ಥೆಗಳ ಅಧ್ಯಯನಕ್ಕಾಗಿ ಅಂತರರಾಜ್ಯ ಅಧ್ಯಯನ ಪ್ರವಾಸವನ್ನು ಏರ್ಪಡಿಸಲಾಗಿತ್ತು. ಈ ಅವಧಿಯಲ್ಲಿ ರಾಷ್ಟ್ರ ಮಟ್ಟದ ಉತ್ತಮ ಸಹಕಾರ ಸಂಸ್ಥೆಗಳಾದ ಅಮೂಲ್, ಸಾರಸ್ವತ ಕೋ-ಆಪರೇಟಿವ್ ಬ್ಯಾಂಕ್, ಮುಂಬೈ, ವೈಕುಂಠ ಮೆಹತಾ ಸಹಕಾರಿ ಆಡಳಿತ ನಿರ್ವಹಣಾ ಸಂಸ್ಥೆ, ಪೂನಾ, ಬುಲ್ಡಾನಾ ಸಹಕಾರಿ ಸಂಸ್ಥೆ, ಪೂನಾ ಶಾಖೆ, ಸೇವಾ, ಅಹಮದಾಬಾದ್ ಮುಂತಾದ ಸಂಸ್ಥೆಗಳಿಗೆ, ಕರ್ನಾಟಕದ ಉತ್ತಮ ಸಹಕಾರಿ ಸಂಸ್ಥೆಗಳಾದ ಶ್ರೀ ಜ್ಯೋತಿ ವಿವಿಧೋದ್ದೇಶ ಸೌಹಾರ್ದ ಸಹಕಾರಿ ನಿ., ಎಕ್ಸಾಂಬ, ದಿ ಅರಿಹಂತ ಸೌಹಾರ್ದ ಕ್ರೆಡಿಟ್ ಸಹಕಾರಿ ನಿ., ಬೋರಗಾಂವ ಮುಂತಾದ ಸಹಕಾರಿ ಸಂಸ್ಥೆಗಳಿಗೆ ಭೇಟಿ ನೀಡುವುದರ ಜೊತೆಗೆ ಕರ್ನಾಟಕ, ಗೋವಾ, ಮಹಾರಾಷ್ಟ್ರ, ಗುಜರಾತ್ ಈ ರಾಜ್ಯಗಳ ಒಟ್ಟಾರೆ ಸಹಕಾರ ಸಂಸ್ಕೃತಿಯ ಅಧ್ಯಯನವನ್ನು ಈ ಅವಧಿಯಲ್ಲಿ ಕೈಗೊಳ್ಳಲಾಗಿತ್ತು.

ಇದಲ್ಲದೇ ಮಹಿಳೆಯರಿಗೆ ಸಹಕಾರಿ ಕ್ಷೇತ್ರದ ಬಗ್ಗೆ ಮಾಹಿತಿಯನ್ನು ಒದಗಿಸುವ ನಿಟ್ಟಿನಲ್ಲಿ ಮಹಿಳಾ ನಿರ್ದೇಶಕರುಗಳಿಗೆ ಪ್ರತ್ಯೇಕ ಆಡಳಿತ ಪರಿಣಿತಿ ಕಾರ್ಯಕ್ರಮಗಳನ್ನು, ಬೆಂಗಳೂರಿನಲ್ಲಿ ಬೃಹತ್ ಮಹಿಳಾ ಸಮಾವೇಶ, ಸೌಹಾರ್ದ ಸಹಕಾರಿ ಕ್ಷೇತ್ರದ ಬೆಳವಣಿಗಾಗಿ ಬೆಂಗಳೂರು ಹಾಗೂ ಮೈಸೂರು ವಿಭಾಗೀಯ ಸಮಾವೇಶಗಳು, ರಾಜ್ಯ ಹಾಗೂ ಜಿಲ್ಲಾ ಮಟ್ಟಗಳಲ್ಲಿ ಪತ್ರಿಕಾಗೋಷ್ಠಿಗಳು, ರಾಜ್ಯದಾದ್ಯಂತ 100ಕ್ಕಿಂತ ಹೆಚ್ಚು ತರಬೇತಿದಾರರ ಪಡೆ ನಿರ್ಮಾಣ, ಪ್ರತಿ ಜಿಲ್ಲೆಯಲ್ಲಿ ಜಿಲ್ಲಾ ಒಕ್ಕೂಟಗಳ ರಚನೆಗೆ ಕ್ರಮ, ಜೊತೆಗೆ ರಾಷ್ಟ್ರೀಯ ಕಾರ್ಯಕ್ರಮಗಳಾದ "ಸ್ವಚ್ಛ ಭಾರತ" ಹಾಗೂ ಶುದ್ಧ ಕುಡಿಯುವ ನೀರಿನ ಘಟಕಗಳ ಸ್ಥಾಪನೆಗೆ ಸೌಹಾರ್ದ ಸಹಕಾರಿಗಳಿಗೆ ಮಾಹಿತಿ ಹಾಗೂ ಪ್ರೋತ್ಸಾಹ ನೀಡುವಂತಹ ಕಾರ್ಯಕ್ರಮಗಳನ್ನು ಜರುಗಿಸಲಾಗಿದೆ. ಒಟ್ಟಾರೆ 2010–11 ರಿಂದ 2015–16ರವರೆಗಿನ ಈ 5 ವರ್ಷಗಳ ಸಾಧನೆಗಳಿಗೆ ಪೂರ್ಣ ಸಹಕಾರ ನೀಡಿದ ಆಡಳಿತ ಮಂಡಲಿಯ ಎಲ್ಲ ಸದಸ್ಯರಿಗೆ ಹಾಗೂ ರಾಜ್ಯದ ಎಲ್ಲಾ ಸೌಹಾರ್ದ ಸಹಕಾರಿಗಳ/ ಸಹಕಾರಿ ಬ್ಯಾಂಕುಗಳ ಅಧ್ಯಕ್ಷರು ಹಾಗೂ ಆಡಳಿತ ಮಂಡಲಿಗೆ ಮತ್ತು ರಾಜ್ಯದ ಎಲ್ಲಾ ಸೌಹಾರ್ದ ಸಹಕಾರಿಗಳ ಮುಖ್ಯನಿರ್ವಾಹಕರುಗಳಿಗೆ ಸಂಯುಕ್ತ ಸಹಕಾರಿಯ ಆಡಳಿತ ಮಂಡಲಿಯ ಪರವಾಗಿ ಕೃತಜ್ಞತೆಗಳನ್ನು ಸಲ್ಲಿಸುತ್ತಾ, ಮುಂಬರುವ ದಿನಗಳಲ್ಲಿಯೂ ತಮ್ಮೆಲ್ಲರ ಸಂಪೂರ್ಣ ಸಹಕಾರವನ್ನು ನಿರೀಕ್ಷಿಸುತ್ತೇವೆ ಮತ್ತು ತಮ್ಮ ಸಲಹೆ ಹಾಗೂ ಮಾರ್ಗದರ್ಶನವನ್ನು ಸ್ವಾಗತಿಸುತ್ತೇವೆ.

| ಗುರುನಾಥ ಜಾಂತಿಕರ | ಹೆಚ್.ವಿ.ರಾಜೀವ | ಎಸ್.ಆರ್.ಸತೀಶ್‌ಚಂದ್ರ |
|---|---|---|
| ಅಧ್ಯಕ್ಷರು | ಉಪಾಧ್ಯಕ್ಷರು | ನಿಕಟಪೂರ್ವ ಅಧ್ಯಕ್ಷರು |

# ಸಂಯುಕ್ತ ಸಹಕಾರಿಯ ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳಿಗೆ ಮತ್ತು ಫೀಲ್ಡ್ ಆಫೀಸರ್‌ಗಳಿಗೆ (ಕ್ಷೇತ್ರದಲ್ಲಿ ಕಾರ್ಯನಿರ್ವಹಿಸುವ ಸಿಬ್ಬಂದಿಗಳಿಗೆ) "ಸೌಹಾರ್ದ ಸಹಕಾರಿ ನ್ಯಾಯಾಲಯದ ಕಾರ್ಯಚಟುವಟಿಕೆಗಳ ಹಾಗೂ ವ್ಯಾಪಾರ ಅಭಿವೃದ್ಧಿ ಯೋಜನೆ"ಗಳ ಕುರಿತು ತರಬೇತಿ ಕಾರ್ಯಕ್ರಮ

ಸಂಯುಕ್ತ ಸಹಕಾರಿಯ ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳಿಗೆ ಮತ್ತು ಫೀಲ್ಡ್ ಆಫೀಸರ್‌ಗಳಿಗೆ (ಕ್ಷೇತ್ರದಲ್ಲಿ ಕಾರ್ಯನಿರ್ವಹಿಸುವ ಸಿಬ್ಬಂದಿಗಳಿಗೆ) "ಸೌಹಾರ್ದ ಸಹಕಾರಿ ನ್ಯಾಯಾಲಯದ ಕಾರ್ಯ ಚಟುವಟಿಕೆಗಳ ಹಾಗೂ ವ್ಯಾಪಾರ ಅಭಿವೃದ್ಧಿ ಯೋಜನೆ"ಗಳ ಕುರಿತು 2 ದಿನಗಳ ತರಬೇತಿಯನ್ನು ದಿನಾಂಕ 17.02.2016 ರಿಂದ 18.02.2016 ರವರೆಗೆ ಬೆಂಗಳೂರಿನ ಪ್ರಾದೇಶಿಕ ಸಹಕಾರ ಆಡಳಿತ ನಿರ್ವಹಣಾ ಸಂಸ್ಥೆಯಲ್ಲಿ ಏರ್ಪಡಿಸಲಾಗಿತ್ತು. ಕಾರ್ಯಕ್ರಮವನ್ನು ಉದ್ಘಾಟಿಸಿ, ಮಾತನಾಡಿದ ಶ್ರೀ ಪಿ.ಪಳಂಗಪ್ಪ, ಸಹಕಾರಿಗಳ ಜಂಟಿ ನಿಬಂಧಕರು ಇವರು ಸಂಯುಕ್ತ ಸಹಕಾರಿಗೆ ಸೌಹಾರ್ದ ನ್ಯಾಯಾಲಯವನ್ನು ಕರ್ನಾಟಕ ಸರ್ಕಾರವು ಮಂಜೂರು ಮಾಡಿದ್ದು, ಸಂಯುಕ್ತ ಸಹಕಾರಿ ಹಾಗೂ ಇಲ್ಲಿ ಕಾರ್ಯನಿರ್ವಹಿಸುತ್ತಿರುವ ಅಧಿಕಾರಿಗಳು ಯಾವ ರೀತಿ ಅದರ ಪ್ರಯೋಜನಗಳನ್ನು ಪಡೆದುಕೊಳ್ಳಬೇಕೆಂದು ತಿಳಿಸಿದರು.

ಸೌಹಾರ್ದ ಸಹಕಾರಿಗಳಿಗೆ ಹಾಗೂ ಅಲ್ಲಿರುವ ಸದಸ್ಯರಿಗೆ ಈ ನ್ಯಾಯಾಲಯದ ಉಪಯೋಗವನ್ನು ತಿಳಿಸಿಕೊಡುವಲ್ಲಿ ಸಂಯುಕ್ತ ಸಹಕಾರಿಯ ಪಾತ್ರ ಮಹತ್ವದ್ದಾಗಿದೆ ಎಂದು ತಿಳಿಸಿದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿ, ಮಾತನಾಡಿದ ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀಮತಿ ಹೆಚ್.ಸಿ.ನಾಗರತ್ನರವರು ಸರ್ಕಾರವು ಸೌಹಾರ್ದ ನ್ಯಾಯಾಲಯವನ್ನು ಮಂಜೂರು ಮಾಡಿರುವುದಕ್ಕೆ ಧನ್ಯವಾದಗಳನ್ನು ತಿಳಿಸಿದರು.



ತರಬೇತಿ ಅವಧಿಯಲ್ಲಿ ಶ್ರೀ ಎಸ್. ಜಿ. ಜೋಷಿ ಇವರು ಸೌಹಾರ್ದ ಸಹಕಾರಿಯ ನ್ಯಾಯಾಲಯದ ಸ್ಥಾಪನೆ, ನ್ಯಾಯಾಲಯದ ಕೆಲಸ ಕಾರ್ಯಗಳು ಮತ್ತು ಅಲ್ಲಿನ ಕಡತಗಳ ನಿರ್ವಹಣೆಯ ಬಗ್ಗೆ ವಿವರವಾಗಿ ತಿಳಿಸಿದರು. ಶ್ರೀ ವಸಂತನಾಯ್ಕರವರು ಸೌಹಾರ್ದ ಸಹಕಾರಿಗಳು ಲಾಭದತ್ತ ಮುನ್ನುಗ್ಗಲು ವ್ಯಾಪಾರ ಅಭಿವೃದ್ಧಿ ಯೋಜನೆಗಳ ಬಗ್ಗೆ ತಿಳಿಸಿದರು.

ತರಬೇತಿಯ ಕಾರ್ಯಕ್ರಮದಲ್ಲಿ ಸಂಯುಕ್ತ ಸಹಕಾರಿಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲ್, ಉಪಪ್ರಧಾನ ವ್ಯವಸ್ಥಾಪಕರಾದ ಶ್ರೀ ವೈ. ಕುಮಾರ್, ಸಹಪ್ರಧಾನ ವ್ಯವಸ್ಥಾಪಕರಾದ ಶ್ರೀ ರಘುನಂದನ ಕೆ. ಮತ್ತು ತರಬೇತಿ ಅಧಿಕಾರಿಯಾದ ಶ್ರೀ ವಿ. ಜೆ. ಕಾರಕೂನ ಇವರುಗಳು ವಿವಿಧ ವಿಷಯಗಳ ಕುರಿತು ಉಪನ್ಯಾಸ ನೀಡಿದರು.



# ಸಿಕೋಪ ಮೇಳ 2016ರ ಉದ್ಘಾಟನಾ ಸಮಾರಂಭ

ಸಿಕೋಪ ಮೇಳ 2016ರ ವಸ್ತುಪ್ರದರ್ಶನದಲ್ಲಿ ಭಾಗವಹಿಸಿರುವ ಮಹಿಳಾ ಉದ್ಯಮಿಗಳು, ಕರಕುಶಲ ಕರ್ಮಿಗಳು, ಮಹಿಳಾ ಸಹಕಾರ ಸಂಘಗಳ ಪ್ರತಿನಿಧಿಗಳು ಹಾಗೂ ಸಹಕಾರಿಗಳಿಗೆ ಸೌಹಾರ್ದ ಸಹಕಾರಿ ಕ್ಷೇತ್ರದ ಪರಿಚಯ ಹಾಗೂ ಸಂಯುಕ್ತ ಸಹಕಾರಿಯ ವತಿಯಿಂದ ಬ್ಯಾನರ್‌ಗಳ ಮೂಲಕ ಸ್ವಾಗತ ಕೋರುವ ವ್ಯವಸ್ಥೆ ಮಾಡಲಾಗಿತ್ತು.

## ಸಂಯುಕ್ತ ಸಹಕಾರಿಯ ಏಪ್ರಿಲ್ ಮಾಹೆಯ ಕಾರ್ಯಕ್ರಮಗಳು

ಏಪ್ರಿಲ್ 2016ರ ಮೊದಲನೇ ವಾರದಲ್ಲಿ ಸೌಹಾರ್ದ ಸಹಕಾರಿಗಳ ನಿರ್ದೇಶಕರುಗಳಿಗಾಗಿ 2 ದಿನಗಳ ಆಡಳಿತ ಪರಿಣಿತಿ ತರಬೇತಿ ಶಿಬಿರ ಹಾಗೂ ಏಪ್ರಿಲ್ 2016ರ ಮೂರನೇ ವಾರದಲ್ಲಿ ಸೌಹಾರ್ದ ಸಹಕಾರಿಗಳ ಮಹಿಳಾ ನಿರ್ದೇಶಕರುಗಳಿಗಾಗಿ 2 ದಿನಗಳ ಆಡಳಿತ ಪರಿಣಿತಿ ತರಬೇತಿ ಶಿಬಿರವನ್ನು ಆಯೋಜಿಸಲಾಗುವುದು. ಭಾಗವಹಿಸುವ ಪ್ರತಿನಿಧಿಗಳ ಸಂಖ್ಯೆ 60 ಮಾತ್ರ. ಪ್ರವೇಶ ಶುಲ್ಕ ರೂ.1,000/-. ತರಬೇತಿ ಸ್ಥಳ : ಪ್ರಾದೇಶಿಕ ಸಹಕಾರಿ ನಿರ್ವಹಣಾ ಸಂಸ್ಥೆ, ಪದ್ಮನಾಭನಗರ, ಬೆಂಗಳೂರು. ತಮ್ಮ ಸೌಹಾರ್ದ ಸಹಕಾರಿಯ ನಿರ್ದೇಶಕರುಗಳ/ ಮಹಿಳಾ ನಿರ್ದೇಶಕರುಗಳ ಹೆಸರುಗಳನ್ನು ಕಳುಹಿಸಿ, ನೋಂದಾಯಿಸಿಕೊಳ್ಳಲು ಕೋರಿದೆ.

## ಕರ್ನಾಟಕ ಲೇವಾದೇವಿಗಾರರ ಕಾಯ್ದೆ, 1961 ಹಾಗೂ ಕರ್ನಾಟಕ ಮಿತಿಮೀರಿದ ಬಡ್ಡಿ ವಿಧಿಸುವಿಕೆ ನಿಷೇಧ ಕಾಯ್ದೆ, 2004 ಸೌಹಾರ್ದ ಸಹಕಾರಿಗಳಿಗೆ ಅನ್ವಯಿಸುವುದಿಲ್ಲ

ಕರ್ನಾಟಕ ಲೇವಾದೇವಿಗಾರರ ಕಾಯ್ದೆ, 1961 ಹಾಗೂ ಕರ್ನಾಟಕ ಮಿತಿಮೀರಿದ ಬಡ್ಡಿ ವಿಧಿಸುವಿಕೆ ನಿಷೇಧ ಕಾಯ್ದೆ, 2004 ಸೌಹಾರ್ದ ಸಹಕಾರಿಗಳಿಗೆ ಅನ್ವಯಿಸುವ ಕುರಿತು ಸಹಕಾರಿಗಳ ನಿಬಂಧಕರು ತಮ್ಮ ಪತ್ರದಲ್ಲಿ ಕರ್ನಾಟಕ ಲೇವಾದೇವಿ ಕಾಯ್ದೆ ರೀತ್ಯಾ, ಸೌಹಾರ್ದ ಸಹಕಾರಿಗಳು ಮತ್ತು ಸಹಕಾರ ಸಂಘಗಳು ಲೇವಾದೇವಿಗಾರರ ಕಾಯ್ದೆಯ ವ್ಯಾಪ್ತಿಗೆ ಒಳಪಡುವುದಿಲ್ಲವೆಂದು ತಿಳಿಸಿರುತ್ತಾರೆ.

## ನ್ಯಾಷನಲ್ ಕೋ ಆಪರೇಟಿವ್ ಡೆವಲಪ್‌ಮೆಂಟ್ ಕಾರ್ಪೋರೇಷನ್ (ಎನ್‌ಸಿಡಿಸಿ) ಹಾಗೂ ನಬಾರ್ಡ್ ಫೈನಾನ್ಸ್ ಮೂಲಕ ಸೌಹಾರ್ದ ಸಹಕಾರಿಗಳಿಗೆ ಹಣಕಾಸು ಸೌಲಭ್ಯದ ವ್ಯವಸ್ಥೆ

ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯು ತನ್ನ ಸದಸ್ಯ ಸಹಕಾರಿಗಳಿಗೆ ವಿವಿಧ ಸಂಸ್ಥೆಗಳಿಂದ ಸಿಗಬಹುದಾದ ಸಾಲ ರೂಪದಲ್ಲಿ ಹಣಕಾಸು ನೆರವು ಒದಗಿಸುವ ಉದ್ದೇಶದಿಂದ ನಿರಂತರ ಪ್ರಯತ್ನವನ್ನು ನಡೆಸುತ್ತಾ ಬಂದಿರುತ್ತದೆ. ಈ ಬಗ್ಗೆ ನಬಾರ್ಡ್, ಎನ್‌ಸಿಡಿಸಿ, ನಬಾರ್ಡ್ ಫೈನಾನ್ಸ್ ಸಂಸ್ಥೆಗಳೊಂದಿಗೆ ಚರ್ಚೆಗಳನ್ನು ನಡೆಸಲಾಗಿದೆ. ಪ್ರಸ್ತುತ ನ್ಯಾಷನಲ್ ಕೋ ಆಪರೇಟಿವ್ ಡೆವಲಪ್‌ಮೆಂಟ್ ಕಾರ್ಪೋರೇಷನ್ (ಎನ್‌ಸಿಡಿಸಿ) ಹಾಗೂ ನಬಾರ್ಡ್ ಫೈನಾನ್ಸ್ ಇವರುಗಳು ಸಂಯುಕ್ತ ಸಹಕಾರಿಯೊಂದಿಗೆ ಚರ್ಚಿಸಿದಂತೆ – ಸೌಹಾರ್ದ ಸಹಕಾರಿಗಳಿಗೆ ಸಾಲದ ರೂಪದಲ್ಲಿ ಹಣಕಾಸು ನೆರವು ನೀಡಲು ಒಪ್ಪಿರುತ್ತಾರೆ.

ಸಾಲ ಸೌಲಭ್ಯಕ್ಕೆ ಸಂಬಂಧಿಸಿದ ಮಾರ್ಗಸೂಚಿ ಹಾಗೂ ಬಡ್ಡಿದರಗಳ ವಿವರಗಳನ್ನು ಎನ್‌ಸಿಡಿಸಿ ಹಾಗೂ ನಬಾರ್ಡ್ ಫೈನಾನ್ಸ್ ಇವರುಗಳ ವೆಬ್‌ಸೈಟ್ - http://www.ncdc.in/ ಹಾಗೂ http://nabfins.org/ ಗಳಲ್ಲಿ ಪಡೆಯಬಹುದಾಗಿದೆ. ಆಸಕ್ತ ಸೌಹಾರ್ದ ಸಹಕಾರಿಗಳು ಸಂಬಂಧಿಸಿದ ವಿವರಗಳನ್ನು ಗಮನಿಸಲು ಕೋರಿದೆ.

ಸಂಯುಕ್ತ ಸಹಕಾರಿಯು ಈ ಬಗ್ಗೆ ಸುತ್ತೋಲೆಯನ್ನು ಕಳುಹಿಸಲ್ಲಿದ್ದು, ಮಾರ್ಗಸೂಚಿ ಮಾನದಂಡಗಳಿಗೆ ಅರ್ಹರಾದ ಆಸಕ್ತ ಸೌಹಾರ್ದ ಸಹಕಾರಿಗಳು ನಿಗದಿತ ನಮೂನೆಯಲ್ಲಿ ಸಾಲ ಸೌಲಭ್ಯ ಪಡೆಯಲು ವಿವರಗಳನ್ನು ಕಳುಹಿಸಬಹುದಾಗಿದೆ.

## ಪ್ರಕಟಣೆ

ಸಹಕಾರ ಇಲಾಖೆಯ ರಾಜ್ಯ ಪತ್ರಾಂಕಿತ ಅಧಿಕಾರಿಗಳ ಸಂಘ (ರಿ), ನಂ.1, ಆಲಿ ಆಸ್ಕರ್ ರಸ್ತೆ, ಬೆಂಗಳೂರು-560 052 ವತಿಯಿಂದ ಈಗಾಗಲೇ ಸೇವೆಯಿಂದ ನಿವೃತ್ತಿ ಹೊಂದಿರುವ ಅಧಿಕಾರಿಗಳ (ಸಹಕಾರ ಸಂಘಗಳ ಅಪರ ನಿಬಂಧಕರು, ಜಂಟಿ ನಿಬಂಧಕರು, ಉಪ ನಿಬಂಧಕರು, ಸಹಾಯಕ ನಿಬಂಧಕರು ಮತ್ತು ಸಹಕಾರ ಅಭಿವೃದ್ಧಿ ಅಧಿಕಾರಿಗಳು) ವಿಳಾಸಗಳ ದಿನಚರಿಯನ್ನು ಪ್ರಕಟಿಸಲು ಇಚ್ಛಿಸಿದ್ದು, ಸದರಿ ದಿನಚರಿಯ ಮುದ್ರಣಕ್ಕಾಗಿ ಅಧಿಕಾರಿಗಳ, ದೂರವಾಣಿ ಸಂಖ್ಯೆ, ಮೊಬೈಲ್ ಸಂಖ್ಯೆ, ಇ-ಮೇಲ್ ವಿಳಾಸ ಮತ್ತು ಮನೆಯ ವಿಳಾಸವನ್ನು ಸಂಘದ ಅಧ್ಯಕ್ಷರು/ ಕಾರ್ಯದರ್ಶಿಯವರಿಗೆ ಲಿಖಿತ ಮೂಲಕ ಅಥವಾ ಇ-ಮೇಲ್ ವಿಳಾಸ madaiahkd@gmail.comಗೆ ಕಳುಹಿಸಲು ವಿನಂತಿಸಿದೆ.

# ಕೊಪ್ಪಳ ಜಿಲ್ಲೆಯ ಸೌಹಾರ್ದ ಸಹಕಾರಿಗಳ ಅಧ್ಯಕ್ಷರುಗಳು, ಉಪಾಧ್ಯಕ್ಷರುಗಳು ಮತ್ತು ಮುಖ್ಯಕಾರ್ಯನಿರ್ವಾಹಕರುಗಳಿಗಾಗಿ ಅವಲೋಕನ ಸಭೆ

**ಕೊಪ್ಪಳ ಜಿಲ್ಲೆ :** ದಿನಾಂಕ : 17.02.2016 ರಂದು ಕೊಪ್ಪಳ ಜಿಲ್ಲೆಯ ಸೌಹಾರ್ದ ಸಹಕಾರಿಗಳ ಅಧ್ಯಕ್ಷರುಗಳು, ಉಪಾಧ್ಯಕ್ಷರುಗಳು ಮತ್ತು ಮುಖ್ಯಕಾರ್ಯನಿರ್ವಾಹಕರುಗಳಿಗಾಗಿ ಅವಲೋಕನ ಸಭೆಯನ್ನು ಗುರು ಕೃಪಾ ರೆಸಿಡೆನ್ಸಿ, ಕೆ.ಪಿ ಜವಳಿ ಕಾಂಪ್ಲೆಕ್ಸ್, ಬಸವೇಶ್ವರ ಸರ್ಕಲ್, ಆರ್ ಜಿ ರಸ್ತೆ, ಕಾರಟಗಿ, ಕೊಪ್ಪಳ ಜಿಲ್ಲೆ ಇಲ್ಲಿ ಆಯೋಜಿಸಲಾಗಿತ್ತು.

ಸಭೆಯ ಉದ್ಘಾಟನೆಯನ್ನು ನೆರವೇರಿಸಿ, ಮಾತನಾಡಿದ ಶ್ರೀ ಗುರುನಾಥ ಜಾಂತಿಕರ, ಅಧ್ಯಕ್ಷರು, ಕ.ರಾ.ಸೌ.ಸಂ.ಸ.ನಿ., ಬೆಂಗಳೂರು ಇವರು ಸೌಹಾರ್ದ ಸಹಕಾರಿಗಳ ಬೆಳವಣಿಗೆ ಹಾಗೂ ಕಾರ್ಯಪ್ರಗತಿಯನ್ನು ಶ್ಲಾಘಿಸುತ್ತಾ, ಸಹಕಾರಿಯ ಕಾರ್ಯಚಟುವಟಿಕೆಗಳು ಹಾಗೂ ಸೌಹಾರ್ದ ಕ್ಷೇತ್ರದ ಬೆಳವಣಿಗೆಗಳ ಬಗ್ಗೆ ತಿಳಿಸಿದರು. ಸಭೆಯ ಅಧ್ಯಕ್ಷತೆಯನ್ನು ಶ್ರೀ ಕೆ.ಸಣ್ಣಸೂಗಪ್ಪ, ನಿರ್ದೇಶಕರು, ಕ.ರಾ.ಸೌ.ಸಂ.ಸ.ನಿ., ಬೆಂಗಳೂರು ಇವರು ವಹಿಸಿದ್ದರು. ಸದರಿ ಸಭೆಯಲ್ಲಿ 32 ಸೌಹಾರ್ದ ಸಹಕಾರಿಗಳಿಂದ 41 ಪ್ರತಿನಿಧಿಗಳು ಭಾಗವಹಿಸಿದ್ದರು.



# "ಇ" ಸ್ಟ್ಯಾಂಪಿಂಗ್ ವಿಭಾಗದ ಮಾಹಿತಿ : 2 ಲಕ್ಷಕ್ಕೂ ಹೆಚ್ಚು ಛಾಪಾ ಕಾಗದಕ್ಕೆ ಪ್ಯಾನ್ ಸಂಖ್ಯೆ ಕಡ್ಡಾಯ

ರೂ. 2 ಲಕ್ಷಕ್ಕೂ ಹೆಚ್ಚು ಇ ಸ್ಟ್ಯಾಂಪಿಂಗ್ ವ್ಯವಹಾರ ಮಾಡುವ ಪ್ರತಿಯೊಬ್ಬ ಗ್ರಾಹಕರು ಕಡ್ಡಾಯವಾಗಿ ತಮ್ಮ ಪಾನ್ ಸಂಖ್ಯೆ (Permanent Account Number) ಯನ್ನು ತಮ್ಮ ಅರ್ಜಿಯ ಜೊತೆಯಲ್ಲಿ ಭರ್ತಿ ಮಾಡಿ ಸಲ್ಲಿಸತಕ್ಕದ್ದು. ಪಾನ್ ಸಂಖ್ಯೆ ಅರ್ಜಿದಾರರದೇ ಇರತಕ್ಕದ್ದು. ಇದು ಕಡ್ಡಾಯ. ಈ ಬಗ್ಗೆ ಎಲ್ಲಾ ಇ ಸ್ಟ್ಯಾಂಪಿಂಗ್ ಕೇಂದ್ರಗಳು ತಮ್ಮ ಸದಸ್ಯರಿಗೆ, ಸಾರ್ವಜನಿಕರಿಗೆ ತಿಳಿಯಪಡಿಸುವ ಹಾಗೇ ನೋಟೀಸ್ ಬೋರ್ಡ್ ಮತ್ತು ಅಗತ್ಯವೆನಿಸುವ ರೀತಿಯಲ್ಲಿ ಪ್ರಚಾರ ಮಾಡುವುದು. ಪಾನ್ ಕಾರ್ಡ್ ಇಲ್ಲದವರು ಫಾರಂ ನಂಬರ್ 60ನ್ನು ತಮ್ಮ ವಿಳಾಸದ ದಾಖಲೆಯಿರುವ ರೇಷನ್ ಕಾರ್ಡ್, ಡ್ರೈವಿಂಗ್ ಲೈಸೆನ್ಸ್, ಇಲೆಕ್ಟ್ರಿಸಿಟಿ ಬಿಲ್ ಮುಂತಾದವುಗಳಲ್ಲಿ ಒಂದನ್ನು ಲಗತ್ತಿಸಿ, ಫಾರ್ಮ್ ಭರ್ತಿ ಮಾಡಿ ಒದಗಿಸಬೇಕಾಗುತ್ತದೆ. ಕೃಷಿ ಆದಾಯವಿರುವವರು ಫಾರಂ ನಂಬರ್ 61ನ್ನು ಭರ್ತಿ ಮಾಡಿ ಸಲ್ಲಿಸಬೇಕಾಗುತ್ತದೆ. ಈ ಪದ್ಧತಿ ದಿನಾಂಕ 01–01–2016 ರಿಂದಲೇ ಜಾರಿಗೆ ಬರುತ್ತದೆ ಎಂದು ದಿನಾಂಕ 15–12–2015 ರ ಕೇಂದ್ರ ತೆರಿಗೆ ಸಲಹಾ ಮಂಡಳಿಯ ಪತ್ರಿಕಾ ಪ್ರಕಟಣೆಯನ್ನು ಸ್ಟೇಟ್ ಸ್ಟಾಕ್ ಹೋಲ್ಡಿಂಗ್ ಕಾರ್ಪೋರೇಷನ್ ಆಫ್ ಇಂಡಿಯಾದವರು ಸಂಯುಕ್ತ ಸಹಕಾರಿಗೆ ತಿಳಿಸಿರುವುದನ್ನು ರಾಜ್ಯದ ಎಲ್ಲಾ ಸೌಹಾರ್ದ ಸಹಕಾರಿಗಳ ಅಗತ್ಯ ಮಾಹಿತಿಗಾಗಿ ಪ್ರಕಟಿಸಲಾಗಿದೆ ಮತ್ತು ಈ ಮಾಹಿತಿಯಂತೆ ಅಗತ್ಯ ಕ್ರಮವಿಡಲು ಸೂಚಿಸಿದೆ.



## ನೂತನ ಶಾಖೆಯ ಉದ್ಘಾಟನೆ

ದಿನಾಂಕ : 25.02.2016 ರಂದು ಅಕ್ಷಯ ವಿವಿಧೋದ್ದೇಶ ಸೌಹಾರ್ದ ಸಹಕಾರಿ ನಿ., ರಾಯಚೂರು ಸಹಕಾರಿಯ ನೂತನ ಶಾಖೆಯ ಉದ್ಘಾಟನೆಯನ್ನು ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಶ್ರೀ ಗುರುನಾಥ ಜಾಂತಿಕರ, ಅಧ್ಯಕ್ಷರು, ಕ.ರಾ.ಸೌ.ಸಂ.ಸ.ನಿ., ಬೆಂಗಳೂರು ಮತ್ತು ಶ್ರೀ ಆರ್.ಪಿ.ರವಿಶಂಕರ್, ಅಧ್ಯಕ್ಷರು ಕರ್ನಾಟಕ ರಾಜ್ಯ ಆರ್ಯ ವೈಶ್ಯ ಮಹಾಸಭಾ, ಬೆಂಗಳೂರು ಇವರುಗಳು ನೆರವೇರಿಸಿದರು.

## ಉತ್ತಮ ಸಾಲಗಳ ಮಂಜೂರಿಯಿಂದ ಸಹಕಾರಿಗಳ ಪ್ರಗತಿ ಸಾಧ್ಯ - ಶ್ರೀ ಬಿ.ಎಸ್. ಇಳೀಗಾರ

**ವಿಜಯಪುರ ಜಿಲ್ಲೆ :** ದಿನಾಂಕ : 25.02.2016ರಂದು ವಿಜಯಪುರ ಜಿಲ್ಲೆಯಲ್ಲಿ ನಷ್ಟದಲ್ಲಿರುವ ಹಾಗೂ ಲೆಕ್ಕಪರಿಶೋಧನೆಯಾಗದ ಸೌಹಾರ್ದ ಸಹಕಾರಿಗಳ ಅಧ್ಯಕ್ಷರು/ ಮುಖ್ಯಕಾರ್ಯನಿರ್ವಾಹಕರಿಗಾಗಿ ಪುನಶ್ಚೇತನ ತರಬೇತಿ ಕಾರ್ಯಕ್ರಮವನ್ನು ವಿಜಯಪುರ ಜಿಲ್ಲಾ ಸಹಕಾರಿ ಯೂನಿಯನ್‌ನ ಸಭಾ ಭವನದಲ್ಲಿ ಏರ್ಪಡಿಸಲಾಗಿತ್ತು.

ತರಬೇತಿ ಕಾರ್ಯಕ್ರಮದ ಉದ್ಘಾಟನೆಯನ್ನು ನೆರವೇರಿಸಿ, ಮಾತನಾಡಿದ ವಿಜಯಪುರ ಉಪ ವಿಭಾಗದ ಸಹಕಾರಿಗಳ ಸಹಾಯಕ ನಿಬಂಧಕರಾದ ಶ್ರೀ ಬಿ ಎಸ್ ಇಳೀಗಾರರವರು ಸಹಕಾರಿ ಸಂಸ್ಥೆಗಳು ಪಡೆದ ಠೇವುಗಳನ್ನು ಉತ್ತಮವಾಗಿ ವ್ಯವಹಾರದಲ್ಲಿ ಉಪಯೋಗಿಸಿಕೊಳ್ಳಬೇಕು.

ಪತ್ತು ಉಳ್ಳ ಸದಸ್ಯರಿಗೆ ಸಕಾರಣಕ್ಕೆ ಸಾಲವನ್ನು ಕೊಡಬೇಕು, ಆಗ ಮಾತ್ರ ಸಂಸ್ಥೆಗಳು ಲಾಭ ಗಳಿಸಿ, ಪ್ರಗತಿ ಹೊಂದಲು ಸಾಧ್ಯ



ಎಂದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಿಜಯಪುರ ಜಿಲ್ಲಾ ಸಹಕಾರಿ ಯೂನಿಯನ್‌ನ ಉಪಾಧ್ಯಕ್ಷರಾದ ಶ್ರೀ ಕೆ.ಬಿ.ಪಾಟೀಲರವರು ವಹಿಸಿದ್ದರು. ಈ ಸಂದರ್ಭದಲ್ಲಿ ಸಹಕಾರಿಗಳ ಲೆಕ್ಕಪರಿಶೋಧನಾ ಇಲಾಖೆಯ ಹಿರಿಯ ಲೆಕ್ಕಪರಿಶೋಧಕರಾದ ಶ್ರೀ ಆರ್ ಆರ್ ಕುಲಕರ್ಣಿ, ಸಹಕಾರಿ ಸಂಘಗಳ ಅಪರ ನಿಬಂಧಕರಾದ (ನಿವೃತ್ತ) ಶ್ರೀ ಬಿ.ಎ.ಮಹದೇವಪ್ಪನವರು ಉಪಸ್ಥಿತರಿದ್ದರು.

## ಕಡ್ಡಾಯ ಆಡಿಟ್ ನಿರ್ವಹಣೆಯು ಸಹಕಾರಿ ಸಂಸ್ಥೆಗಳ ಜವಾಬ್ದಾರಿ - ಶ್ರೀ ಅಜಯಕುಮಾರ ಸರನಾಯಕ

ಬಾಗಲಕೋಟೆ ಜಿಲ್ಲೆ: ದಿನಾಂಕ 26.02.2016ರಂದು ಬಾಗಲಕೋಟೆ ಜಿಲ್ಲೆಯಲ್ಲಿ ನಷ್ಟದಲ್ಲಿರುವ ಹಾಗೂ ಲೆಕ್ಕಪರಿಶೋಧನೆಯಾಗದ ಸೌಹಾರ್ದ ಸಹಕಾರಿಗಳ ಅಧ್ಯಕ್ಷರು/ ಮುಖ್ಯಕಾರ್ಯನಿರ್ವಾಹಕರಿಗಾಗಿ ಪುನಶ್ಚೇತನ ತರಬೇತಿ ಕಾರ್ಯಕ್ರಮವನ್ನು ಬಾಗಲಕೋಟೆ ಕೇಂದ್ರ ಸಹಕಾರಿ ಬ್ಯಾಂಕ್ ನಿ.,ದ ಸಭಾ ಭವನದಲ್ಲಿ ಏರ್ಪಡಿಸಲಾಗಿತ್ತು. ತರಬೇತಿಯ ಉದ್ಘಾಟನೆಯನ್ನು ನೆರವೇರಿಸಿ, ಮಾತನಾಡಿದ ಕೇಂದ್ರ ಸಹಕಾರಿ ಬ್ಯಾಂಕ್ ನಿ., ಬಾಗಲಕೋಟೆಯ ಹಾಲಿ ಅಧ್ಯಕ್ಷರಾದ ಶ್ರೀ ಅಜಯಕುಮಾರ ಸರನಾಯಕರವರು ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ, 1997ರಡಿ ನೋಂದಣಿ ಹೊಂದಿದ ಸಂಸ್ಥೆಗಳು ತಮ್ಮ ಲೆಕ್ಕಪತ್ರಗಳನ್ನು ಲೆಕ್ಕಪರಿಶೋಧನೆ ಮಾಡಿಸಿಕೊಳ್ಳುವುದು ಕಡ್ಡಾಯವಾಗಿರುತ್ತದೆ. ಸಂಸ್ಥೆಗಳು ಸೌಹಾರ್ದ ಕಾನೂನಿನಡಿ ಇರುವ ಸವಲತ್ತುಗಳ ಲಾಭವನ್ನು ಪಡೆದು, ಅದರ ಉದ್ದೇಶಗಳನ್ನು ಸಫಲಗೊಳಿಸಬೇಕು. ಕಾನೂನಿನಡಿ ಇರುವ ಕಟ್ಟಳೆಗಳನ್ನು ಸಹಕಾರಿಗಳು ಅಚ್ಚುಕಟ್ಟಾಗಿ ಪಾಲಿಸಿಬೇಕು. ಪ್ರತಿ ವರ್ಷ ಆಡಿಟ್ ನಿರ್ವಹಣೆಯು ಸಹಕಾರಿ ಸಂಸ್ಥೆಗಳ ಜವಾಬ್ದಾರಿಯಾಗಿರುತ್ತದೆ. ಪ್ರತಿಯೊಂದು ಸಹಕಾರಿಯು ತಾನು ಚೆನ್ನಾಗಿ ಕಾರ್ಯನಿರ್ವಹಿಸಲು ಲಾಭ ಮಾಡುವುದು ಅನಿವಾರ್ಯ, ಯಾವುದೇ ಕಾಲಕ್ಕೂ ನಷ್ಟದಲ್ಲಿ ಕಾರ್ಯನಿರ್ವಹಿಸಬಾರದು ಎಂದು ತಿಳಿಸಿದರು.

ಮುಖ್ಯ ಅತಿಥಿಗಳಾಗಿ ಬಾಗಲಕೋಟೆ ಜಿಲ್ಲಾ ಸಹಕಾರಿಗಳ ಲೆಕ್ಕಪರಿಶೋಧನಾ ಉಪನಿರ್ದೇಶಕರಾದ ಶ್ರೀ ಸಿ.ಬಿ. ಚಿಕ್ಕಾಡಿ



ಯವರು ಆಗಮಿಸಿದ್ದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿ, ಮಾತನಾಡಿದ ಸಂಯುಕ್ತ ಸಹಕಾರಿ ನಿರ್ದೇಶಕರು ಹಾಗೂ ಬಾಪೂಜಿ ಪತ್ತಿನ ಸೌಹಾರ್ದ ಸಹಕಾರಿ ನಿಯಮಿತ ಉಪಾಧ್ಯಕ್ಷರಾದ ಶ್ರೀ ಜಿ ಎನ್ ಪಾಟೀಲರವರು ಸಂಯುಕ್ತ ಸಹಕಾರಿಯು ಸೌಹಾರ್ದ ಸಹಕಾರಿಗಳ ಅವಶ್ಯಕತೆಗನುಸಾರ ತರಬೇತಿಗಳನ್ನು ಏರ್ಪಡಿಸುತ್ತಿರುವುದು ಸಹಕಾರಿಗಳ ಅಭಿವೃದ್ಧಿಗೆ ಬಹಳಷ್ಟು ಸಹಾಯಕಾರಿಯಾಗುತ್ತಿದೆ, ಸೌಹಾರ್ದ ಕಾನೂನಿನಡಿ ಇರುವ ಮುಕ್ತ ವಾತಾವರಣದಲ್ಲಿ ಸೌಹಾರ್ದ ಸಹಕಾರಿಗಳಿಗೆ ಉತ್ತಮವಾಗಿ ಬೆಳೆಯಲು ವಿಪುಲ ಅವಕಾಶವಿದೆ. ಸ್ವಾಯತ್ತತೆ ಮತ್ತು ಸ್ವಯಂ ಆಡಳಿತ ತತ್ವಗಳಲ್ಲಿ ಸಂಸ್ಥೆಗಳನ್ನು ಚೆನ್ನಾಗಿ ಬೆಳೆಸಿ, ಬಲಪಡಿಸಬೇಕು ಎಂದರು. ಈ ಸಂದರ್ಭದಲ್ಲಿ ಕೇಂದ್ರ ಸಹಕಾರಿ ಬ್ಯಾಂಕ್ ನಿ., ಬಾಗಲಕೋಟೆಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಎಚ್ ವೈ ಗದ್ದನಕೇರಿ ಹಾಗೂ ಸನ್ನದು ಲೆಕ್ಕಪರಿಶೋಧಕರಾದ ಶ್ರೀ ಶರಣಗೌಡ ಬಿ. ಪಾಟೀಲರವರು ಉಪಸ್ಥಿತರಿದ್ದರು.

# ಫೆಬ್ರವರಿ 2016ರಲ್ಲಿ ಸಂಯುಕ್ತ ಸಹಕಾರಿಯ ಶಾಸನಬದ್ಧ ಕಾರ್ಯಚಟುವಟಿಕೆಗಳು

1. ವಿಶೇಷಾಧಿಕಾರಿಗಳ ನೇಮಕ : ಸಹಕಾರಿಯ ಆಡಳಿತ ಮಂಡಲಿಯು ಮುಕ್ತಾಯವಾಗಿರುವುದರಿಂದ ಮತ್ತು ನೂತನ ಮಂಡಲಿಯು ರಚನೆಯಾಗಿಲ್ಲದಿರುವುದರಿಂದ ಸಾಂವಿಧಾನಿಕ ಬಿಕ್ಕಟ್ಟು ಉಂಟಾಗಿರುವ ಕಾರಣಕ್ಕಾಗಿ ಫೆಬ್ರವರಿ 2016 ಮಾಹೆಯಲ್ಲಿ ಈ ಕೆಳಗಿನ ಸೌಹಾರ್ದ ಸಹಕಾರಿಗಳಿಗೆ ವಿಶೇಷಾಧಿಕಾರಿಗಳನ್ನು ನೇಮಕ ಮಾಡಲಾಗಿದೆ.

| ಕ್ರ.ಸಂ. | ಸಹಕಾರಿ | ವಿಶೇಷಾಧಿಕಾರಿಗಳು |
|---|---|---|
| 1. | ವಿಶ್ವ ಭಾರತಿ ಸೌಹಾರ್ದ ಪತ್ತಿನ ಸಹಕಾರಿ ನಿ., ಬಾಗಲಕೋಟೆ. (ಬಿಜಿಕೆ–67) | ಶ್ರೀ ಬಸವರಾಜ ಎಸ್, ಕಿರಿಯ ಅಧಿಕಾರಿ, ಬೆಳಗಾವಿ ವಿಭಾಗ. |
| 2. | ಶ್ರೀ ಭಾವಕೇಶ್ವರಿ ವಿವಿಧೋದ್ದೇಶ ಸೌಹಾರ್ದ ಸಹಕಾರಿ ನಿ., ಬೆಳಗಾವಿ. (ಬಿಜಿಎಂ–471) | ಶ್ರೀ ಓಂಕಾರ ಧರಣಿ, ಸೌಹಾರ್ದ ಅಭಿವೃದ್ಧಿ ಅಧಿಕಾರಿ, ಬೆಳಗಾವಿ ವಿಭಾಗ. |
| 3. | ಚೇತನ ವಿವಿಧೋದ್ದೇಶ ಸೌಹಾರ್ದ ಸಹಕಾರಿ ನಿ., ಬೈಲಹೊಂಗಲ. (ಬಿಜಿಎಂ–482) | ಶ್ರೀ ಓಂಕಾರ ಧರಣಿ, ಸೌಹಾರ್ದ ಅಭಿವೃದ್ಧಿ ಅಧಿಕಾರಿ, ಬೆಳಗಾವಿ ವಿಭಾಗ. |
| 4. | ಕದಂಬ ಕ್ರೆಡಿಟ್ ಸೌಹಾರ್ದ ಕೋ–ಆಪರೇಟಿವ್ ನಿ., ಶಿರಸಿ. (ಕೆಡಬ್ಲ್ಯುಆರ್–06) | ಶ್ರೀ ಸೂರ್ಯಕಾಂತ, ಅಧಿಕಾರಿ, ಬೆಳಗಾವಿ ವಿಭಾಗ. |
| 5. | ಶ್ರೀ ಭುವನೇಂದ್ರ ಸ್ವಾಮೀಜಿ ವಿವಿಧೋದ್ದೇಶ ಸೌಹಾರ್ದ ಸಹಕಾರಿ ನಿ., ಮಂಗಳೂರು. (ಎಂಎನ್‌ಜಿ–27) | ಶ್ರೀ ರಾಜೇಶ್ ಕೆ.ಎಂ., ಸೌಹಾರ್ದ ಅಭಿವೃದ್ಧಿ ಅಧಿಕಾರಿ, ಮೈಸೂರು ವಿಭಾಗ. |
| 6. | ವಂದೇಮಾತರಂ ವಿವಿಧೋದ್ದೇಶ ಸೌಹಾರ್ದ ಸಹಕಾರಿ ನಿ., ಮೂಡಬಿದ್ರೆ. (ಎಂಎನ್‌ಜಿ–29) | ಶ್ರೀ ರಾಜೇಶ್ ಕೆ.ಎಂ., ಸೌಹಾರ್ದ ಅಭಿವೃದ್ಧಿ ಅಧಿಕಾರಿ, ಮೈಸೂರು ವಿಭಾಗ. |
| 7. | ತುಮಕೂರು ಜಿಲ್ಲಾ ಬಂಜಾರಾ ಸೌಹಾರ್ದ ಪತ್ತಿನ ಸಹಕಾರಿ ನಿ., ತುಮಕೂರು. (ಟಿಎಂಕೆ–78) | ಶ್ರೀ ಶಶಿಕುಮಾರ್ ಎಸ್, ಸೌಹಾರ್ದ ಅಭಿವೃದ್ಧಿ ಅಧಿಕಾರಿ, ಬೆಂಗಳೂರು ವಿಭಾಗ. |

**2. ವಿಶೇಷಾಧಿಕಾರಿಗಳ ನೇಮಕದ ಮಾರ್ಪಾಡು ಆದೇಶ :** ದಿನಾಂಕ : 03.02.2016ರಂದು ನಡೆದ ಸಂಯುಕ್ತ ಸಹಕಾರಿಯ ಆಡಳಿತ ಮಂಡಲಿ ಸಭೆಯಲ್ಲಿ ಸೆವೆನ್ ಹಿಲ್ಸ್ ವಿವಿಧೋದ್ದೇಶ ಸೌಹಾರ್ದ ಸಹಕಾರಿ ನಿ., ಮಾಲೂರು (ಕೆಎಲ್‌ಆರ್–012) ಸಹಕಾರಿಯ ಪ್ರಸ್ತುತ ವಿಶೇಷಾಧಿಕಾರಿಯಾಗಿ ಕಾರ್ಯನಿರ್ವಹಿಸುತ್ತಿರುವ ಶ್ರೀ ವೈ.ಕುಮಾರ್, ಉಪಪ್ರಧಾನ ವ್ಯವಸ್ಥಾಪಕರು ಇವರನ್ನು ಬದಲಾಯಿಸಿ ಶ್ರೀ ಶ್ರೀಕಾಂತ, ಸಹ ಪ್ರಧಾನ ವ್ಯವಸ್ಥಾಪಕರು, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., 'ನಿರ್ಮಾಣ ಭವನ', ಡಾ.ರಾಜ್‌ಕುಮಾರ್ ರಸ್ತೆ, 1ನೇ ಬ್ಲಾಕ್, ರಾಜಾಜಿನಗರ, ಬೆಂಗಳೂರು ಇವರನ್ನು ನೇಮಕ ಮಾಡಲು ತೀರ್ಮಾನಿಸಲಾಗಿದೆ. ಇವರ ಅವಧಿಯು ದಿನಾಂಕ 09.11.2015ರ ಮೂಲ ಆದೇಶದ ಉಳಿದ ಅವಧಿಗೆ ಮುಂದುವರೆಯುತ್ತದೆ.

## ಪ್ರಾದೇಶಿಕ ಸಹಕಾರಿ ನಿರ್ವಹಣಾ ಸಂಸ್ಥೆ, ಬೆಂಗಳೂರು

(ರಾಷ್ಟ್ರೀಯ ಸಹಕಾರಿ ತರಬೇತಿ ಪರಿಷತ್‌ನ ಅಂಗ ಸಂಸ್ಥೆ)
**67, ಪದ್ಮನಾಭನಗರ, ಬನಶಂಕರಿ 2ನೇ ಹಂತ, ಬೆಂಗಳೂರು–560 070. ಇ–ಮೇಲ್ : ricmbangalore1962@gmail.com, ವೆಬ್‌ಸೈಟ್ : www.ricmbangalore.org ಫೋನ್:080–26692036/26690584 ಫ್ಯಾಕ್ಸ್ : 080–26692537**

**ತರಬೇತಿ ಪ್ರಕಟಣೆ : ಅರ್ಜಿಕೋರಿ ಮನವಿ**

### ಡಿಪ್ಲೋಮಾ ಇನ್ ಕೋ–ಆಪರೇಟಿವ್ ಬ್ಯಾಂಕಿಂಗ್ ಮ್ಯಾನೇಜ್‌ಮೆಂಟ್ (Correspondence Course)

1ನೇ ಅಧಿವೇಶನದ ತರಬೇತಿ ದಿನಾಂಕ : 21/04/2016 ರಿಂದ 13/07/2016ರವರೆಗೆ

ಪ್ರಾದೇಶಿಕ ಸಹಕಾರಿ ನಿರ್ವಹಣಾ ಸಂಸ್ಥೆ, ಬೆಂಗಳೂರು ಪ್ರಸಕ್ತ ಸಾಲಿನಿಂದ ಡಿಪ್ಲೋಮಾ ಇನ್ ಕೋ–ಆಪರೇಟಿವ್ ಬ್ಯಾಂಕಿಂಗ್ ಮ್ಯಾನೇಜ್‌ಮೆಂಟ್ (DCBM) ಮೊದಲನೇ ಅಧಿವೇಶನವನ್ನು ಕರೆಸ್ಪಾಂಡೆನ್ಸ್ ಮೂಲಕ ದಿನಾಂಕ 21/04/2016 ರಿಂದ 13/07/2016 ರವರೆಗೆ ಪ್ರಾರಂಭ ಮಾಡಲು ನಿರ್ಧರಿಸಲಾಗಿದೆ. ಸದರಿ ಡಿಪ್ಲೋಮಾ ಕೋರ್ಸ್‌ನ್ನು ಮಾನ್ಯ ಸಹಕಾರ ಸಂಘಗಳ ನಿಬಂಧಕರು ಮತ್ತು ತರಬೇತಿ ಕಾರ್ಯಕ್ರಮಗಳ ಸಲಹಾ ಸಮಿತಿಯ ಸದಸ್ಯರು ಈ ಕಾರ್ಯಕ್ರಮವನ್ನು ನಡೆಸಲು 30/11/2015ರಂದು ಮಂಜೂರಿ ನೀಡಿರುತ್ತಾರೆ.

ತರಬೇತಿ ಕಾರ್ಯಕ್ರಮದ ಅವಧಿ 12 ವಾರಗಳಾಗಿದ್ದು, ಈ ಕಾರ್ಯಕ್ರಮದಲ್ಲಿ ನೋಂದಾಯಿಸಲು ಸಹಕಾರ ಸಂಸ್ಥೆಗಳಲ್ಲಿ ಕನಿಷ್ಠ 3 ವರ್ಷ ಮತ್ತು ಅದಕ್ಕಿಂತ ಮೇಲ್ಪಟ್ಟು ಸೇವೆ ಸಲ್ಲಿಸಿದ ಅಧಿಕಾರಿಗಳು ಹಾಗೂ ಸಿಬ್ಬಂದಿ, ಪಿಯುಸಿ ಅಥವಾ 12ನೇ ತರಗತಿ ಮುಗಿಸಿದವರಿಗೆ ಈ ತರಬೇತಿಗೆ ಸೇರಲು ಅರ್ಹರಾಗಿರುತ್ತಾರೆ ಅಥವಾ ಯಾವುದೇ ವಿಶ್ವವಿದ್ಯಾನಿಲಯದಿಂದ ಯಾವುದೇ ವಿಷಯದಲ್ಲಿ ಪದವಿ ಪಡೆದ ಅಭ್ಯರ್ಥಿಗಳು ನೇರವಾಗಿ ಮೇಲ್ಕಂಡ ಡಿಪ್ಲೋಮಾಗೆ ಸೇರಿಕೊಳ್ಳಬಹುದು. ತರಬೇತಿ ಶುಲ್ಕ ರೂ.5,000/– + ಶೇ.14.5ರಷ್ಟು ಸೇವಾ ತೆರಿಗೆ ರೂ.725/– ಸೇರಿ ರೂ.5,725/– ಗಳನ್ನು ಪಾವತಿಸಬೇಕು. ಆಸಕ್ತ ಅಭ್ಯರ್ಥಿಗಳು ಅರ್ಜಿ ಮತ್ತು ಕಾರ್ಯಕ್ರಮದ ರೂಪರೇಷೆಗಳನ್ನು ಪಡೆಯಲು ರೂ.200/– ಅನ್ನು ನಗದು ಅಥವಾ ಡಿ.ಡಿ.ಯ ಮುಖಾಂತರ ನಿರ್ದೇಶಕರು, ಪ್ರಾದೇಶಿಕ ಸಹಕಾರಿ ನಿರ್ವಹಣಾ ಸಂಸ್ಥೆ, ಬೆಂಗಳೂರು ಇವರ ಹೆಸರಿಗೆ ಪಡೆದು ಕಳುಹಿಸಿ ಅರ್ಜಿಯನ್ನು ಪಡೆಯಬಹುದು ಮತ್ತು ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ 11/04/2016.

ಹೆಚ್ಚಿನ ಮಾಹಿತಿಗಾಗಿ ಡಾ.ಬಿ.ಕಿಶೋರ್, ಕಾರ್ಯಕ್ರಮದ ಸಮನ್ವಯಾಧಿಕಾರಿ (ಮೊಬೈಲ್ ನಂ.9483267268) ಇವರನ್ನು ಖುದ್ದಾಗಿ ಅಥವಾ ದೂರವಾಣಿ ಮೂಲಕ ಸಂಪರ್ಕಿಸಬಹುದು.


**ಬಿ.ವಸಂತ ನಾಯ್ಕ, ನಿರ್ದೇಶಕರು**

# ಅಧ್ಯಕ್ಷರು ಮತ್ತು ಉಪಾಧ್ಯಕ್ಷರುಗಳ ಆಯ್ಕೆ

## ಸಿದ್ಧಸಿರಿ ಪತ್ತಿನ ಸೌಹಾರ್ದ ಸಹಕಾರಿ ನಿ., ವಿಜಯಪುರ



ಶ್ರೀ ಬಸನಗೌಡ ರಾಮನಗೌಡ ಪಾಟೀಲ (ಯತ್ನಾಳ್)
(ವಿಧಾನ ಪರಿಷತ್ ಸದಸ್ಯರು)
ಅಧ್ಯಕ್ಷರು



ಶ್ರೀ ಬಿ ಶ್ರೀರಾಮುಲು
(ಸಂಸದರು, ಬಳ್ಳಾರಿ)
ಉಪಾಧ್ಯಕ್ಷರು

## ಶ್ರೀ ಸಾಯಿ ಚನ್ನಬಸವೇಶ್ವರ ಪತ್ತಿನ ಸೌಹಾರ್ದ ಸಹಕಾರಿ ನಿ., ಸಿಂಧನೂರು



ಶ್ರೀ ಲೋಕನಗೌಡ ಎಂ.
ಅಧ್ಯಕ್ಷರು



ಶ್ರೀ ದೊಡ್ಡನಗೌಡ
ಉಪಾಧ್ಯಕ್ಷರು

## ಸುಕೋ ಸೌಹಾರ್ದ ಸಹಕಾರಿ ಬ್ಯಾಂಕ್ (ನಿ), ಬಳ್ಳಾರಿ



ಶ್ರೀ ಮೋಹಿತ್ ಮಸ್ಕಿ
ಅಧ್ಯಕ್ಷರು



ಶ್ರೀ ಮುರಳೀಧರ ರೆಡ್ಡಿ
ಉಪಾಧ್ಯಕ್ಷರು

## ಕಲ್ಯಾಣ ಪತ್ತಿನ ಸೌಹಾರ್ದ ಸಹಕಾರಿ ನಿ., ಬೀದರ್



ಶ್ರೀ ಗುರುನಾಥ ಜಾಂತಿಕರ
ಅಧ್ಯಕ್ಷರು



ಶ್ರೀ ಬಸವರಾಜ ಸ್ವಾಮಿ
ಉಪಾಧ್ಯಕ್ಷರು

## ಸಿದ್ಧಿವಿನಾಯಕ ಸೌಹಾರ್ದ ಪತ್ತಿನ ಸಹಕಾರಿ ನಿ., ಕಲಬುರಗಿ



ಶ್ರೀ ಸಂಜೀವ ಎಸ್. ಮಹಾಜನ, ಅಧ್ಯಕ್ಷರು



ಶ್ರೀ ಸಿದ್ರಾಮಪ್ಪಾ ಎಸ್. ಪಾಟೀಲ, ಉಪಾಧ್ಯಕ್ಷರು

## ಶಾರದಾ ವಿವಿಧೋದ್ದೇಶ ಸೌಹಾರ್ದ ಸಹಕಾರಿ ನಿ., ಶಿವಮೊಗ್ಗ



ಶ್ರೀ ಶಿವಶಂಕರ್ ಹೆಚ್.ಎಸ್., ಅಧ್ಯಕ್ಷರು



ಶ್ರೀ ಶಿವಕುಮಾರ್ ಕೆ.ಆರ್., ಉಪಾಧ್ಯಕ್ಷರು

## ಗಾಯತ್ರಿ ಸೌಹಾರ್ದ ಸಹಕಾರಿ ನಿ., ಮೈಸೂರು



ಶ್ರೀ ಕೆ.ಆರ್.ಸತ್ಯನಾರಾಯಣ, ಅಧ್ಯಕ್ಷರು



ಶ್ರೀಮತಿ ಅನಸೂಯಚಂದ್ರಶೇಖರ್, ಉಪಾಧ್ಯಕ್ಷರು



ದಿ ಪಾವಗಡ ಸೌಹಾರ್ದ ಮಲ್ಟಿಪರ್ಪಸ್ ಕೋ–ಆಪರೇಟಿವ್ ಲಿ., ಕೋಲಾರ ಸಹಕಾರಿಯ 23ನೇ ಶಾಖೆಯು ಬೆಂಗಳೂರಿನ ದಾಸರಹಳ್ಳಿಯಲ್ಲಿ ಶ್ರೀ ಮುನಿರಾಜು, ಶಾಸಕರು, ದಾಸರಹಳ್ಳಿ ವಿಧಾನಸಭಾ ಕ್ಷೇತ್ರ ಇವರು ಉದ್ಘಾಟಿಸಿದರು. ಈ ಸಮಾರಂಭದ ಅಧ್ಯಕ್ಷತೆಯನ್ನು ಸಹಕಾರಿಯ ಸಂಸ್ಥಾಪಕ ಅಧ್ಯಕ್ಷರಾದ ಶ್ರೀ ಬಿ.ಹೆಚ್. ಕೃಷ್ಣಾರೆಡ್ಡಿಯವರು ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಸ್ಥಳೀಯ ಬಿಬಿಎಂಪಿ ಸದಸ್ಯರುಗಳಾದ ಶ್ರೀ ಕೆ.ನರಸಿಂಹ ನಾಯಕ, ಶ್ರೀ ಲೋಕೇಶ್, ಶ್ರೀಮತಿ ಉಮಾದೇವಿ, ಶ್ರೀಮತಿ ಸರ್ವಮಂಗಳ, ಶ್ರೀಮತಿ ಭಾಗ್ಯಮ್ಮರವರು ಉಪಸ್ಥಿತರಿದ್ದರು.

## ಸೈಂಟ್ ಮಿಲಾಗ್ರಿಸ್ ಕ್ರೆಡಿಟ್ ಸೌಹಾರ್ದ ಕೋ-ಆಪರೇಟಿವ್ ಲಿಮಿಟೆಡ್‌ನ ನೂತನ ಶಾಖೆಗಳು



ಮೂಡಬಿದ್ರೆ ಶಾಖೆ



ಚಿಕ್ಕಮಗಳೂರು ಶಾಖೆ

**ಮೂಡಬಿದ್ರೆ** : ಮೂಡಬಿದ್ರೆಯಲ್ಲಿ ದಿನಾಂಕ 25.01.2016ರಂದು ಫಾ। ಆಸ್ಟಿನ್ ಪಿಟರ್ ಪೆರೆಸ್‌ರವರ ಆಶೀರ್ವಚನ ಹಾಗೂ ಮೂಡಬಿದ್ರೆ ಪುರಸಭೆಯ ಅಧ್ಯಕ್ಷರಾದ ಶ್ರೀಮತಿ ರೂಪಾ ಎಸ್ ಶೆಟ್ಟಿಯವರಿಂದ ಉದ್ಘಾಟನೆ.

**ಬಳ್ಕೂರು** : ಬಳ್ಕೂರು ಶಾಖೆಯು ದಿನಾಂಕ 01.02.2016ರಂದು ಫಾ। ಮೈಕಲ್ ಪಿಂಟೊರವರಿಂದ ಉದ್ಘಾಟನೆ.

**ಮಿರ್ಜಾನ ಹಾಗೂ ಅವರ್ಸಾ** : ದಿನಾಂಕ 01.02.2016ರಂದು ಆವರ್ಸಾ ಶಾಖೆಯನ್ನು ಫಾ। ಬ್ರಿಟೊ ಡಿಸಿಲ್ವಾರವರಿಂದ ಹಾಗೂ ಮಿರ್ಜಾನ ಶಾಖೆಯನ್ನು ಫಾ। ಕಾನ್ಸಿಕಾವೊ ಪಿಂಟೊರವರಿಂದ ಉದ್ಘಾಟನೆ.

**ಚಿಕ್ಕಮಗಳೂರು** : ದಿನಾಂಕ 05.02.2016ರಂದು ಚಿಕ್ಕಮಗಳೂರಿನಲ್ಲಿ ಡಾ। ಥೋಮಸಪ್ಪ ಆಂತೋನಿ ಸ್ವಾಮಿಯವರಿಂದ ಉದ್ಘಾಟನೆ.


### Form IV (See Rule-8)

| | | |
|---|---|---|
| 1. Place of Publication | : | Bangalore |
| 2. Periodicity of its Publications | : | Monthly |
| 3. Printer's Name | : | Shakthi Printech,<br>#552/1, 7th Cross, IIIrd Main Rd, Prakashnagara, Lakshminarayanapura, Rajajinagara, Bengaluru, Karnataka - 560021 |
| Whether Citizen of India | : | Yes |
| If foreigner, State the country of origin | | |
| 4. Editor's Name | : | Sharangouda G. Patil |
| Whether Citizen of India | : | Yes |
| If foreigner, State the country of origin | | |
| Address | : | Karnataka State Souharada Federal Co operative Ltd.,<br>Nirman Bhavan complex, Dr. Rajkumar Road, 1st Block,<br>Rajajinagar, Bangalore-560 010 |
| 5. Name and Address of individuals who own the Newspaper and partners or share holders holding more than percent of the total capital | : | Managing Director,<br>Federal Co operative Ltd., Nirman Bhavan complex, Dr. Rajkumar Road,1st Block, Rajajinagar, Bangalore-560 010 |

I, Sharangouda G. Patil here by declare that the particulars given above are true to the best of my knowledge and belief.

**Date : 28-02-2014**

**Place : Bangalore**

**Sd/-**

**Signature of the Publisher / Editor**

## ನಿಮ್ಮ ಪ್ರಶ್ನೆ



## ನಮ್ಮ ಉತ್ತರ

– ಶ್ರೀಕಾಂತ ಬರುವೆ
ಸಹ ಪ್ರಧಾನ ವ್ಯವಸ್ಥಾಪಕರು,
ಕ.ರಾ.ಸೌ.ಸಂ.ಸ.ನಿ.,

ನಿಮ್ಮ ಪ್ರಶ್ನೆ – ನಮ್ಮ ಉತ್ತರ ಈ ಅಂಕಣವನ್ನು ಪ್ರತಿ ಸಂಚಿಕೆಯಲ್ಲಿ ಪ್ರಕಟಿಸಲು ನಿರ್ಧರಿಸಲಾಗಿದೆ. ಸೌಹಾರ್ದ ಸಹಕಾರಿಗಳು ತಮ್ಮ ದಿನನಿತ್ಯದ ಕಾರ್ಯಾಚರಣೆಯಲ್ಲಿ ಎದುರಿಸುವ ಸಮಸ್ಯೆಗಳ ಪರಿಹಾರಕ್ಕಾಗಿ ಅವುಗಳನ್ನು ಪ್ರಶ್ನೆಗಳ ರೂಪದಲ್ಲಿ ಸಂಯುಕ್ತ ಸಹಕಾರಿಗೆ ಲಿಖಿತವಾಗಿ ಕಳುಹಿಸಲು ಕೋರಿದೆ. ನಿಮ್ಮ ಪ್ರಶ್ನೆಗೆ ಸಂಯುಕ್ತ ಸಹಕಾರಿಯು ನೀಡಿದ ಉತ್ತರ ಬೇರೆ ಸೌಹಾರ್ದ ಸಹಕಾರಿಗಳಿಗೂ ಮಾರ್ಗದರ್ಶನವಾಗುತ್ತದೆ

– ಸಂಪಾದಕರು

**ವಿಪ್ರ ವಿವಿಧೋದ್ದೇಶ ಸೌಹಾರ್ದ ಸಹಕಾರಿ ನಿ., ಶಿವಮೊಗ್ಗ**

**1. ಒಂದು ಸಹಕಾರಿಯಲ್ಲಿ ಕೆಲಸ ನಿರ್ವಹಿಸುತ್ತಿರುವ ನೌಕರನು ಇನ್ನೊಂದು ಸಹಕಾರಿಯ ಆಡಳಿತ ಮಂಡಲಿಯಲ್ಲಿರಬಹುದೇ?**

ಉತ್ತರ: ಒಂದು ಸಹಕಾರಿಯಲ್ಲಿ ಕೆಲಸ ನಿರ್ವಹಿಸುವ ನೌಕರನು ಇನ್ನೊಂದು ಸಹಕಾರಿಯ ಆಡಳಿತ ಮಂಡಲಿಯ ಸದಸ್ಯನಾಗಬಹುದಾಗಿರುತ್ತದೆ. ಈ ಕುರಿತು ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ, 1997ರಲ್ಲಿ ಯಾವುದೇ ನಿಷೇಧವಿರುವುದಿಲ್ಲ.

**2. ವರ್ಷದ ಕೊನೆಯಲ್ಲಿ ಸ್ಥಿರ–ಚರಾಸ್ಥಿಗಳ ಮೇಲೆ ತೆಗೆಯುವ ಸವಕಳಿಯನ್ನು ವಾರ್ಷಿಕ ಬಜೆಟ್‌ನಲ್ಲಿ ಮಂಜೂರಾತಿಗೆ ಇಡಬೇಕೇ? ಬೇಡವೇ?**

ಉತ್ತರ: ಆದಾಯ ತೆರಿಗೆ ಅಧಿನಿಯಮ, 1961ರ ಕಲಂ 32 ರನ್ವಯ ಆರ್ಥಿಕ ವರ್ಷಾಂತ್ಯಕ್ಕೆ ಸ್ಥಿರ–ಚರ ಆಸ್ತಿಗಳ ಮೇಲೆ ಸವಕಳಿಯನ್ನು ತೆಗೆಯುವುದು ಕಡ್ಡಾಯವಾಗಿರುತ್ತದೆ. ಆದಾಗ್ಯೂ, ವಾರ್ಷಿಕ ಬಜೆಟ್‌ನಲ್ಲಿ ಸ್ಥಿರ–ಚರ ಆಸ್ತಿಗಳ ಮೇಲೆ ಸವಕಳಿಯ ತೆಗೆಯುವುದನ್ನು ಸೇರಿಸಿಕೊಂಡು ಆಡಳಿತ ಮಂಡಲಿ ಮತ್ತು ಸಾಮಾನ್ಯ ಸಭೆಯ ಅನುಮೋದನೆ ಪಡೆಯಬೇಕಾಗಿರುತ್ತದೆ

**3. ನಿಯಮ 20ರ ಪ್ರಕಾರ ಸಹಕಾರಿಗೆ ಯಾವುದೇ ಸದಸ್ಯತ್ವ ಪಡೆಯಲು ಚುನಾಯಿತ ಆಡಳಿತ ಮಂಡಲಿ ಅನುಮತಿ ಕಡ್ಡಾಯವೆಂದಿದೆ. ತುರ್ತಾಗಿ ವ್ಯವಹಾರ ನಡೆಸಲು ಬರುವ ಗ್ರಾಹಕರ ಬಗ್ಗೆ ಕಛೇರಿಯವರು ತೆಗೆದುಕೊಳ್ಳಬೇಕಾದ ಕ್ರಮವೇನು? ಉದಾ : ಬಂಗಾರ ಸಾಲ ಪಡೆಯುವ, ಠೇವಣಿ ಇಡುವ ಗ್ರಾಹಕರು.**

ಉತ್ತರ: ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ, 1997ರ ಕಲಂ 20(3) ರನ್ವಯ ಯಾವುದೇ ಒಬ್ಬ ವ್ಯಕ್ತಿಯನ್ನು ಸದಸ್ಯನನ್ನಾಗಿ ಸೇರಿಸಿಕೊಳ್ಳುವ ಅಧಿಕಾರ ಆಡಳಿತ ಮಂಡಲಿಗೆ ಇರುತ್ತದೆ. ಸಹಕಾರಿಯು ಯಾವುದೇ ವ್ಯವಹಾರವನ್ನಾಗಲೀ ಸದಸ್ಯರೊಂದಿಗೆ ಮಾತ್ರ ಮಾಡಬೇಕಿರುತ್ತದೆ. ಸದಸ್ಯೇತರರೊಂದಿಗೆ ವ್ಯವಹರಿಸಲು ಅವಕಾಶವಿರುವುದಿಲ್ಲ. ಆದರೆ, ಸಹಕಾರಿಗೆ ತುರ್ತಾಗಿ ವ್ಯವಹಾರ ನಡೆಸಲು ಆಗಮಿಸುವವರ ಸಂದರ್ಭದಲ್ಲೂ ಸಹ ಸದಸ್ಯರನ್ನಾಗಿಯೇ ಮಾಡಿಕೊಂಡು ವ್ಯವಹರಿಸಬೇಕಾಗುತ್ತದೆ. ಆದರೆ, ಸದಸ್ಯರನ್ನಾಗಿ ಮಾಡಿಕೊಳ್ಳಲು ಆಡಳಿತ ಮಂಡಲಿ ಸಭೆಯನ್ನು ಕರೆಯಲು ಸಮಯವಿರದಿರುವ ಕಾರಣ, ತುರ್ತಾಗಿ ವ್ಯವಹಾರ ನಡೆಸಲು ಆಗಮಿಸುವವರನ್ನು ಸದಸ್ಯರನ್ನಾಗಿ ಮಾಡಿಕೊಳ್ಳಲು ಆಡಳಿತ ಮಂಡಲಿಯಿಂದ ನಿರ್ಣಯದ ಮೂಲಕ ಅಧಿಕಾರವನ್ನು ಪಡೆದುಕೊಳ್ಳಬಹುದಾಗಿರುತ್ತದೆ ಮತ್ತು ಹಾಗೇ ಸೇರಿಸಿಕೊಂಡ ಸದಸ್ಯತ್ವಕ್ಕೆ ಮುಂಬರುವ ಆಡಳಿತ ಮಂಡಲಿ ಸಭೆಯಲ್ಲಿ ಅನುಮೋದನೆ ಪಡೆದುಕೊಳ್ಳಬಹುದಾಗಿರುತ್ತದೆ. ಅಲ್ಲದೇ, ಕರ್ನಾಟಕ ಸೌಹಾರ್ದ ಸಹಕಾರಿ ನಿಯಮಗಳು, 2004ರ ನಿಯಮ ಸಂಖ್ಯೆ:6ಇ ರನ್ವಯ ತುರ್ತು ಸಂದರ್ಭಗಳಲ್ಲಿ ಕನಿಷ್ಠ ಮೂರು ಸ್ಪಷ್ಟ ದಿನಗಳ ನೋಟೀಸು ನೀಡುವುದರ ಮೂಲಕ ಆಡಳಿತ ಮಂಡಲಿ ಸಭೆಯನ್ನು ಕರೆಯಬಹುದಾಗಿದ್ದು, ಈ ಪ್ರಾವಧಾನದನ್ವಯ ಆಡಳಿತ ಮಂಡಲಿ ಸಭೆಯನ್ನು ಕರೆದು ಸದಸ್ಯತ್ವ ಸೇರ್ಪಡೆ ಕುರಿತು ನಿರ್ಣಯ ಸ್ವೀಕರಿಸಬಹುದಾಗಿರುತ್ತದೆ. ಸಹಕಾರಿಯ ಮೂಲ ಆಶಯ ವ್ಯಕ್ತಿಯು ಸಾಕಷ್ಟು ಮುಂಚಿತವಾಗಿ ಸಹಕಾರಿಯ ಸದಸ್ಯತ್ವವನ್ನು ಪಡೆದುಕೊಂಡು ಅವಶ್ಯಕತೆಯಿದ್ದಾಗ ಸಹಕಾರಿಯು ನೀಡುವ ಸೇವೆಯನ್ನು ಪಡೆದುಕೊಳ್ಳುವುದಾಗಿರುತ್ತದೆಯೇ ಹೊರತು, ಸೇವೆ ಬೇಕೆನಿಸಿದಾಗ ಸದಸ್ಯತ್ವ ಪಡೆಯುವುದಾಗಿರುವುದಿಲ್ಲ.

**4. ಸಹಕಾರಿಯ ನೌಕರರಿಗೆ ಹುದ್ದೆ ಪ್ರಕಾರ ಕನಿಷ್ಠ ಗರಿಷ್ಠ ವೇತನ ಇದೆಯೇ? ಇದ್ದರೆ ಅದರ ವಿವರ ಕೊಡಿ.**

ಉತ್ತರ : ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ, 1997ರ ಕಲಂ 31(1)ರನ್ವಯ ಸಹಕಾರಿಯ ನೌಕರರ ವೇತನ ಶ್ರೇಣಿಯನ್ನು ಸಾಮಾನ್ಯ ನಿಕಾಯದ ಅನುಮೋದನೆಗೆ ಒಳಪಟ್ಟು ಮಂಡಲಿಯು ನಿರ್ಧರಿಸಬೇಕಿರುತ್ತದೆ. ಆದ್ದರಿಂದ ಸಹಕಾರಿಯ ನೌಕರರಿಗೆ ನೀಡಬೇಕಾದ ವೇತನಕ್ಕೆ ಗರಿಷ್ಠ ಮಿತಿ ಇರುವುದಿಲ್ಲ. ಸಹಕಾರಿಯ ಆರ್ಥಿಕ ಸ್ಥಿತಿಯನ್ನು ಗಮನದಲ್ಲಿಟ್ಟುಕೊಂಡು ಸಹಕಾರಿಯ ನೌಕರರಿಗೆ ನೀಡಬೇಕಾದ ವೇತನವನ್ನು ಆಡಳಿತ ಮಂಡಲಿಯು ನಿರ್ಧರಿಸಬೇಕಿರುತ್ತದೆ. ಆದರೆ, ಸಹಕಾರಿಗಳಿಗೂ ಸಹ ಕರ್ನಾಟಕ ಕನಿಷ್ಠ ವೇತನ ಅಧಿನಿಯಮ, 1948 ಅನ್ವಯವಾಗುತ್ತದೆ. ಸದರಿ ಅಧಿನಿಯಮದಡಿಯಲ್ಲಿ ಸರ್ಕಾರವು ಪ್ರತಿ ಆರ್ಥಿಕ ವರ್ಷದಲ್ಲಿ ಸಹಕಾರಿಯಲ್ಲಿನ ಆಯಾ ಹುದ್ದೆಗಳಲ್ಲಿನ ನೌಕರರಿಗೆ ನೀಡಬೇಕಾದ ಕನಿಷ್ಠ ವೇತನದ ಕುರಿತು ಅಧಿಸೂಚನೆಯನ್ನು ಹೊರಡಿಸುತ್ತದೆ. ಸದರಿ ಅಧಿಸೂಚನೆಯಲ್ಲಿ ತಿಳಿಸಿರುವ ಕನಿಷ್ಠ ವೇತನವನ್ನು ನೀಡುವುದು ಕಡ್ಡಾಯವಾಗಿರುತ್ತದೆ.

**5. ರಾಷ್ಟ್ರೀಯ ಬ್ಯಾಂಕ್‌ನಲ್ಲಿರುವಂತೆ, ಸಾಲ ನೀಡಿದಾಗ ಅದಕ್ಕೆ ವಿಮೆ ಮಾಡಿಸುವುದು ಹಾಗೂ ಗ್ರಾಹಕನಿಗೆ ಯಾವುದೇ ಅವಘಡ ಉಂಟಾದಾಗ ವಿಮೆಯಿಂದ ಸಾಲದ ಹಣ ಭರ್ತಿ ಮಾಡುವ ಯೋಜನೆ ನಮ್ಮ ಸಹಕಾರಿಗೆ ಗುಂಪು ವಿಮೆ ರೀತಿಯಲ್ಲಿ ಜಾರಿಕೊಡುವುದು ಸಾಧ್ಯವೇ?**

ಉತ್ತರ: ಪ್ರಸ್ತುತ ಸಹಕಾರಿಯು ನೀಡಿರುವ ಸಾಲಕ್ಕೆ ವಿಮೆಯನ್ನು ಹಲವು ಖಾಸಗಿ ಬ್ಯಾಂಕುಗಳು ಮತ್ತು ಕಂಪನಿಗಳು ಒದಗಿಸುತ್ತಿವೆ. ಈ ರೀತಿಯ ವಿಮೆಯನ್ನು ಒದಗಿಸುವ ಖಾಸಗಿ ಬ್ಯಾಂಕುಗಳು ಮತ್ತು ಕಂಪನಿಗಳ ಜೊತೆ ಚರ್ಚಿಸಿ, ಸಹಕಾರಿಯ ಆಡಳಿತ ಮಂಡಲಿಯಲ್ಲಿ ಈ ಕುರಿತು ನಿರ್ಣಯ ಸ್ವೀಕರಿಸಿ ಮುಂದುವರಿಯಬಹುದಾಗಿರುತ್ತದೆ.

**6. ಸಾಲ ನೀಡಿದಾಗ ವಸೂಲಾತಿ ಬಗ್ಗೆ ಸಹಕಾರಿಯು ಕ್ರಮ ಕೈಗೊಳ್ಳುವುದು. ಆದರೆ ಸಹಕಾರಿಯ ಜೊತೆ ಜಿಲ್ಲಾ ಮಟ್ಟದಲ್ಲಿ ಸಂಯುಕ್ತ ಸಹಕಾರಿಯಿಂದ ಯಾವುದೇ ಒಬ್ಬ ಅಧಿಕಾರಿಯ ಸಹಾಯ ಅಪೇಕ್ಷಿಸುತ್ತೇವೆ. ಜಿಲ್ಲಾ ಮಟ್ಟದಲ್ಲಿ ರಿಕವರಿ ಅಧಿಕಾರಿಯನ್ನು ನೇಮಕಮಾಡಲು ಸಾಧ್ಯವೇ?**

ಉತ್ತರ:ತಮ್ಮ ಸಲಹೆ ಉತ್ತಮವಾದುದು, ಈ ಕುರಿತು ಸಂಯುಕ್ತ ಸಹಕಾರಿಯ ಆಡಳಿತ ಮಂಡಲಿಯವರೊಂದಿಗೆ ಚರ್ಚಿಸಿ ಸೂಕ್ತ ಕ್ರಮವಿಡಲಾಗುವುದು.

■

ಸ್ವಾಭಿಮಾನಿ ಸಹಕಾರಿ



ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆಯ ಅಂಗವಾಗಿ ವಿಶೇಷ ಲೇಖನ



# ಮಹಿಳಾ ಸಹಕಾರಿಗಳಿಗೆ ಸಾಧನೆಯ ಸುವರ್ಣ ಅವಕಾಶ

ಶ್ರೀ ಶರಣಗೌಡ ಜಿ. ಪಾಟೀಲ್, ವ್ಯವಸ್ಥಾಪಕ ನಿರ್ದೇಶಕರು, ಕರಾಸೌಸಂಸನಿ., ಬೆಂಗಳೂರು.

ಸಹಕಾರ ಕ್ಷೇತ್ರಕ್ಕೆ 112 ವರ್ಷಗಳ ಇತಿಹಾಸ. ಅನೇಕ ಏರುಪೇರುಗಳನ್ನು ಅನುಭವಿಸಿ, ಇಂದು ಭಾರತದ ಅರ್ಥಪದ್ಧತಿಯ ಅವಿಭಾಜ್ಯ ಅಂಗವಾಗಿದೆ. ದೇಶದ ಜನರ ಜೀವನ ಪದ್ಧತಿಯಾಗಿದೆ. ನಮ್ಮ ದೇಶದ ಸಹಕಾರ ಚಳುವಳಿ ವಿಶ್ವದ ಅತ್ಯಂತ ಬಲಿಷ್ಠ ಹಾಗೂ ಬೃಹತ್ ಗಾತ್ರದ ಚಳುವಳಿಯಾಗಿ ಕಾರ್ಯನಿರ್ವಹಿಸುತ್ತಿದೆ. ಈ ದೇಶದಲ್ಲಿ ಹಸಿರು ಕ್ರಾಂತಿಯ ಹರಿಕಾರನಾಗಿ, ಶ್ವೇತ ಕ್ರಾಂತಿಯ ನೇತಾರನಾಗಿ, ದೇಶದ ಆಹಾರ ಉತ್ಪಾದನೆಯಲ್ಲಿ ಸ್ವಾವಲಂಬಿತ್ವವನ್ನು ಕಂಡುಕೊಳ್ಳಲು ನೆರವಾಗುವುದರ ಜೊತೆಗೆ ದೇಶದ ರೈತರ ಹಾಗೂ ಸಮಾಜದ ಕನಿಷ್ಠ ವ್ಯಕ್ತಿಯ ಆರ್ಥಿಕ ಅಭಿವೃದ್ಧಿಯ ಸಾಧನವಾಗಿ ಕಾರ್ಯನಿರ್ವಹಿಸುತ್ತಿರುವುದು ಹೆಮ್ಮೆಯ ವಿಷಯ.

ಆದರೆ, ಈ ಕ್ಷೇತ್ರದ ಸಾಧನೆ ನಿರೀಕ್ಷಿಸಿದ ಮಟ್ಟದಲ್ಲಿ ಆಗುತ್ತಿಲ್ಲ ಎಂಬುದು ಆರ್ಥಿಕ ತಜ್ಞರ ಹಾಗೂ ಸಹಕಾರಿ ಮುಖಂಡರ ಅಭಿಪ್ರಾಯ. ಇದಕ್ಕೆ ಕಾರಣಗಳು ಹಲವಾರು. ಅವುಗಳಲ್ಲಿ ಅತ್ಯಂತ ಮುಖ್ಯವಾದುದು ಮಹಿಳೆಯರ ಹಾಗೂ ಯುವಕರ ಸಕ್ರಿಯ ಪಾಲುಗಾರಿಕೆ ಇಲ್ಲದಿರುವುದು ಒಂದಾಗಿದೆ.

ಮಹಿಳೆಯರು ಸಮಾಜದ ಎಲ್ಲಾ ಕ್ಷೇತ್ರಗಳಲ್ಲೂ ಸಾಮಾಜಿಕವಾಗಿ, ಶೈಕ್ಷಣಿಕವಾಗಿ, ಆರ್ಥಿಕವಾಗಿ, ರಾಜಕೀಯವಾಗಿ, ವೈಜ್ಞಾನಿಕ ಕ್ಷೇತ್ರದಲ್ಲಿ, ಕೈಗಾರಿಕಾ ಕ್ಷೇತ್ರದಲ್ಲಿ, ಸುರಕ್ಷಾ ಕ್ಷೇತ್ರದಲ್ಲಿ ಹಾಗೂ ಆಡಳಿತ ವ್ಯವಸ್ಥೆಯಲ್ಲಿ ಪಾಲ್ಗೊಂಡು ಸಾಧನೆಗಳನ್ನು ಮಾಡಿರುವುದು ಎಲ್ಲರೂ ತಿಳಿಯಬೇಕಾದ ವಿಷಯ. ಆದರೆ, ಇದು ಬೆರಳೆಣಿಸುವಷ್ಟು, ಅಲ್ಲೊಂದು ಇಲ್ಲೊಂದು. ಈ ಪಾಲುಗಾರಿಕೆ ಸಾಲದೆಂದೆ ಸರಕಾರ ಪಂಚಾಯಿತಿ ರಾಜ್ ವ್ಯವಸ್ಥೆಯಲ್ಲಿ ಮಹಿಳೆಯರಿಗೆ ಮೀಸಲಾತಿ ಮುಖಾಂತರ ಅವಕಾಶ ಒದಗಿಸಲಾಗಿದೆ. ಅನೇಕ ಮಹಿಳೆಯರಿಗೆ ರಾಜಕೀಯದಲ್ಲಿ ಆಸಕ್ತಿ ಹುಟ್ಟಿದೆ. ಮಹಿಳಾ ಪ್ರತಿನಿಧಿಗಳಾಗಿ, ಅಧ್ಯಕ್ಷರಾಗಿ, ಉಪಾಧ್ಯಕ್ಷರಾಗಿ ಜಿಲ್ಲಾ ಪಂಚಾಯಿತಿ, ತಾಲ್ಲೂಕು ಪಂಚಾಯಿತಿ, ಗ್ರಾಮ ಪಂಚಾಯಿತಿ ಹಾಗೂ ನಗರ ಪಾಲಿಕಾ ಸದಸ್ಯರಾಗಿ ಕಾರ್ಯನಿರ್ವಹಿಸಲು ಅವಕಾಶವಾಗಿದೆ. ಮಹಿಳೆಯರು ಉನ್ನತ ಹುದ್ದೆಗಳನ್ನು ಅಲಂಕರಿಸುತ್ತಿದ್ದಾರೆ. ಮಹಿಳೆಯರು ಈ ಅವಕಾಶಗಳ ಸದುಪಯೋಗ ಮತ್ತು ಇನ್ನೊಬ್ಬ ಮಹಿಳೆಗೆ ಮಹಿಳೆಯರಿಂದಲೇ ಅವಕಾಶಗಳು ಒದಗುವಂತೆ ಮಾಡುವುದು ಇಂದಿನ ಅವಶ್ಯಕತೆ.

ಸಹಕಾರಿ ಕ್ಷೇತ್ರದಲ್ಲಿ ಮಹಿಳೆಯರು ಪಾಲ್ಗೊಳ್ಳುವಂತಾಗಲು 1977ರಲ್ಲಿ ಕರ್ನಾಟಕ ಸರಕಾರ ಸಹಕಾರ ಸಂಘಗಳ ಕಾಯ್ದೆಗೆ ತಿದ್ದುಪಡಿ ಮಾಡಿ, ಸಹಕಾರಿ ಸಂಸ್ಥೆಗಳ ಆಡಳಿತ ಮಂಡಲಿಯಲ್ಲಿ ಮಹಿಳೆಯರಿಗೆ ಒಂದು ಸ್ಥಾನವನ್ನು ಮೀಸಲಾಗಿರಿಸಲು ಅವಕಾಶ ಕಲ್ಪಿಸಲಾಯಿತು. ಇದರ ಪರಿಣಾಮವಾಗಿ ಅಂದಿನ ಅಂಕಿ ಸಂಖ್ಯೆಗಳ ಪ್ರಕಾರ 25000ಕ್ಕೂ ಹೆಚ್ಚು ಮಹಿಳೆಯರು ಸಹಕಾರಿ ಸಂಸ್ಥೆಗಳಲ್ಲಿ ನಿರ್ದೇಶಕರಾಗಿ ಕಾರ್ಯನಿರ್ವಹಿಸಲು ಸಾಧ್ಯವಾಗಿದೆ. ಮಹಿಳೆಯರಿಗೆ ಮನೆಯಿಂದ ಹೊರಗೆ ಬಂದು ಸಮಾಜದ ಅಭಿವೃದ್ಧಿಯಲ್ಲಿ ಪಾಲ್ಗೊಳ್ಳಲು ಅವಕಾಶವಾಗಿದೆ. ಭಾರತದ ಸಂವಿಧಾನದಲ್ಲಿ ಸಹಕಾರ ಸಂಘಗಳನ್ನು ಕಟ್ಟಿಕೊಳ್ಳುವುದು ಪ್ರತಿಯೊಬ್ಬ ಭಾರತೀಯನ ಹಕ್ಕು ಎಂದು ಹೇಳಿದ ಸಂವಿಧಾನ 97ನೇ ತಿದ್ದುಪಡಿ ಮೂಲಕ ಸಹಕಾರ ಸಂಸ್ಥೆಗಳ ಆಡಳಿತ ಮಂಡಲಿಯಲ್ಲಿ ಮಹಿಳೆಯರಿಗೆ 2 ಸ್ಥಾನಗಳನ್ನು ಕಡ್ಡಾಯವಾಗಿ ನೀಡಿದ್ದಾರೆ. ಇದರ ಪರಿಣಾಮವಾಗಿ ರಾಜ್ಯದ ಸಹಕಾರಿ ಕ್ಷೇತ್ರದಲ್ಲಿ 37000 ಸಹಕಾರಿ ಸಂಸ್ಥೆಗಳಲ್ಲಿ 74000 ಮಹಿಳೆಯರು ನಿರ್ದೇಶಕರಾಗಲು ಅವಕಾಶವಾಗಿದೆ. 3500ಕ್ಕೂ ಹೆಚ್ಚು ಸೌಹಾರ್ದ ಸಹಕಾರಿಗಳಲ್ಲಿ 7000ಕ್ಕೂ ಹೆಚ್ಚು ಮಹಿಳಾ ನಿರ್ದೇಶಕರು ಕಾರ್ಯನಿರ್ವಹಿಸಲು ಅವಕಾಶವಾಗಿದೆ. ಅನೇಕರು ಅಧ್ಯಕ್ಷರಾಗಿದ್ದಾರೆ, ಉಪಾಧ್ಯಕ್ಷರಾಗಿದ್ದಾರೆ. ಹೀಗಾಗಿ ಮಹಿಳೆಯರು ಈ ಸಹಕಾರ ಕ್ಷೇತ್ರದಲ್ಲಿ ಪಾಲ್ಗೊಳ್ಳಲು ಅವಕಾಶವಾಗಿದೆ. ಆದರೆ, ಈ ಅವಕಾಶವನ್ನು ಮಹಿಳೆಯರು ಉಪಯೋಗಿಸಿಕೊಳ್ಳುವುದು ಅತ್ಯಂತ ಅವಶ್ಯಕ.

ಸರಕಾರದ ಅನೇಕ ಯೋಜನೆಗಳು ಮಹಿಳೆಯರ ಆರ್ಥಿಕ ಅಭಿವೃದ್ಧಿಗಾಗಿ ಇವೆ ಎಂಬುದನ್ನು ಮಹಿಳಾ ಸಹಕಾರಿಗಳು ಅರಿತುಕೊಳ್ಳಬೇಕು. ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ, ಮಹಿಳಾ ಅಭಿವೃದ್ಧಿ ನಿಗಮ, ಸಮಾಜ ಕಲ್ಯಾಣ ಇಲಾಖೆಯ ಯೋಜನೆಗಳು, ಹಿಂದುಳಿದ ಅಭಿವೃದ್ಧಿ ನಿಗಮದ ಯೋಜನೆಗಳು ಇವುಗಳನ್ನು ಸಹಕಾರ ಸಂಸ್ಥೆಗಳ ಮೂಲಕ ಜಾರಿಗೊಳಿಸಬಹುದಾಗಿದೆ. ಮಹಿಳೆಯರಿಗೆ ಸರಕಾರದ ಎಲ್ಲಾ ಸವಲತ್ತುಗಳನ್ನು ಕೊಡಿಸುವ ಕಾರ್ಯದಲ್ಲಿ ಮಹಿಳಾ ನಿರ್ದೇಶಕರುಗಳು ಆಸಕ್ತಿ ವಹಿಸಿ, ಸಹಕಾರ ಸಂಸ್ಥೆಗಳ ಮೂಲಕ ಮಹಿಳೆಯರಿಗೆ ನೆರವು ಒದಗಿಸುವ ಕಾರ್ಯದಲ್ಲಿ ಮುಂದಾಗಬೇಕಿದೆ.

ಸೌಹಾರ್ದ ಸಹಕಾರಿ ಕ್ಷೇತ್ರದಲ್ಲಿ 3530ಕ್ಕೂ ಹೆಚ್ಚು ಸಹಕಾರಿ ಸಂಸ್ಥೆಗಳು ಕಾರ್ಯನಿರ್ವಹಿಸುತ್ತಿವೆ. ಅಂದರೆ 7060ಕ್ಕೂ ಹೆಚ್ಚು ಮಹಿಳಾ ನಿರ್ದೇಶಕರು ಕಾರ್ಯನಿರ್ವಹಿಸುತ್ತಿದ್ದಾರೆ. ಕೆಲವರು ಅಧ್ಯಕ್ಷರಾಗಿದ್ದಾರೆ. ಕೆಲವು ಮಹಿಳೆಯರದ್ದೇ ಆಗಿರುವ ಸೌಹಾರ್ದ ಸಹಕಾರಿಗಳಿವೆ. ಕೆಲವೇ ಮಾತ್ರ ಉತ್ತಮವಾಗಿ ಕಾರ್ಯನಿರ್ವಹಿಸುತ್ತಿದ್ದು, ಉಳಿದವುಗಳು ಉತ್ತಮವಾಗಿಲ್ಲ. ಇದಕ್ಕೆ ಕಾರಣ ಅವಕಾಶಗಳನ್ನು ನಮ್ಮ ಮಹಿಳೆಯರು ಸರಿಯಾಗಿ ಉಪಯೋಗಿಲು ಮುಂದೆ ಬರುತ್ತಿಲ್ಲವೆಂದು ಅರ್ಥೈಸಬಹುದು.

ಮಹಿಳಾ ಸಹಕಾರಿಗಳ ಮೂಲಕ ಮನೆಯಲ್ಲಿ ಅವರುಗಳುಗಳಿಗೆ ತಿಳಿದಿರುವ ವಸ್ತುಗಳನ್ನು ಸಿದ್ಧಪಡಿಸಲು ಹಣಕಾಸಿನ ಸೌಲಭ್ಯ ನೀಡಬಹುದು. ಅವರು ಸಿದ್ಧಪಡಿಸಿದ ವಸ್ತುಗಳಿಗೆ ಮಾರುಕಟ್ಟೆಯನ್ನು ಒದಗಿಸುವ ವ್ಯವಸ್ಥೆಯಲ್ಲಿ ಗ್ರಾಹಕರನ್ನು ಸಹ ಸಹಕಾರಿಗಳಿಗೆ ಪರಿಚಯಿಸುವ ಹಾಗೂ ಸಹಕಾರಿಯನ್ನು ಬಳಸಿಕೊಳ್ಳುವ ವ್ಯವಸ್ಥೆ ಮಾಡಬೇಕು. ಸಹಕಾರಿಯಲ್ಲಿ ಹಲವಾರು ಸಮೂಹ ಯೋಜನೆಗಳನ್ನು ಸಹಕಾರಿಯಿಂದಲೇ ಪ್ರಾರಂಭಿಸಿ, ಮಹಿಳೆಯರಿಗೆ ಅವರ ಬಿಡುವಿನ ವೇಳೆಯಲ್ಲಿ ಸಣ್ಣಪುಟ್ಟ ಕೆಲಸಗಳನ್ನು ಮಾಡಿಸಿದಾಗ ಅವರಿಗೆ ಆರ್ಥಿಕ ಸಹಾಯ ಒದಗಿಸಿದಂತಾಗುತ್ತದೆ. ಹಲವಾರು ಕರಕುಶಲ ತರಬೇತಿ ಕಾರ್ಯಕ್ರಮಗಳನ್ನು ಏರ್ಪಡಿಸಿ, ಮಹಿಳೆಯರು ಹೆಚ್ಚು ಭಾಗವಹಿಸುವಂತೆ ಪ್ರೇರೇಪಿಸುವುದು ಅತಿ ಮುಖ್ಯ.

ಇದು ಪ್ರಜಾಪ್ರಭುತ್ವ ವ್ಯವಸ್ಥೆ. ಎಲ್ಲರಿಗೂ ಸಮಾನ ಅವಕಾಶಗಳಿವೆ. ಯಾರ ಮೇಲೂ ಅವಲಂಬಿತರಾಗಬೇಡಿ. ಎಲ್ಲರ ನೆರವನ್ನು ಪಡೆಯಿರಿ. ಯಾರನ್ನೂ ಯಾರೂ ಸುಮ್ಮನೆ ದೂರಿಕೊಂಡು ನಮಗೆ ಅವಕಾಶಗಳೇ ಇಲ್ಲ ಎಂದು ಕೈಚೆಲ್ಲಿ ಕುಳಿತರೆ ಮಹಿಳಾ ಅಭಿವೃದ್ಧಿಯಾಗುವುದಿಲ್ಲ.

ಮುಂದಿನ ಪುಟಕ್ಕೆ...

# ಶ್ರೀ ಪ್ರಭುಲಿಂಗೇಶ್ವರ ಸೌಹಾರ್ದ ಕ್ರೆಡಿಟ್ ಕೋ-ಆಪರೇಟಿವ್ ಲಿಮಿಟೆಡ್, ಸಿದ್ದಾಪೂರ

**ನೊಂದಾಯಿತ ಕಛೇರಿ :ಜಗದೀಶ ಗುಡಗುಂಟಿಮಠ ವಾಣಿಜ್ಯ ಸಂಕೀರ್ಣ, 2ನೇ ಮಹಡಿ, ಉಮಾರಾಮೇಶ್ವರ ದೇವಸ್ಥಾನ ಹತ್ತಿರ**
**ಪೋಸ್ಟ್-ತಾಲ್ಲೂಕು: ಜಮಖಂಡಿ -587301 ಜಿ: ಬಾಗಲಕೋಟ**
**ಟೆಲಿ ಫ್ಯಾಕ್ಸ್ : 08353-221115 (099455-00680)** **ಇ ಮೇಲ್- shriprabhu2003@gmail.com**

## ಬೇಕಾಗಿದ್ದಾರೆ

ಬಾಗಲಕೋಟೆ, ಬೆಳಗಾವಿ, ವಿಜಯಪುರ ಹಾಗೂ ಧಾರವಾಡ ಜಿಲ್ಲೆಗಳ ಕಾರ್ಯವ್ಯಾಪ್ತಿ ಹೊಂದಿರುವ ಸಹಕಾರಿಗೆ ಈ ಕೆಳಗಿನ ಹುದ್ದೆಗಳಿಗಾಗಿ ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಅಹ್ವಾನಿಸಲಾಗಿದೆ.

| ಅ.ಸಂ. | ನೇಮಕಾತಿ ಹುದ್ದೆಯ ವಿವರ | ವಿದ್ಯಾರ್ಹತೆ ಹಾಗೂ ಅನುಭವ |
|---|---|---|
| 1 | **ಪ್ರಧಾನ ವ್ಯವಸ್ಥಾಪಕರು (General Manager) :** ಸಹಕಾರಿಯ ಆಡಳಿತ, ಹಣಕಾಸು, ಲೆಕ್ಕಪತ್ರ ಮತ್ತು ಹಣಕಾಸಿನ ನಿಯಂತ್ರಣಗಳ ಜವಾಬ್ದಾರಿಯನ್ನು ಯಶಸ್ವಿ ಹಾಗೂ ಪರಿಣಾಮಕಾರಿಯಾಗಿ ನಿರ್ವಹಿಸುವುದು ಹಾಗೂ ಇವತ್ತಿನ ಸ್ಪರ್ಧಾತ್ಮಕ ಯುಗದಲ್ಲಿ ಸಂಸ್ಥೆಯು ಸರ್ವತೋಮುಖ ಅಭಿವೃದ್ಧಿ ಹೊಂದಲು ವಿವಿಧ ರೀತಿಯ ಯೋಜನೆಗಳನ್ನು ರೂಪಿಸಿ ಅವುಗಳನ್ನು ಅನುಷ್ಠಾನಕ್ಕೆ ತರುವುದು. | ಎಂ.ಬಿ.ಎ (ಹಣಕಾಸು) ಅಥವಾ ಎಂ.ಕಾಂ., 10 ವರ್ಷಗಳ ಉನ್ನತ ಹುದ್ದೆಯಲ್ಲಿ ಕಾರ್ಯನಿರ್ವಹಿಸಿದ ಹಾಗೂ ಕಂಪ್ಯೂಟರ್ ಹಾಗೂ ಇ-ಬ್ಯಾಂಕ್ ಸಾಫ್ಟ್‌ವೇರ್‌ದಲ್ಲಿ ಅನುಭವ ಉಳ್ಳವರಾಗಿರಬೇಕು. |
| 2 | **ಉಪ ಪ್ರಧಾನ ವ್ಯವಸ್ಥಾಪಕರು (Dy. General Manager) :** ಸಹಕಾರಿಯ ಆಡಳಿತ, ಅಭಿವೃದ್ಧಿ, ಲೆಕ್ಕಪತ್ರ ಹಾಗೂ ಹಣಕಾಸಿನ ನಿಯಂತ್ರಣಗಳ ಜವಾಬ್ದಾರಿಯನ್ನು ಯಶಸ್ವಿ ಹಾಗೂ ಪರಿಣಾಮಕಾರಿಯಾಗಿ ನಿರ್ವಹಿಸುವುದು. | ಎಂ.ಬಿ.ಎ (ಹಣಕಾಸು) ಅಥವಾ ಎಂ.ಕಾಂ., 5 ವರ್ಷಗಳ ಉನ್ನತ ಹುದ್ದೆಯಲ್ಲಿ ಕಾರ್ಯ ನಿರ್ವಹಿಸಿದ ಹಾಗೂ ಕಂಪ್ಯೂಟರ್ ಹಾಗೂ ಇ-ಬ್ಯಾಂಕ್ ಸಾಫ್ಟ್‌ವೇರ್‌ದಲ್ಲಿ ಅನುಭವ ಉಳ್ಳವರಾಗಿರಬೇಕು. |
| 3 | **ಶಾಖೆಗಳ ವ್ಯವಸ್ಥಾಪಕರು :** ಶಾಖೆಯ ಆಡಳಿತ, ಹಣಕಾಸು ನಿಯಂತ್ರಣ, ಲೆಕ್ಕಪತ್ರ ಹಾಗೂ ಅಭಿವೃದ್ಧಿಯನ್ನು ನೋಡಿಕೊಳ್ಳುವುದು. ಜನ ಸಂಪರ್ಕದಲ್ಲಿ ಮುಂಚೂಣಿಯಲ್ಲಿ ಇರುವುದು, ಉತ್ಕೃಷ್ಟವಾದ ಸೇವೆಯನ್ನು ಸಹಕಾರಿಯ ಎಲ್ಲ ಸದಸ್ಯರಿಗೆ ಒದಗಿಸುವುದು. | ಎಂ.ಬಿ.ಎ (ಹಣಕಾಸು) ಅಥವಾ ಎಂ.ಕಾಂ., 5 ವರ್ಷಗಳ ಸಹಕಾರಿ ಸಂಸ್ಥೆಗಳಲ್ಲಿ ಅನುಭವ ಹೊಂದಿರಬೇಕು ಹಾಗೂ ಇ-ಬ್ಯಾಂಕ್ ಸಾಫ್ಟ್‌ವೇರ್‌ದಲ್ಲಿ ಜ್ಞಾನ ಹೊಂದಿದರವರಿರಬೇಕು. |
| 4 | ಐಟಿ ಸಹಾಯಕ | ಬಿ.ಕಾಂ ಮತ್ತು ಡಿಪ್ಲೋಮಾ (ಕಂಪ್ಯೂಟರ್ ಸೈನ್ಸ್) ಹಾಗೂ ಹಾರ್ಡ್‌ವೇರ್ ಮತ್ತು ನೆಟ್‌ವರ್ಕ್‌ದಲ್ಲಿ ಕನಿಷ್ಠ ಎರಡು ವರ್ಷಗಳ ಅನುಭವ ಹೊಂದಿದವರಿರಬೇಕು. |

1. ಅಭ್ಯರ್ಥಿಗಳು ತಮ್ಮ ಇತ್ತೀಚಿನ ಭಾವಚಿತ್ರದೊಂದಿಗೆ, ವಿದ್ಯಾರ್ಹತೆಯ ದೃಢೀಕೃತ ಪ್ರತಿಗಳೊಂದಿಗೆ ಹಾಗೂ ಅನುಭವ ಪ್ರಮಾಣಪತ್ರದೊಂದಿಗೆ ಪ್ರಕಟಣೆ ದಿನಾಂಕದಿಂದ 15 ದಿನಗಳ ಒಳಗೆ ಮೇಲಿನ ವಿಳಾಸಕ್ಕೆ ಅರ್ಜಿ ಸಲ್ಲಿಸಬೇಕು.
2. ಸಂದರ್ಶನಕ್ಕೆ ಹಾಜರಾಗುವ ಅಭ್ಯರ್ಥಿಗಳಿಗೆ ಬಂದು ಹೋಗುವ ರೈಲ್ವೆ/ ಬಸ್ ಪ್ರಯಾಣದ ವೆಚ್ಚಗಳನ್ನು ಕೊಡಲಾಗುವುದು.

**ಜಮಖಂಡಿ, 1 ನೇ ಮಾರ್ಚ್ 2016** **ಜಗದೀಶ ಗುಡಗುಂಟಿ, ಅಧ್ಯಕ್ಷರು ಹಾಗೂ ಸಂಸ್ಥಾಪಕರು**

....ಹಿಂದಿನ ಪುಟದಿಂದ

ಮನೆಯಿಂದ ಹೊರಗಡೆ ಬರಬೇಕು. ವಿಷಯಗಳ ಅಧ್ಯಯನ ಮಾಡಬೇಕು. ಯೋಜನೆಗಳನ್ನು ರೂಪಿಸಬೇಕು. ಅನುಷ್ಠಾನ ಮಾಡಬೇಕು. ಯಾರು ಪ್ರಬಲವಾಗಿ ಕಾರ್ಯನಿರ್ವಹಿಸುತ್ತಾರೋ ಅವರಿಗೆ ಸಾಧನೆ ಬೆನ್ನು ಹತ್ತಿ ಬರುತ್ತದೆ. ಈಗಾಗಲೇ ಸಾಧನೆ ಮಾಡಿರುವ ಎಲ್ಲಾ ಕ್ಷೇತ್ರದ ಹಲವಾರು ಮಹಿಳಾ ಸಾಧಕರ ಜೀವನವನ್ನು ಆದರ್ಶವನ್ನಾಗಿಸಿಕೊಂಡು, ಸಕಾರಾತ್ಮಕ ಮನೋಭಾವದಿಂದ ಕಾರ್ಯನಿರ್ವಹಿಸಿದರೆ, ಅವಕಾಶಗಳನ್ನು ಸರಿಯಾಗಿ ಉಪಯೋಗಿಸಿಕೊಂಡರೆ ಮಾತ್ರ ಮಹಿಳಾ ಅಭಿವೃದ್ಧಿ ಸಾಧ್ಯ. ಮಹಿಳೆಯರು ಮನಸ್ಸು ಮಾಡಿದರೆ ಏನು ಬೇಕಾದರೂ ಮಾಡಲು ಸಾಧ್ಯ. ಮಾಡಿದ ಅನೇಕ ಉದಾಹರಣೆಗಳಿವೆ. ಆದರೂ, ಸಾಧಿಸಿರುವುದು ಅಲ್ಪ. ಸಾಧಿಸಬೇಕಾದುದು ಮಹತ್ತು ಎಂಬುದನ್ನು ಮನಸ್ಸಿನಲ್ಲಿಟ್ಟುಕೊಂಡು ಇಂದೇ ಕಾರ್ಯಪ್ರವೃತ್ತರಾಗಿ.

ಮಾರ್ಚ್ 8 ಅಂತರಾಷ್ಟ್ರೀಯ ಮಹಿಳಾ ದಿನಾಚರಣೆ ಕೇವಲ ವಾರ್ಷಿಕ ಆಚರಣೆಯಾಗದಿರಲಿ. ಸಹಕಾರ ಮಹಿಳೆಯರ ಪಾಲುಗಾರಿಕೆ ಹೆಚ್ಚಾಗಲಿ, ಪಾಲುಗಾರಿಕೆ ಸಕ್ರಿಯವಾಗಿರಲಿ ಮಹಿಳೆಯರ ಆರ್ಥಿಕ ಹಾಗೂ ಸಾಮಾಜಿಕ ಅಭಿವೃದ್ಧಿಗೆ ಪೂರಕವಾಗಲಿ. ■

ಸ್ವಾಭಿಮಾನಿ ಸಹಕಾರಿ



# ಸಹಕಾರಿ ಕ್ಷೇತ್ರದಲ್ಲಿ ಕೌಶಲ್ಯಾಭಿವೃದ್ಧಿಯ ಅಗತ್ಯತೆ

ಶ್ರೀ ಬಿ.ಎ.ಮಹದೇವಪ್ಪ, ಸನ್ಮತಿ ಪ್ರತಿಷ್ಠಾನ, ಶಿವಮೊಗ್ಗ.

... ಕಳೆದ ಸಂಚಿಕೆಯಿಂದ

ಹಳೆಯದೊಂದು ಕತೆ ಇದೆ. ಇಟ್ಟಿಗೆ ಜೋಡಿಸುವ ಮೂರು ಮಂದಿಯದು. ಅದು ಅವರ ಚಿಂತನೆಗಳಿಗೆ ಸಂಬಂಧಿಸಿದ್ದು. ಅದನ್ನು ಇನ್ನೊಮ್ಮೆ ನೋಡೋಣ... "ನೀನೇನು ಮಾಡುತ್ತಿದ್ದೀಯೆ" ಎಂದು ಮೊದಲನೆ ಯವನನ್ನು ಕೇಳಿದಾಗ ಆತ ಉತ್ತರಿಸಿದ "ಇಟ್ಟಿಗೆ ಜೋಡಿಸುತ್ತಿದ್ದೇನೆ" ಎಂದು. ಅದೇ ಪ್ರಶ್ನೆಯನ್ನು ಎರಡನೆಯವನಿಗೆ ಕೇಳಿದಾಗ ಅವನು ಹೇಳಿದ "ಜೀವನ ನಡೆಯಬೇಕಲ್ಲ... ಕೂಲಿ ಕೆಲಸ ಮಾಡುತ್ತಿದ್ದೇನೆ" ಎಂದು. ಮೂರನೆಯವನು "ನಾನು ಸುಂದರವಾದ ದೇಗುಲವನ್ನು ಕಟ್ಟುತ್ತಿದ್ದೇನೆ" ಎಂದ. ಮೂರನೆಯವನು ಕೇವಲ ಇಟ್ಟಿಗೆ ಜೋಡಿಸುವವನಾಗಿ ಉಳಿಯಲಿಲ್ಲ. ಕಂಟ್ರಾಕ್ಟುದಾರನಾಗಿ, ಉನ್ನತ ಮಟ್ಟಕ್ಕೆ ಹೋದ. ಏಕೆಂದರೆ... ಆತನ ಮನಸ್ಸು ತನ್ನ ಕೆಲಸದಲ್ಲಿ ತನ್ನ ವಿಷಯದಲ್ಲಿ ಯಶಸ್ಸು ಸಾಧಿಸುವ ಆಲೋಚನೆಗಳಿಗೆ ತೆರೆದುಕೊಂಡಿತ್ತು. ಒಳ್ಳೆಯ ಆಲೋಚನೆ... ವೃತ್ತಿ ಕೌಶಲದ ಮತ್ತೊಂದು ಲಕ್ಷಣ.

ಒಂದು ಯಶಸ್ವಿ ಕಂಪೆನಿಯ ಮುಖ್ಯಸ್ಥರು ಹೇಳಿದ್ದು... "ನಾವು ಕೆಲಸಗಾರರನ್ನು ಪರಿಶೀಲಿಸುವಾಗ, ಮೊದಲನೆಯದಾಗಿ ಆ ನೌಕರನು ತನ್ನ ಈಗಿನ ಕೆಲಸದ ಬಗ್ಗೆ ಯಾವ ಭಾವನೆ ಹೊಂದಿದ್ದಾನೆಂಬುದನ್ನು ಗಮನಿಸುತ್ತೇವೆ. ತಮ್ಮ ಈಗಿನ ಕೆಲಸ ಮುಖ್ಯವಾದದ್ದು ಎಂದು ಎಣಿಸಿದರೆ ಅದು ಒಳ್ಳೆಯ ಸಂಕೇತ. ಅದರಲ್ಲಿ ಅವನಿಗೆ ಇಷ್ಟವಾಗದಿರುವ ಅನೇಕ ವಿಷಯಗಳಿರಬಹುದು. ಆದರೂ ಆತ ತನ್ನ ಕೆಲಸವನ್ನು ಮುಖ್ಯವಾದದ್ದು ಎಂದು ಭಾವಿಸಿದರೆ ಆತನ ಬಗ್ಗೆ ಒಳ್ಳೆಯ ಅಭಿಪ್ರಾಯ ಹೆಚ್ಚುತ್ತದೆ. ಇಂತಹ ಮನೋಭಾವದ ಕೆಲಸಗಾರರು... ವೃತ್ತಿ ಕೌಶಲಗಳನ್ನು ಹೊಂದಿರುತ್ತಾರೆ.

ಪ್ರತಿಯೊಬ್ಬ ಕೆಲಸಗಾರನು ನನ್ನ ಸಂಸ್ಥೆಯ ಕಾರ್ಯವ್ಯಾಪ್ತಿ ಯೇನು? ನನ್ನ ಸಂಸ್ಥೆ ಇನ್ನಷ್ಟು ಸಮರ್ಥವಾಗಲು ನಾನು ಏನು ಮಾಡಬೇಕು? ಅದು ಯಾವ ರೀತಿಯಲ್ಲಿ ಗ್ರಾಹಕರಿಗೆ ಸೇವೆ ಸಲ್ಲಿಸುತ್ತಿದೆ? ಈ ದಿನ ನನ್ನ ಕೆಲಸವನ್ನು ಇನ್ನೂ ಉತ್ತಮವಾಗಿ ಮಾಡಲು ಯಾವ ರೀತಿ ಸಾಧ್ಯ...? ನಾನು ಈ ದಿನ ನನ್ನ ಗ್ರಾಹಕರಿಗೆ ಯಾವ ರೀತಿಯ ಸೇವೆ ಕೊಡಬಲ್ಲೆ? ನನ್ನ ವೈಯಕ್ತಿಕ ಸಾಮರ್ಥ್ಯವನ್ನು ಹೆಚ್ಚಿಸಿಕೊಳ್ಳುವುದು ಹೇಗೆ? ನನ್ನ ಕೆಲಸದ ಗುಣಮಟ್ಟವನ್ನು ಹೇಗೆ ಇನ್ನಷ್ಟು ಉತ್ತಮಪಡಿಸಬಹುದು? ಇವೇ ಮುಂತಾದ ಪ್ರಶ್ನೆಗಳೊಂದಿಗೆ ಕೆಲಸ ಮಾಡಬೇಕು. ಇದು ವೃತ್ತಿ ಕೌಶಲತೆಯನ್ನು ಹೆಚ್ಚಿಸಿಕೊಳ್ಳಲು ಅನುವು ಮಾಡಿಕೊಡುತ್ತದೆ. ಇದರಿಂದಾಗಿ ಕೆಲಸದ ಬಗ್ಗೆ ಹೆಚ್ಚಿನ ಅರಿವು ಮೂಡುವುದಲ್ಲದೆ, ಪರಿಣಾಮಕಾರಿಯಾಗಿ ಕೆಲಸ ಮಾಡಲು ಸಾಧ್ಯವಾಗುತ್ತದೆ.

ಸಮಯಪಾಲನೆಯಿಂದ ಕೆಲಸಗಳಲ್ಲಿ ಏಕಾಗ್ರತೆ ಉಂಟಾಗುತ್ತದೆ; ಯಾವುದೇ ಕೆಲಸವನ್ನು ದಕ್ಷತೆಯಿಂದ ಮಾಡಬಲ್ಲೆ ಎಂಬ ಆತ್ಮವಿಶ್ವಾಸ ಬರುತ್ತದೆ; ಇದರಿಂದಾಗಿ ಕೆಲಸದ ಒತ್ತಡ ಕಡಿಮೆಯಾಗಿ ಸ್ವಯಂ ಶಿಸ್ತು ಮೂಡಿಬರುತ್ತದೆ. ಉತ್ತಮ ಸಂವಹನದಿಂದ ಪರಸ್ಪರ ತಿಳುವಳಿಕೆ ಹೆಚ್ಚಾಗುತ್ತದೆ. ಪರಸ್ಪರರಲ್ಲಿ ವಿಶ್ವಾಸ ಬೆಳೆಯುತ್ತದೆ. ಕೆಲಸ-ಕಾರ್ಯಗಳು ಸುಗಮವಾಗಿ ಆಗುತ್ತವೆ. ಮಾನವ ಸಂಬಂಧಗಳು ಉತ್ತಮಗೊಳ್ಳುತ್ತವೆ. ಒಬ್ಬರು ಮತ್ತೊಬ್ಬರನ್ನು ಅರ್ಥಮಾಡಿ ಕೊಳ್ಳುವುದಕ್ಕೆ... ಎಲ್ಲರೂ ಒಂದಾಗುವುದಕ್ಕೆ ಸಂವಹನವೇ ದಾರಿ. ಇದು ವೃತ್ತಿ ಕೌಶಲಗಳ ಪ್ರಮುಖ ಲಕ್ಷಣ.

ಇತರರನ್ನು ಕ್ರಿಯಾಶೀಲತೆಗೆ ಪ್ರೇರೇಪಿಸುವಿಕೆ, ಶಿಷ್ಟಾಚಾರದ ನಡೆ-ನುಡಿ, ಒತ್ತಡ ನಿರ್ವಹಣೆ, ಸೂಕ್ತ ನಿರ್ಧಾರ ಕೈಗೊಳ್ಳುವ ಚಾಕಚಕ್ಯತೆ ಇವೆಲ್ಲವೂ ವೃತ್ತಿ ಕೌಶಲಗಳ ಲಕ್ಷ ಣಗಳು. ನಮ್ಮ ಸುತ್ತಲಿನ ಜನರನ್ನು, ಅವರ ನಡೆ-ನುಡಿಗಳನ್ನು, ಅವರಲ್ಲಿ ನಡೆಯುವ ಸಂವಹನಾ ಕ್ರಿಯೆಗಳನ್ನು ಅರ್ಥಪೂರ್ಣವಾಗಿ ಗಮನಿಸುವುದು ಮತ್ತು ಗ್ರಹಿಸುವುದರಿಂದ ವೃತ್ತಿ ಕೌಶಲಗಳನ್ನು ರೂಪಿಸಿಕೊಳ್ಳಬಹುದಾಗಿದೆ.

ವೃತ್ತಿ ಕೌಶಲತೆಗೆ... ಯಾವಾಗಲೂ ರೆಡ್‌ಕಾರ್ಪೆಟ್-ವೆಲ್‌ಕಂ. ಏಕೆಂದರೆ ಎಲ್ಲಿ ನೋಡಿದರೂ ಸಾಕಷ್ಟು ಕೆಲಸಗಳಿವೆ. ಆದರೆ... ಸಮರ್ಥರಾದ ಕೆಲಸಗಾರರು ಸಾಕಷ್ಟಿಲ್ಲ. ಈ ಮಾತುಗಳು ಸಹಕಾರ ಕ್ಷೇತ್ರಕ್ಕೂ ಅನ್ವಯವಾಗುತ್ತವೆ. ಸಹಕಾರ ಕ್ಷೇತ್ರ ದೇಶದ ಸುಮಾರು 30 ಕೋಟಿ ಮಾನವ ಸಂಪನ್ಮೂಲವನ್ನು ಹೊಂದಿರುವ ಬಹಳ ವಿಶಾಲವಾದ ಕ್ಷೇತ್ರವಾಗಿದೆ. ಕೃಷಿ, ಬ್ಯಾಂಕಿಂಗ್, ಶಿಕ್ಷಣ, ಆರೋಗ್ಯ, ಸಾರಿಗೆ, ವಿದ್ಯುತ್, ಮಾರುಕಟ್ಟೆ ಸಂಸ್ಕರಣೆ, ಮೀನುಗಾರಿಕೆ, ಹೈನುಗಾರಿಕೆ, ಕ್ರೀಡೆ, ಗೃಹ ಕೈಗಾರಿಕೆ ಇವೇ ಮುಂತಾದ ಹತ್ತು-ಹಲವು ಕ್ಷೇತ್ರಗಳಲ್ಲಿ ಕೆಲಸ ಮಾಡುತ್ತಿರುವ ಸಹಕಾರ ಸಂಘಗಳು ಖಾಸಗಿ ಮತ್ತು ಸಾರ್ವಜನಿಕ ಕ್ಷೇತ್ರಗಳೊಂದಿಗೆ ಸರಿಸಮನಾಗಿ, ಉತ್ತಮ ಗುಣಮಟ್ಟದೊಂದಿಗೆ ಕಾರ್ಯ ನಿರ್ವಹಿಸಬೇಕಾದ ಅನಿವಾರ್ಯತೆ ಇರುವುದರಿಂದ, ದೃಢವಾದ ಸಂಘಟನಾ ವೃತ್ತಿ ಕೌಶಲಗಳನ್ನು ಅಳವಡಿಸಿಕೊಳ್ಳಬೇಕಾಗಿದೆ. ಈ ನಿಟ್ಟಿನಲ್ಲಿ ವೃತ್ತಿ ಕೌಶಲಕ್ಕೆ ಹೆಚ್ಚಿನ ಮಹತ್ವ ನೀಡುವ, ವೃತ್ತಿ ತರಬೇತಿಗಳನ್ನು ಹಮ್ಮಿಕೊಳ್ಳಬೇಕಾಗುತ್ತದೆ. ಕೌಶಲ ಭಾರತ ಯೋಜನೆ, ಮೇಕ್ ಇನ್ ಇಂಡಿಯಾ ಅಭಿಯಾನದ ಮೂಲಕ ಸಹಕಾರ ಸಂಘಗಳಿಗೆ ಅಗತ್ಯವಿರುವ ಕೌಶಲ ಹೊಂದಿದ ಕೆಲಸಗಾರರನ್ನು ಸಜ್ಜುಗೊಳಿಸಬೇಕಾಗಿದೆ. ಏಕೆಂದರೆ ಕಾರ್ಪೋರೇಟ್ ಗವರ್ನೆನ್ಸ್ ರೀತಿಯ ಆಡಳಿತವನ್ನು ನೀಡುವುದರ ಮೂಲಕ ಯಶಸ್ಸನ್ನು ಪಡೆಯಬೇಕಾದ ಸ್ಪರ್ಧಾಕಾಲದಲ್ಲಿ ನಾವಿದ್ದೇವೆ.

■



# RBI NEWS - FEBRUARY 2016

K.Vittal Shetty

**The first bi-monthly monetary policy statement for 2016-17 will be announced on Tuesday, April 5, 2016.**

Date : Feb 19, 2016

Scheduled Commercial Banks - Business in India

(□ Billion)

| Item | Outstanding as on Feb. 5, 2016 | Variation over | | | | |
|---|---|---|---|---|---|---|
| | | Fortnight | Financial year so far | | Year-on-Year | |
| | | | 2014-15 | 2015-16 | 2015 | 2016 |
| | 1 | 2 | 3 | 4 | 5 | 6 |
| **1 Aggregate Deposits** | **93,612.7** | **912.6** | **7,048.8** | **8,279.9** | **8,391.0** | **9,508.3** |
| 1a Growth (Per cent) | | 1.0 | 9.1 | 9.7 | 11.1 | 11.3 |
| 1.1 Demand | 8,500.6 | 288.3 | 345.7 | 560.3 | 692.8 | 1,015.7 |
| 1.2 Time | 85,112.1 | 624.3 | 6,703.2 | 7,719.5 | 7,698.2 | 8,492.5 |
| **2 Investments** | **27,626.8** | **501.3** | **3,007.7** | **2,708.5** | **2,827.0** | **2,490.9** |
| 1a Growth (Per cent) | | 1.8 | 13.6 | 10.9 | 12.7 | 9.9 |
| **3 Bank Credit** | **71,534.1** | **630.9** | **4,192.7** | **6,169.9** | **5,778.2** | **7,400.5** |
| 1a Growth (Per cent) | | 0.9 | 7.0 | 9.4 | 9.9 | 11.5 |

## I.IMPORTANT NEWS

**February 4, 2016:RTGS service charges for members and customers - Rationalisation**

The RTGS service charges would consist of monthly membership fee and processing charges per transaction, as follows:

**(i) Monthly Membership Fee :** The membership fee has been marginally enhanced and the new structure will be as follows:

| Type of Entities | Monthly Membership Fee (exclusive of service tax) |
|---|---|
| Scheduled Commercial Banks (SCB) | 5,000 |
| Banks other than SCBs, Primary Dealers, clearing entities, other special entities, etc. | 2,500 |

**(ii) Processing charge per transaction:** Every outward transaction will attract flat processing charge at the earlier cap of 0.50 (exclusive of service tax) and a time varying charge as under :

| Sr. no. | Time of Settlement at the Reserve Bank of India | | Time varying charge per outward transaction (in addition to flat processing charge) (exclusive of service tax) |
|---|---|---|---|
| | From | To | |
| 1 | 08:00 hours | 11:00 hours | Nil |
| 2 | After 11:00 hours | 13:00 hours | 2.00 |
| 3 | After 13:00 hours | 16:30 hours | 5.00 |
| 4 | After 16:30 hours | | 10.00 |

As there is no change in the minimum or maximum time varying charge, the maximum charges that can be recovered by a member (if it so desires) from its customers will remain unchanged as under :

| RTGS Transaction | Maximum Customer Charges (exclusive of service tax) |
|---|---|
| Inward transactions | Free |
| Outward transactions | |
| 2 lakh to 5 lakh | 25 + applicable time varying charge, subject to a maximum of 30/-. |
| Above 5 lakh | 50 + applicable time varying charge, subject to a maximum of 55/-. |

Members may please note that customers should not be charged for inward transaction, as hitherto.

RBI will calculate service charges on a monthly basis for each member and the amount will be debited from the current account of the respective member maintained with Deposit Accounts Department, RBI, Mumbai at the end of the month. The revised service charges for RTGS members will come into effect from April 1, 2016.

**Feb 05, 2016:- RBI releases 'Quarterly BSR-1: Outstanding Credit of Scheduled Commercial Banks, June 2015**

RBI released the web publication 'Quarterly BSR-1: Outstanding Credit of Scheduled Commercial Banks (SCBs), June 2015'. Under BSR-1, information on occupation/ activity and organisational sector of the borrower, type of account, interest rate, credit limit and amount outstanding are collected for each loan account. Such information is aggregated at the bank group, population group and state level using locational parameters of the reporting bank offices.

This web publication contains comprehensive data on gross bank credit of SCBs (other than RRBs), as on December 31, 2014, March 31, 2015 and June 30, 2015 along with comparable data as on March 31, 2014. The data can be accessed at the website: Database on Indian Economy (DBIE).

**February 11, 2016**

**Withdrawal of all old series of Banknotes issued prior to 2005**

It has been decided to extend the date for exchanging the pre-2005 banknotes to June 30, 2016. However, from January 01, 2016, such facility will only be available at

ಸ್ವಾಭಿಮಾನಿ ಸಹಕಾರಿ

Swabhimani Sahakari, Monthly, Posting Day 8th.
Posted at Bangalore PSO, Mysore Road, Bangalore 560026
Registered No. RNP/BGW/1744/2014-16. RNI No. KARBIL - 2004/18001. Pages 28

identified bank branches and Issue Offices of RBI.

Banks are advised to facilitate the exchange of such notes without causing any inconvenience to the public, whatsoever. These notes will retain their legal tender status.

**February 11, 2016**

**Basel III Framework on Liquidity Standards – Liquidity Coverage Ratio (LCR), Liquidity Risk Monitoring Tools and LCR Disclosure Standards**

Presently, the assets allowed as the Level 1 High Quality Liquid Assets (HQLAs) for the purpose of computing the LCR of banks, inter alia, include Government securities in excess of the minimum SLR requirement, and within the mandatory SLR requirement, Government securities to the extent allowed by RBI, under Marginal Standing Facility (MSF) [presently 2 per cent of the bank's NDTL] and under Facility to Avail Liquidity for Liquidity Coverage Ratio (FALLCR) [presently 5 per cent of the bank's NDTL].

It has been decided that henceforth, in addition to the above-mentioned assets, banks will be permitted to reckon government securities held by them up to another 3per cent of their NDTL under FALLCR within the mandatory SLR requirement as level 1 HQLA for the purpose of computing their LCR. Hence the total carve-out from SLR available to banks would be 10 per cent of their NDTL. For this purpose, banks should continue to value such reckoned government securities within the mandatory SLR requirement at an amount no greater than their current market value (irrespective of the category of holding the security, i.e., HTM, AFS or HFT).

**Date : Feb 16, 2016:- RBI to review Banks' Culture towards Customer Service**

RBI will soon undertake incognito visits to bank branches to check culture towards customer complaints in banks. It will also undertake a review of how banks have implemented Charter of Customer Rights.

**Feb 24, 2016:- RBI launches the March 2016 Round of Consumer Confidence Survey (CCS)**

RBI has launched March 2016 round of its Consumer Confidence Survey. The survey seeks qualitative responses on questions pertaining to economic conditions, income, spending, perceptions on prices, employment prospects from about 5,400 respondents across six metropolitan cities. The cities are Bengaluru, Chennai, Hyderabad, Kolkata, Mumbai and New Delhi. The results of this survey provide useful inputs for policy formulation. The Reserve Bank has been conducting Consumer Confidence Survey (CCS) on a quarterly basis since June 2010.

**Feb 25, 2016:- Comprehensive Master Directions on Know Your Customer (KYC)**

RBI issued the Master Direction on Know Your Customer (KYC), Anti-Money Laundering (AML) and Combating of Financing of Terrorism (CFT). The Master Direction consolidates all relevant instructions issued by different departments of the Reserve Bank so far on the subject and will be applicable to all its regulated entities.

The Master Directions consolidate instructions on rules and regulations framed by the Reserve Bank under various Acts including banking issues and foreign exchange transactions. The existing set of Master Circulars issued on various subjects will stand withdrawn with the issue of the Master Direction on the subject.

**II.Cancellation, Withdrawl, Penalties and Directions on Urban Co-operative Banks**

**RBI extends Directions issued to Dr. Babasaheb Ambedkar Nagari Sahakari Bank Maryadit, Aurangabad, Maharashtra till May 03, 2016.**

**RBI further extends Directions issued to Dilip Urban Co-operative Bank Ltd., Barshi, District-Solapur, Maharashtra till May 06, 2016.**

**RBI imposes Monetary Penalty of 5.00 lakh (Rupees Five Lakh only) on The Kutch Mercantile Co-operative Bank Ltd., Rapar, Dist. Kutch (Gujarat)**

**RBI imposes Monetary Penalty of 2.00 lakh (Rupees Two Lakh) on The Kapadwanj Peoples Co-operative Bank Ltd., Kapadwanj, Dist Kheda (Gujarat)**

**RBI extends Directions issued to Rupee Co-operative Bank Ltd., Pune, Maharashtra till August 21, 2016.**

**RBI imposes penalty of 5.00 lakh (Rupees Five Lakh only) on The Nasik Merchants Co-operative Bank Ltd., Nashik.**

**Source: www.rbi.org.in**

ಬೆಂಗಳೂರು ವಿಭಾಗೀಯ ಕಛೇರಿ : ನಂ. 141, 1ನೇ ಮೈನ್,1ನೇ ಕ್ರಾಸ್, ಡಾ.ರಾಜ್‌ಕುಮಾರ ರಸ್ತೆ, 1–ಕೆ ಬ್ಲಾಕ್, ರಾಜಾಜಿನಗರ, ಬೆಂಗಳೂರು.560 010. ದೂ: 080 – 23525546
ಮೈಸೂರು ವಿಭಾಗೀಯ ಕಛೇರಿ : ನಂ. 200, ಶಂಕರ ಮಠ ಮುಖ್ಯರಸ್ತೆ, ಕಿಲ್ಲೇ ಮೊಹಲ್ಲಾ, ಮೈಸೂರು. ದೂ : 0821 – 2332299
ಬೆಳಗಾವಿ ವಿಭಾಗೀಯ ಕಛೇರಿ : ಸಂಜೋಗ ಬಿಲ್ಡಿಂಗ್, ಪಿ ಅಂಡ್ ಟಿ ಕ್ವಾಟರ್ಸ್ ಹತ್ತಿರ, ಡಬ್ಬಲ್ ರೋಡ್, ಮಹಾಂತೇಶನಗರ, ಬೆಳಗಾವಿ. ದೂ : 0831 – 2401551
ಕಲಬುರಗಿ ವಿಭಾಗೀಯ ಕಛೇರಿಯ : ನಂ. 1–4/3 ಎ ಸಂಜೀವರಾವ್ ದೇಸಾಯಿ ಬಡಾವಣೆ, ಕೆ.ಎಸ್.ಆರ್.ಟಿ.ಸಿ. ಗೆಸ್ಟ್‌ಹೌಸ್ ಹಿಂಭಾಗ ಗಾರ್ಡನ್ ರಸ್ತೆ, ಕಲಬುರಗಿ – 585102. ದೂ. 08472 – 270222.

Edited, Printed and Published by Sharangouda G. Patil – Managing Director, on behalf of Karnataka State Souharada Federal Co operative Ltd., Nirman Bhavan complex, Dr. Rajkumar Road, 1st Block, Rajajinagar, Bangalore-560 010